# ಅಧ್ಯಾಯ ೩

## ಜನತೆ

ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ವಿವಿಧ ಜನವರ್ಗಗಳ ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಷಯಗಳನ್ನು ಕುರಿತ ಅಧ್ಯಯನಗಳು ಆಯಾ ವರ್ಗಗಳ ಸಾಂಸ್ಕೃತಿಕ ಗುಣಲಕ್ಷಣಗಳ ಮೇಲೆ ಬೆಳಕು ಚೆಲ್ಲುತ್ತವೆ. ಅಲ್ಲದೆ, ಆ ಪ್ರದೇಶವು ಆಧುನೀಕರಣದತ್ತ ಹೇಗೆ ಮುಖ ಮಾಡಿದೆ ಎಂಬುದರ ಸೂಚಿಯೂ ಆಗಿರುತ್ತವೆ. ಈ ದೃಷ್ಟಿಯಿಂದ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ನೀಡಲಾಗುವ ಜಿಲ್ಲೆಯ ಜನತೆಯನ್ನು ಕುರಿತ ಸಮೀಕ್ಷೆಯೂ ಅಧ್ಯಯನಾತ್ಮಕ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯ ವಿವಿಧ ಜಾತಿ, ಧರ್ಮಗಳ ಜನತೆಯನ್ನು ಕುರಿತಂತೆ ಅವರ ಜನಸಂಖ್ಯೆ, ಸ್ತ್ರೀ ಪುರುಷರ ಪ್ರಮಾಣ, ಭಾಷೆ, ವಲಸೆ ಪ್ರವೃತ್ತಿ, ವಿವಾಹ ಇತ್ಯಾದಿ ಜೀವನಾವರ್ತ ಸಂಸ್ಕಾರಗಳು, ಆಹಾರ ಪದ್ಧತಿ, ಹಬ್ಬ, ದೇವರು, ಜಾತ್ರೆ ಮೊದಲಾದ ಅಂಶಗಳನ್ನು ಕುರಿತು ಇಲ್ಲಿ ಸಮೀಕ್ಷಿಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ೧೧ ತಾಲೂಕುಗಳಿದ್ದು, ಅವುಗಳಲ್ಲಿ ೨,೮೮೯ ಜನವಸತಿ ಗ್ರಾಮಗಳು ಹಾಗೂ ೧೫ ನಗರ/ಪಟ್ಟಣಗಳಿದ್ದವು. ೨೦೦೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ ೨೫,೩೬,೦೬೯ ಆಗಿದ್ದು, ಅದರಲ್ಲಿ ೧೯,೧೦,೫೪೬ ಗ್ರಾಮೀಣ ಜನ ಸಂಖ್ಯೆಯಾಗಿದ್ದರೆ, ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದವರ ಸಂಖ್ಯೆ ೬,೨೫,೫೨೩ ಆಗಿದ್ದಿತು. ಕೋಷ್ಟಕ ೩.೧ರಲ್ಲಿ ನೀಡಿರುವ ತಾಲೂಕುವಾರು ಜನಸಂಖ್ಯಾ ವಿವರಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಗೌರಿಬಿದನೂರು ಅತಿ ಹೆಚ್ಚು ಗ್ರಾಮೀಣ ಜನಸಂಖ್ಯೆ (೨,೪೦,೫೮೭) ಹೊಂದಿರುವ ತಾಲೂಕಾಗಿದ್ದರೆ, ಬಂಗಾರಪೇಟೆಯು ಅತಿ ಹೆಚ್ಚು ನಗರ ಜನಸಂಖ್ಯೆ (೧,೯೫,೭೮೭) ಹೊಂದಿರುವ ತಾಲೂಕಾಗಿರುವುದು ವ್ಯಕ್ತವಾಗುತ್ತದೆ. ಹಾಗೆಯೇ, ೪,೨೧,೪೩೭ರಷ್ಟು ಜನಸಂಖ್ಯೆ ಇರುವ ಬಂಗಾರಪೇಟೆ ಇಡೀ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ತಾಲೂಕಾಗಿದ್ದರೆ, ಗುಡಿಬಂಡೆಯು ಅತಿ ಕಡಿಮೆ (೫೧,೮೨೮) ಜನಸಂಖ್ಯೆ ಇರುವ ತಾಲೂಕಾಗಿರುವುದು ಕಂಡುಬಂದಿದೆ. ೧೯೯೧ರ ಜನಗಣತಿಯಲ್ಲಿಯೂ ಈ ತಾಲೂಕುಗಳು ಜಿಲ್ಲೆಯಲ್ಲಿ ಅತಿ ಹೆಚ್ಚು (೩,೮೭,೮೩೦) ಹಾಗೂ ಅತಿ ಕಡಿಮೆ (೨೩,೩೦೬) ಜನಸಂಖ್ಯೆ ಹೊಂದಿ, ಇದೇ ಸ್ಥಾನಗಳನ್ನು ಹೊಂದಿದ್ದವು.

೨೦೦೧ರ ಗಣತಿಯಲ್ಲಿನ ಸ್ತ್ರೀಪುರುಷರ ಸಂಖ್ಯೆಯನ್ನು ಗಮನಿಸಿದರೆ, ಗೌರಿಬಿದನೂರು ಹಾಗೂ ಚಿಂತಾಮಣಿಗಳಲ್ಲಿ ಪುರುಷರ ಸಂಖ್ಯೆ ಬಹುಪಾಲು ಒಂದೇಆಗಿರುವುದು (ಕ್ರಮವಾಗಿ ೧,೩೮,೩೨೮ ಹಾಗೂ ೧,೩೮,೩೧೧) ವಿಶೇಷವೆನಿಸುತ್ತದೆ. ಈ ತಾಲೂಕುಗಳಲ್ಲಿನ ಮಹಿಳೆಯರ ಸಂಖ್ಯೆಗಳೂ ಪರಸ್ಪರ ಸಾಮೀಪ್ಯವಾಗಿವೆ (ಕ್ರಮವಾಗಿ ೧,೩೨,೬೯೧ ಹಾಗೂ ೧,೩೨,೯೭೩).

## ಕೋಷ್ಟಕ ೩.೧: ತಾಲೂಕುವಾರು ಜನಸಂಖ್ಯಾ ವಿವರ ೧೯೯೧, ೨೦೦೧

| | | ೧೯೯೧ | | | ೨೦೦೧ | | |
|---|---|---|---|---|---|---|---|
| ತಾಲೂಕು | | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ಕೋಲಾರ ಜಿಲ್ಲೆ | ಒಟ್ಟು | ೨೨,೧೬,೮೮೯ | ೧೧,೨೮,೩೧೬ | ೧೦,೮೮,೫೭೩ | ೨೫,೩೬,೦೬೯ | ೧೨,೮೬,೧೯೩ | ೧೨,೪೯,೮೭೬ |
| | ಗ್ರಾಮೀಣ | ೧೬,೯೯,೯೦೬ | ೮,೬೩,೫೮೫ | ೮,೩೬,೩೨೧ | ೧೯,೧೦,೫೪೬ | ೯,೬೮,೨೫೩ | ೯,೪೨,೨೯೩ |
| | ನಗರ | ೫,೧೬,೯೮೩ | ೨,೬೪,೭೩೧ | ೨,೫೨,೨೫೨ | ೬,೨೫,೫೨೩ | ೩,೧೭,೯೪೦ | ೩,೦೭,೫೮೩ |
| ಕೋಲಾರ | ಒ | ೨,೮೪,೦೭೯ | ೧,೪೪,೪೬೧ | ೧,೩೯,೬೧೮ | ೩,೪೨,೫೯೩ | ೧,೭೩,೯೧೩ | ೧,೬೮,೬೮೦ |
| | ಗ್ರಾ | ೨,೦೦,೭೯೨ | ೧,೦೧,೯೭೧ | ೯೮,೮೨೧ | ೨,೨೮,೬೮೬ | ೧,೧೫,೮೫೩ | ೧,೧೨,೮೩೩ |
| | ನ | ೮೩,೨೮೭ | ೪೨,೪೯೦ | ೪೦,೭೯೭ | ೧೧೩,೯೦೭ | ೫೮,೦೬೦ | ೫೫,೮೪೭ |
| ಗುಡಿಬಂಡೆ | ಒ | ೪೫,೮೨೧ | ೨೩,೩೦೬ | ೨೨,೫೧೫ | ೫೧,೮೨೮ | ೨೬,೧೫೯ | ೨೫,೬೬೯ |
| | ಗ್ರಾ | ೩೮,೨೫೮ | ೧೯,೪೬೬ | ೧೮,೭೯೨ | ೪೩,೦೨೧ | ೨೧,೭೫೮ | ೨೧,೨೬೩ |
| | ನ | ೭,೫೬೩ | ೩,೮೪೦ | ೩,೭೨೩ | ೮,೮೦೭ | ೪,೪೦೧ | ೪,೪೦೬ |
| ಗೌರಿಬಿದನೂರು | ಒ | ೨,೪೦,೧೧೫ | ೧,೨೩,೬೭೯ | ೧,೧೬,೪೩೬ | ೨,೭೧,೧೧೯ | ೧,೩೮,೩೨೮ | ೧,೩೨,೭೯೧ |
| | ಗ್ರಾ | ೨,೦೮,೦೮೪ | ೧,೦೬,೯೮೯ | ೧,೦೧,೦೯೫ | ೨,೪೦,೫೮೨ | ೧,೨೨,೭೫೬ | ೧,೧೭,೮೨೬ |
| | ನ | ೩೨,೦೩೧ | ೧೬,೬೯೦ | ೧೫,೩೪೧ | ೩೦,೫೩೭ | ೧೫,೫೭೨ | ೧೪,೯೬೫ |
| ಚಿಕ್ಕಬಳ್ಳಾಪುರ | ಒ | ೧,೬೯,೨೩೩ | ೮೬,೫೪೬ | ೮೨,೬೮೭ | ೧೯೧,೧೨೨ | ೯೭,೨೩೯ | ೯೩,೮೮೩ |
| | ಗ್ರಾ | ೧,೨೨,೦೧೨ | ೬೨,೨೧೬ | ೫೯,೭೯೬ | ೧೩೬,೧೫೪ | ೬೯,೨೯೬ | ೬೬,೮೫೮ |
| | ನ | ೪೭,೨೨೧ | ೨೪,೩೩೦ | ೨೨,೮೯೧ | ೫೪,೯೬೮ | ೨೭,೯೪೩ | ೨೭,೦೨೫ |
| ಚಿಂತಾಮಣಿ | ಒ | ೨,೩೫,೭೧೧ | ೧,೨೦,೩೭೮ | ೧,೧೫,೩೩೩ | ೨,೭೧,೨೮೪ | ೧,೩೮,೩೧೧ | ೧,೩೨,೯೭೩ |
| | ಗ್ರಾ | ೧,೮೫,೩೧೭ | ೯೪,೨೭೪ | ೯೧,೦೪೩ | ೨,೦೫,೭೯೧ | ೧,೦೪,೪೬೬ | ೧,೦೧,೩೨೫ |
| | ನ | ೫೦,೩೯೪ | ೨೬,೧೦೪ | ೨೪,೨೯೦ | ೬೫,೪೯೩ | ೩೩,೮೪೫ | ೩೧,೬೪೮ |
| ಬಾಗೇಪಲ್ಲಿ | ಒ | ೧,೪೫,೯೦೦ | ೭೪,೮೨೫ | ೭೧,೦೭೫ | ೧೬೯,೬೮೯ | ೮೬,೦೫೩ | ೮೩,೬೩೬ |
| | ಗ್ರಾ | ೧,೩೩,೫೬೪ | ೬೮,೩೮೨ | ೬೫,೧೮೨ | ೧೪೯,೫೭೦ | ೭೫,೬೧೮ | ೭೩,೯೫೨ |
| | ನ | ೧೨,೩೩೬ | ೬,೪೪೩ | ೫,೮೯೩ | ೨೦,೧೧೯ | ೧೦,೪೩೫ | ೯,೬೮೪ |
| ಬಂಗಾರಪೇಟೆ | ಒ | ೩,೮೭,೮೩೦ | ೧,೯೬,೧೨೦ | ೧,೯೧,೭೧೦ | ೪,೨೧,೪೩೭ | ೨,೧೨,೫೯೨ | ೨,೦೮,೮೪೫ |
| | ಗ್ರಾ | ೨,೦೧,೯೬೨ | ೧,೦೧,೭೯೯ | ೧,೦೦,೧೬೩ | ೨,೨೫,೬೫೦ | ೧,೧೪,೩೩೬ | ೧,೧೧,೩೧೪ |
| | ನ | ೧,೮೫,೮೬೮ | ೯೪,೩೨೧ | ೯೧,೫೪೭ | ೧,೯೫,೭೮೭ | ೯೮,೨೫೬ | ೯೭,೫೩೧ |
| ಮಾಲೂರು | ಒ | ೧,೭೩,೮೬೦ | ೮೮,೪೮೨ | ೮೫,೩೭೮ | ೨,೦೭,೦೦೯ | ೧,೦೫,೦೪೭ | ೧,೦೧,೯೬೨ |
| | ಗ್ರಾ | ೧,೫೨,೮೨೩ | ೭೭,೫೩೨ | ೭೫,೨೯೧ | ೧,೭೯,೧೯೪ | ೯೦,೮೮೦ | ೮೮,೩೧೪ |
| | ನ | ೨೧,೦೩೭ | ೧೦,೯೫೦ | ೧೦,೦೮೭ | ೨೭,೮೧೫ | ೧೪,೧೬೭ | ೧೩,೬೪೮ |
| ಮುಳಬಾಗಿಲು | ಒ | ೨,೦೨,೮೯೩ | ೧,೦೨,೩೬೩ | ೧,೦೦,೫೩೦ | ೨,೩೧,೩೦೨ | ೧,೧೬,೪೯೪ | ೧,೧೪,೮೦೮ |
| | ಗ್ರಾ | ೧,೬೭,೩೭೪ | ೮೪,೪೨೮ | ೮೨,೯೪೬ | ೧,೮೭,೨೬೯ | ೯೪,೧೮೧ | ೯೩,೦೮೮ |
| | ನ | ೩೫,೫೧೯ | ೧೭,೯೩೫ | ೧೭,೫೮೪ | ೪೪,೦೩೩ | ೨೨,೩೧೩ | ೨೧,೭೨೦ |
| ಶಿಡ್ಲಘಟ್ಟ | ಒ | ೧,೬೮,೨೫೧ | ೮೫,೧೫೨ | ೮೩,೦೯೯ | ೧೯೩,೯೬೫ | ೯೮,೪೨೬ | ೯೫,೫೩೯ |
| | ಗ್ರಾ | ೧,೪೩,೦೭೪ | ೭೨,೧೫೩ | ೭೦,೯೨೧ | ೧,೫೨,೮೬೭ | ೭೭,೨೭೬ | ೭೫,೫೯೧ |
| | ನ | ೨೫,೧೭೭ | ೧೨,೯೯೯ | ೧೨,೧೭೮ | ೪೧,೦೯೮ | ೨೧,೧೫೦ | ೧೯,೯೪೮ |
| ಶ್ರೀನಿವಾಸಪುರ | ಒ | ೧,೬೩,೧೯೬ | ೮೩,೦೦೪ | ೮೦,೧೯೨ | ೧,೮೪,೭೨೧ | ೯೩,೬೩೧ | ೯೧,೦೯೦ |
| | ಗ್ರಾ | ೧,೪೬,೬೪೬ | ೭೪,೩೭೫ | ೭೨,೨೭೧ | ೧,೬೧,೭೬೨ | ೮೧,೮೩೩ | ೭೯,೯೨೯ |
| | ನ | ೧೬,೫೫೦ | ೮,೬೨೯ | ೭,೯೨೧ | ೨೨,೯೫೯ | ೧೧,೭೯೮ | ೧೧,೧೬೧ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪುಲೇಶನ್ ಟೇಬಲ್ಸ್, ಪಾರ್ಟ್ II–ಎ, ಪು–೨೮೪–೨೮೮ ಹಾಗೂ ಜನಗಣತಿ ೨೦೦೧ ಸಿ.ಡಿ. ಆವೃತ್ತಿ, ಟೇಬಲ್–೧.

## ದಶವಾರ್ಷಿಕ ಜನಸಂಖ್ಯಾ ವ್ಯತ್ಯಾಸ

ಜನಸಂಖ್ಯೆಯಲ್ಲಿ ಕಾಲಕಾಲಕ್ಕೆ ಏರಿಳಿತವಾಗುವುದು ಸಾಮಾನ್ಯ ವಿದ್ಯಮಾನವಾಗಿದೆ. ೧೯೦೧ರಿಂದ ೧೯೯೧ರವರೆಗಿನ ದಶವಾರ್ಷಿಕ ಜನಸಂಖ್ಯಾ ವಿವರಗಳನ್ನು ಗಮನಿಸಿದಾಗ ಕೋಲಾರ ಜಿಲ್ಲೆಯ ಜನಸಂಖ್ಯೆಯಲ್ಲಿ ಪ್ರತೀ ದಶಕದಲ್ಲೂ ಹೆಚ್ಚಳವಾಗಿರುವುದು ಕಂಡುಬರುತ್ತದೆ. ರಾಜ್ಯದ ಜನಸಂಖ್ಯೆಯ ದಶಕದ ವ್ಯತ್ಯಾಸವು ೧೯೧೧ರಿಂದ ೧೯೨೧ರ ದಶಕದಲ್ಲಿ ಕಾರಣಾಂತರಗಳಿಂದ ಇಳಿಮುಖವಾಗಿದ್ದರೂ ಈ ಪ್ರವೃತ್ತಿ ಕೋಲಾರ ಜಿಲ್ಲೆಯಲ್ಲಿ ಕಂಡುಬಂದಿಲ್ಲ. ಆ ದಶಕದಲ್ಲಿ ಜಿಲ್ಲೆಯ ಜನಸಂಖ್ಯೆಯ ಏರಿಕೆಯ ಪ್ರಮಾಣ ೧.೫೭ರಷ್ಟಿದ್ದಿತು (ಆಗ ರಾಜ್ಯದ ಪ್ರಮಾಣ ೧.೦೯ರಷ್ಟು ಇಳಿಮುಖವಾಗಿದ್ದಿತು). ಆದರೆ, ೧೯೭೧ರಿಂದ ೧೯೮೧ರ ದಶಕದಲ್ಲಿನ ಏರಿಕೆ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ ೨೫.೬೪ರಷ್ಟು ಆಗಿದ್ದು, ಇದು ರಾಜ್ಯದ ಜನಸಂಖ್ಯಾ ಹೆಚ್ಚಳಕ್ಕಿಂತ (ಶೇ.೨೬.೭೫) ಸ್ವಲ್ಪ ಮಾತ್ರ ಕಡಿಮೆಯಾಗಿದ್ದಿತು. ೧೯೩೧ರಿಂದ ೧೯೮೧ರವರೆಗೆ ಜನಸಂಖ್ಯೆಯಲ್ಲಿ ಏರಿಕೆಯ ಗುಣ ಕಂಡುಬಂದರೆ, ಆ ಬಳಿಕ ಸಂಖ್ಯಾ ಬೆಳವಣಿಗೆಯಲ್ಲಿ ಇಳಿಕೆಯ ಗುಣ ಕಂಡುಬಂದಿದೆ. ಇದು ರಾಜ್ಯದ ಜನಸಂಖ್ಯಾ ವ್ಯತ್ಯಾಸದ ಪ್ರವೃತ್ತಿಗೆ ಅನುಗುಣವಾಗಿಯೇ ಇದೆ. ಕೋಷ್ಟಕ ೩.೨ರಲ್ಲಿ ೧೯೦೧ರಿಂದ ೨೦೦೧ರವರೆಗಿನ ಜಿಲ್ಲೆಯ ಜನಸಂಖ್ಯೆಯ ದಶವಾರ್ಷಿಕ ವ್ಯತ್ಯಾಸವನ್ನು ಶೇಕಡಾವಾರು ಅಂಕಿ–ಅಂಶಗಳೊಂದಿಗೆ ನೀಡಲಾಗಿದೆ. ರಾಜ್ಯದ ದಶಕದ ವ್ಯತ್ಯಾಸದ ಶೇಕಡಾಂಶವನ್ನು ಆವರಣದಲ್ಲಿ ತೋರಿಸಲಾಗಿದೆ:

**ಕೋಷ್ಟಕ ೩.೨**

| ವರ್ಷ | ಒಟ್ಟು ಜನಸಂಖ್ಯೆ | ದಶಕದ ವ್ಯತ್ಯಾಸ | ದಶಕದ ವ್ಯತ್ಯಾಸದ ಪ್ರತಿಶತ | ಪುರುಷರು | ಸ್ತ್ರೀಯರು |
|---|---|---|---|---|---|
| ೧೯೦೧ | ೭,೨೫,೦೭೨ | – | – | ೩,೬೮,೪೩೬ | ೩,೫೬,೬೩೬ |
| ೧೯೧೧ | ೭,೮೧,೬೧೭ | +೫೬,೫೪೫ | +೭.೮೦ (+೩.೬೦) | ೩,೯೭,೦೮೪ | ೩,೮೪,೫೩೩ |
| ೧೯೨೧ | ೭,೯೩,೮೭೮ | +೧೨,೨೬೧ | +೧.೫೭ (–೧.೦೯) | ೪,೦೫,೭೪೯ | ೩,೮೮,೧೨೯ |
| ೧೯೩೧ | ೮,೫೦,೭೨೩ | +೫೬,೮೪೫ | +೭.೧೬ (+೯.೩೮) | ೪,೩೫,೨೨೬ | ೪,೧೫,೪೯೭ |
| ೧೯೪೧ | ೯,೬೨,೯೧೬ | +೧,೧೨,೧೯೩ | +೧೪.೩೬ (+೧೧.೦೯) | ೪,೯೯,೧೦೫ | ೪,೬೩,೮೧೧ |
| ೧೯೫೧ | ೧೧,೨೯,೮೭೫ | +೧,೬೬,೯೫೯ | +೧೬.೧೩ (+೧೯.೩೬) | ೫,೭೨,೬೯೭ | ೫,೫೭,೧೭೮ |
| ೧೯೬೧ | ೧೨,೯೦,೧೪೪ | +೧,೬೦,೨೬೯ | +೧೪.೧೮ (+೨೧.೫೭) | ೬,೫೫,೬೪೫ | ೬,೩೪,೪೯೯ |
| ೧೯೭೧ | ೧೫,೧೬,೬೪೬ | +೨,೨೬,೫೦೩ | +೧೭.೫೬ (+೨೪.೨೨) | ೭,೭೩,೨೯೩ | ೭,೪೩,೩೫೩ |
| ೧೯೮೧ | ೧೯,೦೫,೪೯೨ | +೩,೮೮,೮೪೬ | +೨೫.೬೪ (+೨೬.೭೫) | ೯,೬೬,೬೫೩ | ೯,೩೮,೮೩೯ |
| ೧೯೯೧ | ೨೨,೧೬,೮೮೯ | +೩,೧೧,೩೯೭ | +೧೬.೩೪ (+೨೧.೧೨) | ೧೧,೨೮,೩೧೬ | ೧೦,೮೮,೫೭೩ |
| ೨೦೦೧ | ೨೫,೩೬,೦೬೯ | +೩,೧೯,೧೮೦ | + ೧೪.೩೯(+೧೭.೫೦) | ೧೨,೮೬,೧೯೩ | ೧೨,೪೯,೮೭೬ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪುಲೇಶನ್ ಟೇಬಲ್ಸ್, ಪಾರ್ಟ್II–ಎ ಪು.೪೧೩,೪೧೭ ಹಾಗೂ ಜನಗಣತಿ ೨೦೦೧

## ಜನಸಾಂದ್ರತೆ

ಒಂದು ಚಕಿ.ಮೀ. ಪ್ರದೇಶದಲ್ಲಿ ವಾಸಿಸುವ ಜನಸಂಖ್ಯೆಯ ಸರಾಸರಿಯನ್ನು ಅಲ್ಲಿನ 'ಜನಸಾಂದ್ರತೆ'ಯಾಗಿ ಪರಿಗಣಿಸಲಾಗುತ್ತದೆ. ಜನಸಾಂದ್ರತೆಯ ಪ್ರಮಾಣವು ಹಲವು ಕಾರಣಗಳಿಂದ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಹೊಂದುತ್ತದೆ. ಆದರೆ, ಯಾವುದೇ ನಗರ ಪ್ರದೇಶದ ಜನಸಾಂದ್ರತೆಯು ಗ್ರಾಮಾಂತರ ಪ್ರದೇಶದ ಜನಸಾಂದ್ರತೆಗಿಂತ ಹೆಚ್ಚಾಗಿರುವುದು ಸಹಜವೇ ಆಗಿರುತ್ತದೆ. ೧೯೯೧ರ ಜನಗಣತಿಯಂತೆ ಕೋಲಾರ ಜಿಲ್ಲೆಯ ಜನಸಾಂದ್ರತೆಯು ೨೭೭ ಆಗಿದ್ದು, ಇದು ರಾಜ್ಯದ ಜನಸಾಂದ್ರತೆ (೨೩೫)ಗಿಂತ ಅಧಿಕವಾಗಿದೆ. ಕೋಲಾರ ಜಿಲ್ಲೆಯ ನಗರ ಪ್ರದೇಶದ ಜನಸಾಂದ್ರತೆಯು ೪,೫೬೬ ಆಗಿದ್ದರೆ, ಗ್ರಾಮೀಣ ಜನಸಾಂದ್ರತೆಯು ಕೇವಲ ೨೧೧ ಆಗಿದೆ. ಇವು ಎರಡೂ ರಾಜ್ಯದ ನಗರ (೩,೨೫೭) ಹಾಗೂ ಗ್ರಾಮೀಣ (೧೬೬) ಜನಸಾಂದ್ರತೆಯ ಪ್ರಮಾಣಕ್ಕಿಂತ ಅಧಿಕವಾಗಿಯೇ ಇವೆ. ತಾಲೂಕುವಾರು ಒಟ್ಟು ಜನಸಾಂದ್ರತೆಯ ಪ್ರಕಾರ ಬಂಗಾರಪೇಟೆಯು ಇಡೀ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ (೪೪೯)ದಲ್ಲಿದ್ದರೆ, ಕೋಲಾರ (೩೫೮) ಹಾಗೂ ಮಾಲೂರುಗಳು (೨೭೭) ನಂತರದ ಸ್ಥಾನಗಳಲ್ಲಿ ಬರುತ್ತವೆ. ಈ ತಾಲೂಕುಗಳು ಕೈಗಾರಿಕೆ ಹಾಗೂ ಕೃಷಿಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿರುವುದು ಇದಕ್ಕೆ ಕಾರಣವಾಗಿರಬಹುದು. ವಿಶೇಷವೆಂದರೆ

ಜಿಲ್ಲೆಯಲ್ಲಿ ಹೆಚ್ಚು ವಿಸ್ತೀರ್ಣವಾಗಿರುವ ಬಾಗೇಪಲ್ಲಿ ತಾಲೂಕು (೯೩೨.೭೧ ಚ.ಕಿ.ಮೀ.) ಜಿಲ್ಲೆಯಲ್ಲಿಯೇ ಅತ್ಯಂತ ಕಡಿಮೆ ಜನಸಾಂದ್ರತೆ (೧೫೬) ಹೊಂದಿದೆ. ಗುಡಿಬಂಡೆಯು ಅತಿ ಕಡಿಮೆ ವಿಸ್ತೀರ್ಣದ ನಗರ ಪ್ರದೇಶ(೦.೬೪ಚ.ಕಿ.ಮೀ)ವಾಗಿದ್ದರೂ ಜನಸಾಂದ್ರತೆಯಲ್ಲಿ (೧೧,೮೧೭) ಅದು ಕೋಲಾರ ಜಿಲ್ಲಾ ಕೇಂದ್ರವನ್ನೂ (೧೦,೨೫೯) ಮೀರಿಸಿರುವುದು ಗಮನಾರ್ಹವಾಗಿದೆ. ಕೋಷ್ಟಕ ೩.೩ರಲ್ಲಿ ಜಿಲ್ಲೆಯ ಗ್ರಾಮೀಣ ಮತ್ತು ನಗರಪ್ರದೇಶಗಳ ಜನಸಾಂದ್ರತೆಯನ್ನು ತಾಲೂಕುವಾರು ನೀಡಲಾಗಿದೆ:

**ಕೋಷ್ಟಕ ೩.೩: ಜನಸಾಂದ್ರತೆ**

| | ೧೯೯೧ | | |
|---|---|---|---|
| **ತಾಲೂಕು** | **ಗ್ರಾಮ** | **ನಗರ** | **ಒಟ್ಟು** |
| **ಕೋಲಾರ** | ೨೫೬ | ೧೦೫೯ | ೩೫೮ |
| **ಗುಡಿಬಂಡೆ** | ೧೯ | ೧೧೮೧೭ | ೨೦೨ |
| **ಗೌರಿಬಿದನೂರು** | ೨೩೬ | ೨೨೧೮ | ೨೬೮ |
| **ಚಿಕ್ಕಬಳ್ಳಾಪುರ** | ೧೯೨ | ೫೫೫೫ | ೨೬೩ |
| **ಚಿಂತಾಮಣಿ** | ೨೦೯ | ೮೯೮೩ | ೨೬೪ |
| **ಬಾಗೇಪಲ್ಲಿ** | ೧೪೪ | ೫೩೪೦ | ೧೫೬ |
| **ಬಂಗಾರಪೇಟೆ** | ೨೫೨ | ೯೪೭ | ೪೪೯ |
| **ಮಾಲೂರು** | ೨೫೮ | ೬೭೬೪ | ೨೭೦ |
| **ಮುಳಬಾಗಿಲು** | ೨೦೪ | ೯೩೭ | ೨೪೬ |
| **ಶಿಡ್ಲಘಟ್ಟ** | ೨೧೬ | ೧೪೦೨ | ೨೫೩ |
| **ಶ್ರೀನಿವಾಸಪುರ** | ೧೮೧ | ೮೯೯೫ | ೧೯೦ |
| **ಜಿಲ್ಲೆಯ ಒಟ್ಟು** | ೨೧೦ | ೪೫೬ | ೨೭೦ |

(೨೦೦೧ರ ಅಂಕಿ–ಅಂಶಗಳು ಜನಗಣತಿ ಇಲಾಖೆಯಿಂದ ಇನ್ನೂ ಪ್ರಕಟವಾಗಿರುವುದಿಲ್ಲ)

ಆಧಾರ: ಸೆನ್ಸಸ್ ಆಫ್ ಇಂಡಿಯಾ, ೧೯೯೧, ಜನರಲ್ ಪಾಪುಲೇಶನ್ ಟೇಬಲ್ಸ್ ಭಾಗ–IIಎ. ಪುಟ ೨೮೪–೨೮೫

## ವಾಸದ ಮನೆಗಳು ಮತ್ತು ಕುಟುಂಬಗಳು

ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬ ವಾಸಿಸುತ್ತಿರುವ ಪೂರ್ಣ ಅಥವಾ ಭಾಗಶಃ ಕಟ್ಟಡವನ್ನು "ವಾಸದ ಮನೆ' ಎಂದು ಜನಗಣತಿಯಲ್ಲಿ ಪರಿಗಣಿಸಲಾಗುತ್ತದೆ. ಹಾಗೆಯೇ, ಒಬ್ಬ ಅಥವಾ ಒಬ್ಬನಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುವ, ಒಂದೇ ಅಡುಗೆಮನೆಯಲ್ಲಿ ಸಿದ್ಧಪಡಿಸಿದ ಆಹಾರವನ್ನು ಊಟ ಮಾಡುವ ಜನ ಸಮೂಹವನ್ನು ಕುಟುಂಬ ಎಂದು ಪರಿಗಣಿಸಲಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ೩,೯೭,೪೬೨ ವಾಸದ ಮನೆಗಳಿದ್ದು, ಅವುಗಳಲ್ಲಿದ್ದ ಕುಟುಂಬಗಳ ಸಂಖ್ಯೆ ೩,೯೯,೭೦೯ ಆಗಿದ್ದಿತು. ಆದರೆ, ೨೦೦೧ರ ಜನಗಣತಿ ಹೊತ್ತಿಗೆ ವಾಸದ ಮನೆಗಳ ಸಂಖ್ಯೆ ೫,೦೪,೧೮೫ರಷ್ಟಾಗಿದೆ. ಅಂದರೆ, ೧,೦೬,೭೨೩ ಮನೆಗಳು ಜಿಲ್ಲೆಯಲ್ಲಿ ಹೆಚ್ಚಾಗಿವೆ. ಇವುಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ವಾಸದ ಮನೆಗಳ ಹೆಚ್ಚಳ ೭೪,೨೮೬ ಆದರೆ, ನಗರಪ್ರದೇಶಗಳ ವಾಸದ ಮನೆಗಳ ಹೆಚ್ಚಳ ೩೨,೪೩೭ ಮಾತ್ರ ಆಗಿರುತ್ತದೆ. ೨೦೦೧ರ ಜನಗಣತಿಯಂತೆ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ, ಬಂಗಾರಪೇಟೆಯು ಅತಿ ಹೆಚ್ಚು ವಾಸದ ಮನೆಗಳನ್ನು (೮೧,೭೨೮) ಹೊಂದಿದ ತಾಲೂಕಾಗಿದ್ದರೆ, ಕೋಲಾರ (೬೫,೯೭), ಗೌರಿಬಿದನೂರು (೫೯,೪೦೦) ಹಾಗೂ ಚಿಂತಾಮಣಿ (೫೪,೪೬೦) ತಾಲೂಕುಗಳು ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೆಯ ಸ್ಥಾನದಲ್ಲಿದ್ದು, ಗುಡಿಬಂಡೆಯು ಅತಿ ಕಡಿಮೆ (೧೦,೯೭೫) ವಾಸದ ಮನೆಗಳನ್ನು ಹೊಂದಿದ ತಾಲೂಕಾಗಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗಣತಿಯಾದ ವಾಸದ ಮನೆಗಳು ಹಾಗೂ ಅವುಗಳಲ್ಲಿನ ಕುಟುಂಬಗಳ ಸಂಖ್ಯೆಯನ್ನು ಕೋಷ್ಟಕ ೩.೪ರಲ್ಲಿ ನೀಡಲಾಗಿದೆ (೨೦೦೧ರ ಜನಗಣತಿಯ ಸಿ.ಡಿ. ಆವೃತ್ತಿಯಲ್ಲಿ ಕುಟುಂಬಗಳ ಸಂಖ್ಯೆಯನ್ನು ನೀಡಿರುವುದಿಲ್ಲವಾದುದರಿಂದ ವಾಸದ ಮನೆಗಳ ಸಂಖ್ಯೆಯನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ):

**ಕೋಷ್ಟಕ ೩.೪: ವಾಸದ ಮನೆಗಳು ಮತ್ತು ಕುಟುಂಬಗಳು**

| | ೧೯೯೧ | | | ೨೦೦೧ | | |
|---|---|---|---|---|---|---|
| ತಾಲೂಕು | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು |
| **ಕೋಲಾರ** | | | | | | |
| ವಾಸದ ಮನೆಗಳು | ೩೩,೯೧೧ | ೧೪,೯೦೧ | ೪೮,೮೧೨ | ೪೨,೭೬೭ | ೨೨,೩೩೦ | ೬೫,೦೯೭ |
| ಕುಟುಂಬಗಳು | ೩೩,೯೫೩ | ೧೫,೦೩೭ | ೪೮,೯೯೦ | | | |
| **ಗುಡಿಬಂಡೆ** | | | | | | |
| ವಾಸದ ಮನೆಗಳು | ೭,೪೧೯ | ೧,೪೫೮ | ೮,೮೭೭ | ೯,೦೩೫ | ೧೯೪೦ | ೧೦,೯೭೫ |
| ಕುಟುಂಬಗಳು | ೭,೪೫೮ | ೧,೪೬೫ | ೮,೯೨೩ | | | |
| **ಗೌರಿಬಿದನೂರು** | | | | | | |
| ವಾಸದ ಮನೆಗಳು | ೪೦,೯೭೭ | ೬,೦೭೧ | ೪೭,೦೪೮ | ೫೨,೮೦೪ | ೬,೫೯೬ | ೫೯,೪೦೦ |
| ಕುಟುಂಬಗಳು | ೪೧,೧೮೪ | ೬,೧೫೧ | ೪೭,೩೩೫ | | | |
| **ಚಿಕ್ಕಬಳ್ಳಾಪುರ** | | | | | | |
| ವಾಸದ ಮನೆಗಳು | ೨೧,೬೯೧ | ೮,೮೪೩ | ೩೦,೫೩೪ | ೨೬,೮೮೪ | ೧೧,೫೮೧ | ೩೮,೪೬೫ |
| ಕುಟುಂಬಗಳು | ೨೧,೮೮೭ | ೯,೦೧೬ | ೩೦,೯೦೩ | | | |
| **ಚಿಂತಾಮಣಿ** | | | | | | |
| ವಾಸದ ಮನೆಗಳು | ೩೨,೭೬೯ | ೯,೧೦೩ | ೪೧,೮೭೨ | ೪೦೮೮೯ | ೧೩೫೭೧ | ೫೪೪೬೦ |
| ಕುಟುಂಬಗಳು | ೩೨,೯೧೫ | ೯,೩೩೨ | ೪೨,೨೪೭ | | | |
| **ಬಾಗೇಪಲ್ಲಿ** | | | | | | |
| ವಾಸದ ಮನೆಗಳು | ೨೬,೧೭೧ | ೨,೪೬೯ | ೨೮,೬೪೦ | ೩೨,೩೪೨ | ೪,೩೨೬ | ೩೬,೬೬೮ |
| ಕುಟುಂಬಗಳು | ೨೬,೨೭೬ | ೨,೪೮೧ | ೨೮,೭೫೭ | | | |
| **ಬಂಗಾರಪೇಟೆ** | | | | | | |
| ವಾಸದ ಮನೆಗಳು | ೩೪,೮೧೬ | ೩೩,೦೩೮ | ೬೭,೮೫೪ | ೪೩,೨೮೧ | ೩೮,೪೪೭ | ೮೧,೭೨೮ |
| ಕುಟುಂಬಗಳು | ೩೪,೯೭೧ | ೩೩,೧೯೪ | ೬೮,೧೬೫ | | | |
| **ಮಾಲೂರು** | | | | | | |
| ವಾಸದ ಮನೆಗಳು | ೨೬,೩೧೩ | ೩,೮೯೯ | ೩೦,೨೧೨ | ೩೪,೦೯೪ | ೫,೯೫೩ | ೪೦,೦೪೭ |
| ಕುಟುಂಬಗಳು | ೨೬,೩೭೭ | ೩,೯೩೧ | ೩೦,೩೦೮ | | | |
| **ಮುಳಬಾಗಿಲು** | | | | | | |
| ವಾಸದ ಮನೆಗಳು | ೨೯,೨೭೫ | ೬,೨೧೫ | ೩೫,೪೯೦ | ೩೫,೪೮೮ | ೮,೫೬೭ | ೪೪,೦೫೫ |
| ಕುಟುಂಬಗಳು | ೨೯,೩೪೪ | ೬,೩೧೬ | ೩೫,೬೬೦ | | | |
| **ಶಿಡ್ಲಘಟ್ಟ** | | | | | | |
| ವಾಸದ ಮನೆಗಳು | ೨೪,೮೨೫ | ೪,೧೬೫ | ೨೮,೯೯೦ | ೨೯,೨೦೮ | ೭,೭೪೭ | ೩೬,೯೫೫ |
| ಕುಟುಂಬಗಳು | ೨೪,೮೭೬ | ೪,೧೯೬ | ೨೯,೦೭೨ | | | |
| **ಶ್ರೀನಿವಾಸಪುರ** | | | | | | |
| ವಾಸದ ಮನೆಗಳು | ೨೬,೨೯೮ | ೨,೮೩೫ | ೨೯,೧೩೩ | ೩೧,೯೫೯ | ೪,೩೭೬ | ೩೬,೩೩೫ |
| ಕುಟುಂಬಗಳು | ೨೬,೪೮೪ | ೨,೮೪೫ | ೨೯,೩೨೯ | | | |
| **ಜಿಲ್ಲೆಯ ಒಟ್ಟು** | | | | | | |
| ವಾಸದ ಮನೆಗಳು | ೩,೦೪,೪೬೫ | ೯೨,೯೯೭ | ೩,೯೭,೪೬೨ | ೩,೭೮,೭೫೧ | ೧,೨೫,೪೩೪ | ೫,೦೪,೧೮೫ |
| ಕುಟುಂಬಗಳು | ೩,೦೫,೭೪೫ | ೯೩,೯೬೪ | ೩,೯೯,೭೦೯ | | | |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಸೀರೀಸ್ ೧೧, ಭಾಗ ೨ಎ, ಪು ೨೮೫–೨೮೮ ಹಾಗೂ ೨೦೦೧ರ ಜನಗಣತಿ–ಸಿಡಿ ಆವೃತ್ತಿ, ಟೇಬಲ್–೪

## ಸಾಂಸ್ಥಿಕ ಕುಟುಂಬಗಳು

ವಿದ್ಯಾರ್ಥಿನಿಲಯ, ವಸತಿಗೃಹ, ಸೆರೆಮನೆ, ಆಶ್ರಮ ಮುಂತಾದೆಡೆಗಳಲ್ಲಿ ವಾಸಿಸುವ ಜನರ ಸಂಖ್ಯೆಯನ್ನು ಜನಗಣತಿಯಲ್ಲಿ ಸಾಂಸ್ಥಿಕ ಜನಸಂಖ್ಯೆ ಎಂದು ಪರಿಗಣಿಸಲಾಗುತ್ತದೆ. ೧೯೯೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ೩೯೦ ಸಾಂಸ್ಥಿಕ ಕುಟುಂಬಗಳಿದ್ದು

ಅವುಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ (೧೦೭) ನಗರಪ್ರದೇಶಗಳಲ್ಲಿ (೨೮೩) ೧೭೬ ಸಾಂಸ್ಥಿಕ ಕುಟುಂಬಗಳು ಹೆಚ್ಚಾಗಿದ್ದವು. ಈ ಸಾಂಸ್ಥಿಕ ಕುಟುಂಬಗಳಲ್ಲಿ ವಾಸಿಸುತ್ತಿದ್ದ ಒಟ್ಟು ಜನರಲ್ಲಿ (೯,೭೯೮) ಗಂಡಸರ ಸಂಖ್ಯೆ ೭,೭೪೩ ಆದರೆ ಹೆಂಗಸರ ಸಂಖ್ಯೆ ೨,೦೫೫ ಆಗಿದ್ದಿತು. ನಗರಪ್ರದೇಶದ ಸಾಂಸ್ಥಿಕ ಕುಟುಂಬಗಳಲ್ಲಿನ ಮಹಿಳೆಯರ ಸಂಖ್ಯೆಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಸಾಂಸ್ಥಿಕ ಕುಟುಂಬಗಳಲ್ಲಿನ ಮಹಿಳೆಯರ ಸಂಖ್ಯೆ (೪೫೨) ಸಾಕಷ್ಟು ಕಡಿಮೆ (ಅಂದರೆ, ೧೧೫೧ರಷ್ಟು) ಇದ್ದಿತು. ತಾಲೂಕುವಾರು ಹೋಲಿಸಿದರೆ ಚಿಕ್ಕಬಳ್ಳಾಪುರ ಅತಿ ಹೆಚ್ಚು (೧೧೪) ಸಾಂಸ್ಥಿಕ ಕುಟುಂಬಗಳನ್ನು ಹೊಂದಿ ಮೊದಲ ಸ್ಥಾನದಲ್ಲಿದ್ದರೆ, ಆನಂತರದ ಸ್ಥಾನದಲ್ಲಿ ಬಂಗಾರಪೇಟೆ (೯೭), ಚಿಂತಾಮಣಿ (೩೭) ಹಾಗೂ ಕೋಲಾರ (೩೩) ಕಂಡುಬಂದಿವೆ. ಸಾಮಾನ್ಯವಾಗಿ ಎಲ್ಲಾ ಸಾಂಸ್ಥಿಕ ಕುಟುಂಬಗಳಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಬಹಳ ಕಡಿಮೆ ಇರುವುದು ಕಂಡುಬಂದರೂ (ಗುಡಿಬಂಡೆ, ಬಾಗೇಪಲ್ಲಿ, ಶ್ರೀನಿವಾಸಪುರ ಹಾಗೂ ಶಿಡ್ಲಘಟ್ಟಗಳ ಗ್ರಾಮಾಂತರ ಸಾಂಸ್ಥಿಕ ಕುಟುಂಬಗಳಲ್ಲಿ ಸ್ತ್ರೀಯರ ಸಂಖ್ಯೆ ದಾಖಲಾಗಿಲ್ಲ) ಮುಳಬಾಗಿಲುನಲ್ಲಿ ಮಾತ್ರ ಈ ಪ್ರವೃತ್ತಿ ವ್ಯತಿರಿಕ್ತವಾಗಿರುವುದು ವಿಶೇಷ ಗಮನಾರ್ಹವಾಗಿದೆ. ಹೆಚ್ಚಿನ ಮಾಹಿತಿಗಾಗಿ ತಾಲೂಕುವಾರು ವಿವರಗಳನ್ನು ಕೋಷ್ಟಕ ೩.೫ರಲ್ಲಿ ನೀಡಲಾಗಿದೆ (೨೦೦೧ರ ಅಂಕಿಅಂಶಗಳು ಜನಗಣತಿ ಇಲಾಖೆಯಿಂದ ಇನ್ನೂ ಪ್ರಕಟವಾಗಿರುವುದಿಲ್ಲ).

**ಕೋಷ್ಟಕ ೩.೫: ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ, ೧೯೯೧**

| ತಾಲೂಕು | | ಸಾಂ | ಗಂ | ಹೆಂ | ಒ |
|---|---|---|---|---|---|
| ೧ | ೨ | ೩ | ೪ | ೫ | ೬ |
| **ಕೋಲಾರ** | ಗ್ರಾಮ | ೯ | ೪೯೪ | ೪೦ | ೫೩೪ |
| | ನಗರ | ೨೪ | ೭೩೭ | ೪೧೩ | ೧೧೫೦ |
| | ಒಟ್ಟು | ೩೩ | ೧೨೩೧ | ೪೫೩ | ೧೬೮೪ |
| **ಗುಡಿಬಂಡೆ** | ಗ್ರಾಮ | ೩ | ೧೦೧ | – | ೧೦೧ |
| | ನಗರ | ೪ | ೧೦೬ | ೩೨ | ೧೩೮ |
| | ಒಟ್ಟು | ೭ | ೨೦೭ | ೩೨ | ೨೩೯ |
| **ಗೌರಿಬಿದನೂರು** | ಗ್ರಾಮ | ೮ | ೨೩೫ | ೧ | ೨೩೬ |
| | ನಗರ | ೨೨ | ೩೬೦ | ೯೮ | ೪೫೮ |
| | ಒಟ್ಟು | ೩೦ | ೫೯೫ | ೯೯ | ೬೯೪ |
| **ಚಿಕ್ಕಬಳ್ಳಾಪುರ** | ಗ್ರಾಮ | ೩೧ | ೧೧೧೯ | ೪೮ | ೧೧೬೭ |
| | ನಗರ | ೮೩ | ೬೨೬ | ೨೯೬ | ೯೨೨ |
| | ಒಟ್ಟು | ೧೧೪ | ೧೭೪೫ | ೩೪೪ | ೨೦೮೯ |
| **ಚಿಂತಾಮಣಿ** | ಗ್ರಾಮ | ೧೦ | ೪೨೬ | ೧೦೦ | ೫೨೬ |
| | ನಗರ | ೨೭ | ೨೨೮ | ೮೯ | ೩೧೭ |
| | ಒಟ್ಟು | ೩೭ | ೬೫೪ | ೧೮೯ | ೮೪೩ |
| **ಬಾಗೇಪಲ್ಲಿ** | ಗ್ರಾಮ | ೪ | ೧೩೨ | – | ೧೩೨ |
| | ನಗರ | ೪ | ೭೭ | ೨೫ | ೧೦೨ |
| | ಒಟ್ಟು | ೮ | ೨೦೯ | ೨೫ | ೨೩೪ |
| **ಬಂಗಾರಪೇಟೆ** | ಗ್ರಾಮ | ೧೦ | ೧೬೨ | ೧೨೬ | ೨೮೮ |
| | ನಗರ | ೮೭ | ೧೫೬೦ | ೪೨೭ | ೧೯೮೭ |
| | ಒಟ್ಟು | ೯೭ | ೧೭೨೨ | ೫೫೩ | ೨೨೭೫ |

| ೧ | ೨ | ೩ | ೪ | ೫ | ೬ |
|---|---|---|---|---|---|
| **ಮಾಲೂರು** | ಗ್ರಾಮ | ೬ | ೨೦೫ | ೨೨ | ೨೨೭ |
| | ನಗರ | ೧೨ | ೩೩೨ | ೫೫ | ೩೮೭ |
| | ಒಟ್ಟು | ೧೮ | ೫೩೭ | ೭೭ | ೬೧೪ |
| **ಮುಳಬಾಗಿಲು** | ಗ್ರಾಮ | ೨೧ | ೫೦ | ೧೧೫ | ೧೬೫ |
| | ನಗರ | ೬ | ೮೪ | ೮೨ | ೧೫೬ |
| | ಒಟ್ಟು | ೨೭ | ೧೩೪ | ೧೯೭ | ೩೨೧ |
| **ಶಿಡ್ಲಘಟ್ಟ** | ಗ್ರಾಮ | ೧ | ೨೫ | – | ೨೫ |
| | ನಗರ | ೮ | ೧೨೯ | ೫೧ | ೧೯೦ |
| | ಒಟ್ಟು | ೯ | ೧೫೪ | ೫೧ | ೨೧೫ |
| **ಶ್ರೀನಿವಾಸಪುರ** | ಗ್ರಾಮ | ೪ | ೧೨೨ | – | ೧೨೨ |
| | ನಗರ | ೬ | ೪೨೩ | ೩೫ | ೪೫೮ |
| | ಒಟ್ಟು | ೧೦ | ೫೪೫ | ೩೫ | ೫೮೦ |
| **ಜಿಲ್ಲೆಯ ಒಟ್ಟು** | ಗ್ರಾಮ | ೧೦೭ | ೩೦೭೧ | ೪೫೨ | ೩೫೨೩ |
| | ನಗರ | ೨೫೩ | ೪೬೭೨ | ೧೬೦೩ | ೬೨೭೫ |
| | ಒಟ್ಟು | ೩೬೦ | ೭೭೪೩ | ೨೦೫೫ | ೯೭೯೮ |

ಸೂಚನೆ: ಸಾಂ–ಸಾಂಸ್ಥಿಕ ಕುಟುಂಬಗಳು; ಗಂ–ಗಂಡಸರು; ಹೆಂ–ಹೆಂಗಸರು; ಒ–ಒಟ್ಟು

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪುಲೇಶನ್ ಟೇಬಲ್ಸ್ ಭಾಗ ೨ ಎ. ಪು.೩೬೭–೩೭೯.

**ನಿರ್ವಸಿತ ಕುಟುಂಬಗಳು**

ವಾಸಕ್ಕೆ ಅಗತ್ಯವಾದ ಮನೆಗಳೇ ಇಲ್ಲದ ಭಿಕ್ಷುಕರು ಮೊದಲಾದ ಅಲೆಮಾರಿಗಳ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳೆಂದು ಕರೆಯಲಾಗಿದೆ. ಖಾಯಂ ಆದ ವಾಸದ ಮನೆಗಳಿರದ ಇವರು ಸಾಮಾನ್ಯವಾಗಿ ಪಾಳುಮಂಟಪ, ಬಯಲು, ಬಸ್ ನಿಲ್ದಾಣ ಮೊದಲಾದ ಸ್ಥಳಗಳಲ್ಲಿ ನೆಲೆಸಿರುತ್ತಾರೆ. ೧೯೯೧ರ ಜನಗಣತಿಯಂತೆ ಕೋಲಾರ ಜಿಲ್ಲೆಯಲ್ಲಿ ೧,೪೨೫ ನಿರ್ವಸಿತ ಕುಟುಂಬಗಳು ಗಣತಿಯಾಗಿವೆ. ಇವುಗಳಲ್ಲಿ ನಗರಪ್ರದೇಶಕ್ಕಿಂತ (೬೫೨) ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚು (೭೭೩) ನಿರ್ವಸಿತ ಕುಟುಂಬಗಳಿರುವುದೂ ಕಂಡುಬಂದಿದೆ. ತಾಲೂಕುವಾರು ಗಮನಿಸಿದಾಗ ಚಿಂತಾಮಣಿ ಅತಿಹೆಚ್ಚು (೨೪೩) ನಿರ್ವಸಿತ ಕುಟುಂಬಗಳನ್ನು ಹೊಂದಿ, ಮೊದಲ ಸ್ಥಾನದಲ್ಲಿದ್ದರೆ ಆನಂತರದ ಸ್ಥಾನದಲ್ಲಿ ಚಿಕ್ಕಬಳ್ಳಾಪುರ (೨೨೩) ಹಾಗೂ ಬಂಗಾರಪೇಟೆಗಳು (೧೭೭)ಇವೆ. ಗುಡಿಬಂಡೆಯಲ್ಲಿ ಅತಿ ಕಡಿಮೆ (೪೦) ನಿರ್ವಸಿತ ಕುಟುಂಬಗಳು ದಾಖಲಾಗಿವೆ. ಚಿಂತಾಮಣಿ ತಾಲೂಕಿನಲ್ಲಿ ಅತಿ ಹೆಚ್ಚು (೧೦೭೪) ನಿರ್ವಸಿತ ಜನಸಂಖ್ಯೆ ಕಂಡುಬಂದಿದ್ದರೆ ಆನಂತರದ ಸ್ಥಾನದಲ್ಲಿ ಗೌರಿಬಿದನೂರು (೯೯೭) ಹಾಗೂ ಚಿಕ್ಕಬಳ್ಳಾಪುರ (೯೯೫) ಇವೆ. ಹಾಗೆಯೇ, ನಿರ್ವಸಿತ ಕುಟುಂಬಗಳಲ್ಲಿ ಸಾಮಾನ್ಯವಾಗಿ ಗಂಡಸರಿಗಿಂತ (೨,೯೦೨) ಹೆಂಗಸರ ಸಂಖ್ಯೆ (೨,೩೪೦) ಕಡಿಮೆ ಇದ್ದರೂ (ಕೋಲಾರ ಗ್ರಾಮಾಂತರದಲ್ಲಿ ಇಬ್ಬರೂ ಸಮಸಂಖ್ಯೆ (೬೭)ಯಲ್ಲಿದ್ದಾರೆ) ಅಪವಾದಾತ್ಮಕವಾಗಿ, ಮುಳಬಾಗಿಲು ಗ್ರಾಮಾಂತರ ಹಾಗೂ ನಗರ ಎರಡರಲ್ಲಿಯೂ ಗಂಡಸರಿಗಿಂತ (೧೮೪) ಹೆಂಗಸರೇ ಹೆಚ್ಚಿನ ಸಂಖ್ಯೆ(೨೨೩)ಯಲ್ಲಿರುವುದು ಗಮನಾರ್ಹವಾಗಿದೆ. ಕೋಷ್ಟಕ ೩.೬ರಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿದ್ದ ನಿರ್ವಸಿತ ಕುಟುಂಬಗಳ ಸಂಖ್ಯೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

**ವಲಸೆ:** ಮನುಷ್ಯರಾಗಲಿ, ಪ್ರಾಣಿ, ಪಕ್ಷಿಗಳಂತಹ ಇತರ ಜೀವಿಗಳಾಗಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ನೆಲೆಸುವುದನ್ನು 'ವಲಸೆ' ಎಂದು ಕರೆಯಲಾಗುತ್ತದೆ. 'ವಲಸೆ' ಬಹು ಹಿಂದಿನಿಂದಲೂ ನಡೆದುಬಂದಿರುವ ಒಂದು ಸಾಮಾಜಿಕ ಹಾಗೂ ಆರ್ಥಿಕ ಪ್ರಕ್ರಿಯೆಯಾಗಿದೆ. ವಲಸೆಯು ತಾತ್ಕಾಲಿಕ ಆಗಿರಬಹುದು ಇಲ್ಲವೇ ಶಾಶ್ವತ ಆಗಿರಬಹುದು. ತಮ್ಮ

## ಕೋಷ್ಟಕ ೩.೬: ನಿರ್ವಸಿತ ಕುಟುಂಬಗಳು

| ತಾಲೂಕು | | ೧೯೯೧ | | | |
|---|---|---|---|---|---|
| | | ನಿ | ಗಂ | ಹೆಂ | ಒ |
| ಕೋಲಾರ | ಗ್ರಾಮ | ೩೩ | ೬೭ | ೬೭ | ೧೩೪ |
| | ನಗರ | ೫೮ | ೧೦೭ | ೮೪ | ೧೯೧ |
| | ಒಟ್ಟು | ೯೧ | ೧೭೪ | ೧೫೧ | ೩೨೫ |
| ಗುಡಿಬಂಡೆ | ಗ್ರಾಮ | ೩೭ | ೭೭ | ೬೭ | ೧೪೪ |
| | ನಗರ | ೩ | ೬ | ೪ | ೧೦ |
| | ಒಟ್ಟು | ೪೦ | ೮೩ | ೭೧ | ೧೫೪ |
| ಗೌರಿಬಿದನೂರು | ಗ್ರಾಮ | ೯೯ | ೨೪೮ | ೧೮೧ | ೧೨೯ |
| | ನಗರ | ೬೪ | ೧೫೬ | ೧೧೨ | ೨೬೮ |
| | ಒಟ್ಟು | ೧೬೩ | ೪೦೪ | ೨೯೩ | ೬೯೭ |
| ಚಿಕ್ಕಬಳ್ಳಾಪುರ | ಗ್ರಾಮ | ೯೮ | ೨೦೦ | ೧೭೭ | ೩೭೭ |
| | ನಗರ | ೧೨೫ | ೧೨೫ | ೧೪೩ | ೩೧೮ |
| | ಒಟ್ಟು | ೨೨೩ | ೩೨೫ | ೩೨೦ | ೬೪೫ |
| ಚಿಂತಾಮಣಿ | ಗ್ರಾಮ | ೮೫ | ೧೪೦ | ೧೨೮ | ೨೭೮ |
| | ನಗರ | ೧೫೮ | ೪೬೯ | ೩೨೭ | ೭೯೬ |
| | ಒಟ್ಟು | ೨೪೩ | ೬೦೯ | ೪೫೫ | ೧೦೭೪ |
| ಬಾಗೇಪಲ್ಲಿ | ಗ್ರಾಮ | ೧೦೧ | ೨೨೮ | ೧೮೯ | ೪೧೭ |
| | ನಗರ | ೮ | ೧೫ | ೯ | ೨೪ |
| | ಒಟ್ಟು | ೧೦೯ | ೨೪೩ | ೧೯೮ | ೪೪೧ |
| ಬಂಗಾರಪೇಟೆ | ಗ್ರಾಮ | ೭೬ | ೧೪೯ | ೧೩೬ | ೨೮೫ |
| | ನಗರ | ೧೦೧ | ೧೮೯ | ೧೦೭ | ೨೯೬ |
| | ಒಟ್ಟು | ೧೭೭ | ೩೩೮ | ೨೪೩ | ೫೮೧ |
| ಮಾಲೂರು | ಗ್ರಾಮ | ೫೭ | ೧೨೬ | ೯೨ | ೨೧೮ |
| | ನಗರ | ೨೦ | ೩೬ | ೨೯ | ೬೫ |
| | ಒಟ್ಟು | ೭೭ | ೧೬೨ | ೧೨೧ | ೨೮೩ |
| ಮುಳಬಾಗಿಲು | ಗ್ರಾಮ | ೪೦ | ೭೯ | ೧೦೭ | ೧೮೬ |
| | ನಗರ | ೮೫ | ೧೦೫ | ೧೧೬ | ೨೨೧ |
| | ಒಟ್ಟು | ೧೨೫ | ೧೮೪ | ೨೨೩ | ೪೦೭ |
| ಶಿಡ್ಲಘಟ್ಟ | ಗ್ರಾಮ | ೨೮ | ೮೬ | ೬೬ | ೧೫೨ |
| | ನಗರ | ೨೩ | ೬೪ | ೪೦ | ೧೦೪ |
| | ಒಟ್ಟು | ೫೧ | ೧೫೦ | ೧೦೬ | ೨೫೬ |
| ಶ್ರೀನಿವಾಸಪುರ | ಗ್ರಾಮ | ೧೭೯ | ೨೦೮ | ೧೫೩ | ೩೬೧ |
| | ನಗರ | ೭ | ೧೨ | ೬ | ೧೮ |
| | ಒಟ್ಟು | ೧೮೬ | ೨೨೦ | ೧೫೯ | ೩೭೯ |
| ಜಿಲ್ಲೆಯ ಒಟ್ಟು | ಗ್ರಾಮ | ೭೭೩ | ೧೬೧೮ | ೧೫೬೩ | ೩೧೮೧ |
| | ನಗರ | ೬೫೨ | ೧೨೮೪ | ೯೭೭ | ೨೨೬೧ |
| | ಒಟ್ಟು | ೧೪೨೫ | ೨೯೦೨ | ೨೫೪೦ | ೫೪೪೨ |

ಸೂಚನೆ: ನಿ: ನಿರ್ವಸಿತ ಕುಟುಂಬಗಳು; ಗಂ: ಗಂಡಸರು; ಹೆಂ:ಹೆಂಗಸರು; ಒ:ಒಟ್ಟು

ಆಧಾರ: ಸೆನ್ಸ್ಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪ್ಯುಲೇಷನ್ ಟೇಬಲ್ಸ್ ಭಾಗ–೨ ಎ, ಪು.೩೬೭–೩೬೯

ಕೃಷಿ ಕಾರ್ಯದ ಬಳಿಕ ಬೇಸಿಗೆಯ ಬಿಡುವಿನಲ್ಲಿ ನಗರ ಮತ್ತಿತರೆಡೆ ಕೆಲಸ ಹುಡುಕಿ ಗುಳೆ ಹೋಗುವ ರೈತ ಕಾರ್ಮಿಕರು ಮಳೆಗಾಲಕ್ಕೆ ಮತ್ತೆ ತಮ್ಮ ವಾಸಸ್ಥಳಕ್ಕೆ ಹಿಂದಿರುಗುತ್ತಾರೆ. ಭೀಕರ ಬರ, ಯುದ್ಧ, ಆಹಾರ, ಶಿಕ್ಷಣ, ಉದ್ಯೋಗ, ವಿವಾಹ ಮೊದಲಾದುವೂ ವಲಸೆಗೆ ಕಾರಣಗಳಾಗುತ್ತವೆ. ವ್ಯಕ್ತಿಯು ತಾನು ಹುಟ್ಟಿದ ಊರನ್ನು ಬಿಟ್ಟು ಪಕ್ಕದ ಊರಿಗೆ ಹೋಗಿ ನೆಲೆಸುವುದೂ ಉಂಟು. ಅಂತೆಯೇ, ಯಾವುದೇ ಪ್ರದೇಶದ ಜನಗಣತಿಯಲ್ಲಿ ಅಲ್ಲಿನ ನಿವಾಸಿಗಳನ್ನು ಅವರ ಹುಟ್ಟಿದ ಸ್ಥಳದ ಆಧಾರದ ಮೇಲೆ ವರ್ಗೀಕರಿಸಲಾಗುತ್ತದೆ. ಈ ವರ್ಗೀಕರಣದಲ್ಲಿ ಗಣತಿಯಾದ ಸ್ಥಳದಲ್ಲಿಯೇ ಹುಟ್ಟಿದವರನ್ನು ಹಾಗೂ ಜಿಲ್ಲೆಯಲ್ಲಿಯೇ ಒಂದು ಸ್ಥಳದಲ್ಲಿ ಹುಟ್ಟಿ ಇನ್ನೊಂದು ಸ್ಥಳದಲ್ಲಿ ಗಣತಿಯಾದವರನ್ನು ಪ್ರತ್ಯೇಕವಾಗಿಯೇ ದಾಖಲಿಸಲಾಗುತ್ತದೆ. ಕೋಷ್ಟಕ ೩.೭ರಲ್ಲಿ ೧೯೯೧ರ ಜನಗಣತಿಯಂತೆ ಕೋಲಾರ ಜಿಲ್ಲೆಯಲ್ಲಿ ಗಣತಿ ಆದವರ ಕೆಲವೊಂದು ಸಂಖ್ಯೆಗಳನ್ನು ಮಾದರಿಗಾಗಿ ಅವರವರ ಹುಟ್ಟಿದ ಸ್ಥಳದ ಆಧಾರದ ಮೇಲೆ ವರ್ಗೀಕರಿಸಿ ನೀಡಲಾಗಿದೆ:

**ಕೋಷ್ಟಕ ೩.೭: ಹುಟ್ಟಿದ ಸ್ಥಳದ ಆಧಾರದ ಮೇಲೆ ಜನಸಂಖ್ಯೆಯ ವರ್ಗೀಕರಣ**

| ಹುಟ್ಟಿದ ಸ್ಥಳ | ಒಟ್ಟು | | ಗ್ರಾಮಾಂತರ | | ನಗರ | |
|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ೧ ೨ | ೩ | ೪ | ೫ | ೬ | ೭ | ೮ |
| **ಎ. ಭಾರತದಲ್ಲಿ** | ೧೧೨೫೮೪೬ | ೧೦೮೬೫೭೩ | ೮೬೧೪೬೫ | ೮೩೪೬೭೧ | ೨೬೪೩೮೧ | ೨೫೧೯೦೨ |
| **Iಎ. ಕರ್ನಾಟಕದಲ್ಲಿ** | ೧೦೯೭೩೯೬ | ೧೦೨೦೮೬೦ | ೮೪೯೪೫೫ | ೭೯೦೫೦೪ | ೨೪೭೯೪೧ | ೨೩೦೩೫೬ |
| ಅ. ಜನಗಣತಿಯಾದ ಸ್ಥಳದಲ್ಲಿ | ೯೮೪೨೫೪ | ೬೫೮೩೭೩ | ೭೯೦೦೭೧ | ೪೯೭೩೪೦ | ೧೯೪೧೮೩ | ೧೬೧೦೮೩ |
| ಬ. ಜಿಲ್ಲೆಯಲ್ಲಿಯೇ ಒಂದು ಸ್ಥಳದಲ್ಲಿ ಹುಟ್ಟಿ ಇನ್ನೊಂದು ಸ್ಥಳದಲ್ಲಿ ಗಣತಿಯಾದವರು (born elsewhere in the district of enumeration) | ೮೨೭೧ | ೨೯೨೧೬ | ೪೮೩೧ | ೨೪೮೬೦ | ೩೪೪೦ | ೪೩೫೬ |
| ಕ. ರಾಜ್ಯದ ಇತರ ಜಿಲ್ಲೆಗಳಲ್ಲಿ | ೩೦೩೮೧ | ೬೯೪೬೧ | ೧೧೦೬೩ | ೪೪೪೬೪ | ೧೯೩೧೮ | ೨೪೯೯೭ |
| **II ಇತರ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ** | ೨೮೪೫೦ | ೬೫೭೧೩ | ೧೨೦೧೦ | ೪೪೧೬೭ | ೧೬೪೪೦ | ೨೧೫೪೬ |
| ೧. ಆಂಧ್ರಪ್ರದೇಶ | ೧೫೨೬೦ | ೪೩೯೮೦ | ೮೧೬೦ | ೩೪೬೪೦ | ೭೧೦೦ | ೯೩೪೦ |
| ೨. ಕೇರಳ | ೧೯೫೦ | ೧೨೬೦ | ೩೦೦ | ೨೨೦ | ೧೬೫೦ | ೧೦೪೦ |
| ೩. ಮಹಾರಾಷ್ಟ್ರ | ೩೬೦ | ೫೦೦ | ೪೦ | ೧೧೦ | ೩೨೦ | ೩೯೦ |
| ೪. ರಾಜಸ್ಥಾನ | ೩೮೦ | ೩೩೦ | ೩೦ | ೧೦ | ೩೫೦ | ೩೨೦ |
| ೫. ತಮಿಳುನಾಡು | ೯೮೩೦ | ೧೯೭೨೩ | ೩೧೦೦ | ೯೭೮೭ | ೬೭೩೦ | ೯೯೩೬ |
| **ಬಿ. ವಿದೇಶಗಳಲ್ಲಿ** | ೪೩೦ | ೪೧೦ | ೨೨೦ | ೨೩೦ | ೨೧೦ | ೧೮೦ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧ ಸೀರಿಸ್ ೧೧ ಕರ್ನಾಟಕ ಭಾಗ ೫ಎ ಮತ್ತು ೫ಬಿ ಡಿ ಸೀರಿಸ್ ಸಂ. ೧ ಪು ೧೬೦–೧೬೭

**ಸ್ತ್ರೀ–ಪುರುಷರ ಪ್ರಮಾಣ:** ಪ್ರತೀ ಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆಯನ್ನು ಜನಗಣತಿಯಲ್ಲಿ ಸ್ತ್ರೀ ಪುರುಷರ ಪ್ರಮಾಣವೆಂದು ಪರಿಗಣಿಸಲಾಗುತ್ತದೆ. ಈ ಪ್ರಮಾಣವು ಅಲ್ಲಲ್ಲಿನ ಜನವರ್ಗದ ಸಾಮಾಜಿಕ ಹಾಗೂ ಧಾರ್ಮಿಕ ನಂಬಿಕೆ, ಸಂಪ್ರದಾಯ, ವೈವಾಹಿಕ ಸ್ಥಿತಿಗತಿ, ವಲಸೆ, ಸಾವಿನ ಪ್ರಮಾಣ ಮೊದಲಾದವುಗಳನ್ನು ಅವಲಂಬಿಸಿ ವ್ಯತ್ಯಾಸವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಸ್ತ್ರೀ ಪುರುಷರ ಪ್ರಮಾಣವು ೯೭೨ ಆಗಿದ್ದಿತು. ಇದು ರಾಜ್ಯದ ಪ್ರಮಾಣಕ್ಕಿಂತ (೯೬೫) ಹೆಚ್ಚಾಗಿದೆ. ತೌಲನಿಕವಾಗಿ ನೋಡಿದಾಗ ಬಾಗೇಪಲ್ಲಿ ಹಾಗೂ ಶಿಡ್ಲಘಟ್ಟ ತಾಲೂಕುಗಳ ಗ್ರಾಮೀಣ ಪ್ರದೇಶದ ಸ್ತ್ರೀ–ಪುರುಷರ ಪ್ರಮಾಣ ಒಂದೇ ಆಗಿರುವುದು(೯೭೮) ಕಂಡುಬರುತ್ತದೆ. ಆದರೆ, ನಗರ ಪ್ರದೇಶದ ಸ್ತ್ರೀ ಪುರುಷರ ಪ್ರಮಾಣವು ಗುಡಿಬಂಡೆಯಲ್ಲಿ ಅತಿ ಹೆಚ್ಚಾಗಿರುವುದು (೧,೦೦೧) ಮತ್ತು ಬಾಗೇಪಲ್ಲಿಯಲ್ಲಿ ಅತಿ ಕಡಿಮೆ (೯೨೮) ಇರುವುದು ಕಂಡುಬಂದಿದೆ. ಕೋಷ್ಟಕ ೩.೮ರಲ್ಲಿ ೧೯೦೧ರ ದಶಕದಿಂದ ೨೦೦೧ರವರೆಗೆ ದಾಖಲಾಗಿರುವ ಜಿಲ್ಲೆಯ ಸ್ತ್ರೀ ಪುರುಷರ ಪ್ರಮಾಣವನ್ನು ನೀಡಿದೆ (ಆವರಣದಲ್ಲಿರುವುದು ರಾಜ್ಯದ ಪ್ರಮಾಣವಾಗಿದೆ):

**ಕೋಷ್ಟಕ ೩.೮: ಸ್ತ್ರೀ–ಪುರುಷರ ಪ್ರಮಾಣ**

| ದಶಕಗಳು | ಗ್ರಾಮಾಂತರ | ನಗರ | ಒಟ್ಟು |
|---|---|---|---|
| ೧೯೦೧ | ೯೮೪ (೯೮೪) | ೮೬೧ (೯೭೬) | ೯೬೮ (೯೮೩) |
| ೧೯೧೧ | ೯೮೬ (೯೮೪) | ೮೫೦ (೯೫೯) | ೯೬೮ (೯೮೧) |
| ೧೯೨೧ | ೯೭೨ (೯೭೫) | ೮೯೨ (೯೩೬) | ೯೫೭ (೯೬೯) |
| ೧೯೩೧ | ೯೬೩ (೯೭೨) | ೯೨೦ (೯೨೭) | ೯೫೫ (೯೬೫) |
| ೧೯೪೧ | ೯೫೭ (೯೬೫) | ೯೨೫ (೯೩೫) | ೯೪೯ (೯೬೦) |
| ೧೯೫೧ | ೯೬೭ (೯೭೪) | ೯೯೦ (೯೪೧) | ೯೭೩ (೯೬೬) |
| ೧೯೬೧ | ೯೭೦ (೯೭೩) | ೯೬೦ (೯೧೩) | ೯೬೮ (೯೫೯) |
| ೧೯೭೧ | ೯೬೮ (೯೭೧) | ೯೩೬ (೯೧೩) | ೯೬೧ (೯೫೭) |
| ೧೯೮೧ | ೯೭೬ (೯೭೮) | ೯೫೩ (೯೨೬) | ೯೭೧ (೯೬೩) |
| ೧೯೯೧ | ೯೬೮ (೯೭೩) | ೯೫೩ (೯೩೦) | ೯೬೫ (೯೬೦) |
| ೨೦೦೧ | ೯೭೩ (೯೭೭) | ೯೬೭ (೯೪೨) | ೯೭೨ (೯೬೫) |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪ್ಯುಲೇಶನ್ ಟೇಬಲ್ಸ್, ಭಾಗ ೨–ಎ. ಪು ೪೦–೪೨ ಹಾಗೂ ಜನಗಣತಿ ೨೦೦೧, ಸಿ.ಡಿ. ಆವೃತ್ತಿ ಟೇಬಲ್–೧.

## ವಯೋಮಾನದಂತೆ ವಿಂಗಡಣೆ

ವಯೋಮಾನಕ್ಕನುಗುಣವಾಗಿ ಜನತೆಯನ್ನು ವರ್ಗೀಕರಿಸಿ ಅಧ್ಯಯನ ಮಾಡುವುದರಿಂದ ಆಯಾ ಪ್ರದೇಶದಲ್ಲಿರುವ ದುಡಿಯುವ ವಯಸ್ಸಿನವರ ಹಾಗೂ ದುಡಿಯಲು ಅಶಕ್ತರಾದವರ ಸಂಖ್ಯೆಯನ್ನು ತಿಳಿಯಬಹುದು. ನಾಡಿನ ಜನಶಕ್ತಿಯನ್ನು ಅಳೆಯಲು ಸಹ ಇದು ನೆರವಾಗುತ್ತದೆ (ಸಾಮಾನ್ಯವಾಗಿ ೧೫ ವರ್ಷಗಳಿಗಿಂತ ಕಡಿಮೆ ಹಾಗೂ ೬೦ ವರ್ಷಕ್ಕೆ ಮೇಲ್ಪಟ್ಟವರನ್ನು ವೃತ್ತಿ ಯೋಗ್ಯರೆಂದು ಪರಿಗಣಿಸುವುದಿಲ್ಲ). ೨೦೦೧ರ ಗಣತಿಯಂತೆ ಕೋಲಾರ ಜಿಲ್ಲೆಯಲ್ಲಿದ್ದ ೧೪ ವರ್ಷದವರೆಗಿನವರ ಸಂಖ್ಯೆ ೮,೦೩,೯೫೪ ಆಗಿದ್ದಿತು. ಅವರಲ್ಲಿ ಗಂಡುಮಕ್ಕಳ ಸಂಖ್ಯೆ ೪,೦೮,೬೪೭ ಮತ್ತು ಹೆಣ್ಣು ಮಕ್ಕಳ ಸಂಖ್ಯೆ ೩,೯೫,೩೦೭ ಆಗಿದ್ದಿತು. ಹಾಗೆಯೇ, ೬೦ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರ ಒಟ್ಟು ಸಂಖ್ಯೆ ೨,೧೪,೮೨೩ ಆಗಿದ್ದು, ಅವರಲ್ಲಿ ಗಂಡಸರ ಸಂಖ್ಯೆ ೧,೦೫,೮೬೮ ಹಾಗೂ ಹೆಂಗಸರ ಸಂಖ್ಯೆ ೧,೦೮,೯೫೫ ಆಗಿದ್ದಿತು. ಕೋಷ್ಟಕ ೩.೯ರಲ್ಲಿ ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ದಾಖಲಾದ ಗ್ರಾಮೀಣ ಮತ್ತು ನಗರಪ್ರದೇಶಗಳ ಜನಸಂಖ್ಯೆಯನ್ನು ವಿವಿಧ ವಯೋಗುಂಪುಗಳಿಗನುಗುಣವಾಗಿ ವರ್ಗೀಕರಿಸಿ ನೀಡಲಾಗಿದೆ.

## ವಯೋಗುಂಪು ಮತ್ತು ವೈವಾಹಿಕ ಸ್ಥಿತಿ

ವ್ಯಕ್ತಿಗಳ ವೈವಾಹಿಕ ಸ್ಥಿತಿಯ ಆಧಾರದ ಮೇಲೆ ವಿವಾಹಿತರು, ಅವಿವಾಹಿತರು, ವಿಚ್ಛೇದನ ಪಡೆದವರು, ವಿಧುರರು ಮತ್ತು ವಿಧವೆಯರು ಎಂಬುದಾಗಿ ಜನಗಣತಿಯಲ್ಲಿ ವರ್ಗೀಕರಿಸಲಾಗಿದೆ. ಇದರಿಂದ ಆಯಾ ಪ್ರದೇಶದಲ್ಲಿ ಪ್ರಚಲಿತವಿರುವ ಬಾಲ್ಯ ವಿವಾಹ, ವಿಧವಾ ವಿವಾಹ ಮೊದಲಾದ ಪ್ರವೃತ್ತಿಗಳನ್ನು ಲೆಕ್ಕ ಹಾಕಬಹುದಾಗಿದೆ. ಕೋಲಾರ ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ಇದ್ದ ಒಟ್ಟು ವಿವಾಹಿತರ ಸಂಖ್ಯೆ ೯,೭೮,೬೬೭. ಇವರಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದ ಗಂಡಸರ ಸಂಖ್ಯೆ ಕ್ರಮವಾಗಿ ೩,೭೧,೭೭೭ ಹಾಗೂ ೧,೦೪,೪೦೮ ಆದರೆ, ಹೆಂಗಸರ ಸಂಖ್ಯೆ ಕ್ರಮವಾಗಿ ೩,೯೪,೨೭೯ ಮತ್ತು ೧,೦೮,೨೦೩ ಆಗಿದ್ದಿತು. ಹಾಗೆಯೇ ಅವಿವಾಹಿತರ ಸಂಖ್ಯೆ ೧೧,೨೩,೧೯೩ ಆಗಿದ್ದು ಅವರಲ್ಲಿ ೮೦ ವರ್ಷ ಮೀರಿದ ಅವಿವಾಹಿತ ಗಂಡಸರ ಸಂಖ್ಯೆ ೩೬೦ ಆದರೆ, ಅಂತಹ ಹೆಂಗಸರ ಸಂಖ್ಯೆ ೮೦ ಆಗಿದ್ದಿತು. ಇದರಲ್ಲಿ ಗ್ರಾಮೀಣ ಪ್ರದೇಶದವರ ಸಂಖ್ಯೆ ಕ್ರಮವಾಗಿ ೩೦೦ ಮತ್ತು ೫೦ ಆಗಿದ್ದರೆ, ನಗರಪ್ರದೇಶದವರ ಸಂಖ್ಯೆ ಕ್ರಮವಾಗಿ ೬೦ ಮತ್ತು ೩೦ ಆಗಿದ್ದಿತು. ಕೋಷ್ಟಕ ೩.೧೦ರಲ್ಲಿ ವಿವಿಧ ವಯೋಗುಂಪುಗಳ ವೈವಾಹಿಕ ಸ್ಥಿತಿಯನ್ನು ೧೯೯೧ರ ಜಿಲ್ಲಾ ಜನಗಣತಿಯ ಅನ್ವಯ ನೀಡಲಾಗಿದೆ.

## ಕೋಷ್ಟಕ ೩.೯: ವಯೋಮಾನದಂತೆ ವಿಂಗಡಣೆ

| ವಯೋಗುಂಪು (ವರ್ಷಗಳಲ್ಲಿ) | ಒಟ್ಟು ಜನಸಂಖ್ಯೆ | | | ಗ್ರಾಮೀಣ ಜನಸಂಖ್ಯೆ | | | ನಗರ ಜನಸಂಖ್ಯೆ | | |
|---|---|---|---|---|---|---|---|---|---|
| | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | ೨೫೩೬೦೬೯ | ೧೨೮೬೧೯೩ | ೧೨೪೯೮೭೬ | ೧೯೧೦೫೪೬ | ೯೬೮೨೫೩ | ೯೪೨೨೯೩ | ೬೨೫೫೨೩ | ೩೧೭೯೪೦ | ೩೦೭೫೮೩ |
| ೦-೪ | ೨೩೦೧೮೫ | ೧೧೭೦೧೭ | ೧೧೩೧೬೮ | ೧೭೫೪೫೨ | ೮೯೦೭೮ | ೮೬೩೭೪ | ೫೪೭೩೩ | ೨೭೯೩೯ | ೨೬೭೯೪ |
| ೫-೯ | ೨೮೪೨೭೯ | ೧೩೮೬೭೬ | ೧೩೫೪೬೩ | ೨೦೮೨೧೪ | ೧೦೪೩೩೧ | ೧೦೩೮೮೩ | ೬೭೦೪೩ | ೩೪೧೬೩ | ೩೨೮೮೦ |
| ೧೦-೧೪ | ೨೯೩೪೧೦ | ೧೪೬೯೩೪ | ೧೪೬೪೭೬ | ೨೨೬೪೮೬ | ೧೧೪೮೩೨ | ೧೧೧೬೫೪ | ೬೬೯೨೪ | ೩೨೧೦೨ | ೩೪೮೨೨ |
| ೧೫-೧೯ | ೨೪೬೫೪೧ | ೧೨೮೭೯೭ | ೧೧೭೭೪೪ | ೧೭೯೭೮೦ | ೯೪೯೧೩ | ೮೪೮೬೭ | ೬೬೭೬೧ | ೩೩೮೮೪ | ೩೨೮೭೭ |
| ೨೦-೨೪ | ೨೨೧೨೪೬ | ೧೧೪೬೩೪ | ೧೦೬೬೧೨ | ೧೫೯೨೭೪ | ೮೩೬೦೮ | ೭೫೬೬೬ | ೬೧೯೭೨ | ೩೧೦೨೬ | ೩೦೯೪೬ |
| ೨೫-೨೯ | ೨೧೮೦೪೯ | ೧೦೫೯೮೦ | ೧೧೨೦೬೯ | ೧೬೦೬೪೯ | ೭೪೯೧೪ | ೮೪೨೫೯ | ೫೪೮೫೮ | ೨೦೬೪ | ೩೦೩೩೩ |
| ೩೦-೩೪ | ೧೮೦೯೦೧ | ೮೯೮೬೦ | ೯೧೦೪೧ | ೧೩೪೪೮೧ | ೬೬೩೫೮ | ೬೮೧೨೩ | ೪೬೩೩೦ | ೨೩೪೬೨ | ೨೨೮೬೮ |
| ೩೫-೩೯ | ೧೮೮೧೩೦ | ೯೧೪೪೭ | ೯೬೬೮೩ | ೧೪೦೩೨೪ | ೬೭೫೦೨ | ೭೨೮೨೨ | ೪೭೮೦೬ | ೨೩೯೪೫ | ೨೩೮೬೧ |
| ೪೦-೪೪ | ೧೪೮೨೪೯ | ೭೮೧೪೫ | ೬೯೩೬೧ | ೧೧೯೬೪೪ | ೫೮೮೯ | ೫೬೩೯೬ | ೩೬೦೪೪ | ೯೩೫೮ | ೧೬೪೬೪ |
| ೪೫-೪೯ | ೧೩೪೧೨೨ | ೭೧೩೩೩ | ೬೩೮೪೪ | ೧೦೯೪೨೨ | ೪೩೪೩೧ | ೪೮೮೩೧ | ೩೨೨೪೩ | ೧೨೨೪೯ | ೧೯೦೦೩ |
| ೫೦-೫೪ | ೧೦೬೩೩ | ೪೨೪೪೮ | ೪೮೨೪೦ | ೮೧೮೬೪ | ೪೩೨೪೨ | ೩೮೧೧೮ | ೨೪೫೬೧ | ೧೩೮೨೯ | ೧೦೬೨೨ |
| ೫೫-೫೯ | ೬೧೪೨ | ೩೪೬೩೦ | ೩೪೪೪೨೨ | ೪೪೬೦೬ | ೨೬೪೫೩ | ೨೨೦೧೩ | ೧೪೪೮೬ | ೮೦೩೨ | ೨೪೧೯ |
| ೬೦-೬೪ | ೨೮೪೨ | ೩೫೧೩ | ೩೫೨೮ | ೬೩೬೦೬ | ೩೦೦೬ | ೩೧೬೦೦ | ೧೯೮೯೬ | ೨೧೧೨ | ೨೨೨೯ |
| ೬೫-೬೯ | ೪೨೦೬೪ | ೨೨೧೪೨ | ೨೪೫೫ | ೩೨೨೪೦ | ೧೨೯೩೪ | ೧೯೮೩೪ | ೯೩೩೬ | ೪೨೩೨ | ೫೧೦೪ |
| ೭೦-೭೪ | ೪೩೩೧ | ೨೨೧೨೨ | ೨೧೧೯ | ೩೪೪೬೬ | ೧೨೫೩೪ | ೧೯೮೫೪ | ೨೬೬೪ | ೩೬೭೭ | ೫೧೦೪ |
| ೭೫-೭೯ | ೧೫೪೩೮ | ೯೩೫ | ೯೦೫೪ | ೧೫೪೮೭ | ೬೩೪೦ | ೭೨೮ | ೩೫೭೨ | ೧೭೫೬ | ೧೮೫೬ |
| ೮೦+ | ೨೨೪೪೩ | ೧೩೦೮೦ | ೧೪೮೨೩ | ೨೨೮೭೫ | ೧೧೦೩೪ | ೧೧೮೫೪ | ೪೬೭೪ | ೨೦೪೬ | ೨೬೨೮ |
| ವಯಸ್ಸನ್ನು ಸೂಚಿಸದವರು | ೨೨೪೮ | ೧೪೩ | ೯೫೪ | ೧೨೦೨ | ೯೫೬ | ೭೬೬ | ೪೫೬ | ೩೧೭ | ೨೭೯ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೨೦೦೧, ಸಿ.ಡಿ. ಆವೃತ್ತಿ.

## ಕೋಷ್ಟಕ ೩.೧೦: ವಯೋಗುಂಪು ಮತ್ತು ವೈವಾಹಿಕ ಸ್ಥಿತಿ

| ವಯೋ ಗುಂಪು | ಒಟ್ಟು ಜನಸಂಖ್ಯೆ | | ಅವಿವಾಹಿತರು | | ವಿವಾಹಿತರು | | ವಿಧುರ | ವಿಧವೆ | ವಿಚ್ಛೇದಿತರು/ ಬೇರೆಯಾದವರು | | ವೈವಾಹಿಕ ಸ್ಥಿತಿ ತಿಳಿಸದವರು | |
|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | | ಗಂಡು | ಹೆಣ್ಣು | ಗಂಡು | ಹೆಣ್ಣು |
| ಎಲ್ಲಾ ವಯಸ್ಸಿನವರು | ೧೧೫೮೩೧೬ | ೧೦೮೫೪೨೩ | ೬೭೫೩೧೧ | ೪೯೩೬೮೭ | ೪೨೬೧೫೪ | ೫೦೪೪೮೭ | ೨೦೪೨೦ | ೮೫೬೫೯ | ೧೪೦ | ೬೪೦ | ೩೩೦ | ೮೦ |
| ೦-೯ | ೨೬೪೯೪೪ | ೨೬೧೦೬೪ | ೨೬೪೯೪೪ | ೨೬೧೦೬೪ | ೦ | ೦ | ೦ | ೦ | ೦ | ೦ | ೦ | ೦ |
| ೧೦-೧೪ | ೧೩೬೪೩೩ | ೧೩೪೨೫೮ | ೧೩೬೩೧೩ | ೧೩೨೪೫೮ | ೧೪೦ | ೧೩೩೦ | ೧೨೦ | ೧೦೦ | ೮೦ | ೨೦ | ೪೦ | ೦ |
| ೧೫-೧೯ | ೧೧೦೭೮೦ | ೯೭೪೦೬ | ೧೦೯೭೮೦ | ೭೨೭೮೦ | ೯೧೦ | ೨೪೦೨೬ | ೬೦ | ೨೦೦ | ೩೦ | ೨೮೦ | ೦ | ೧೦ |
| ೨೦-೨೪ | ೯೧೪೯೪ | ೯೦೨೧೭ | ೭೮೯೧ | ೧೬೫೭ | ೧೮೬೯೪ | ೭೫೮೮ | ೧೩೦ | ೪೮೦ | ೭೦ | ೮೦ | ೪೦ | ೦ |
| ೨೫-೨೯ | ೮೫೪೪೭ | ೯೫೬೧೮ | ೩೦೧೩೩ | ೪೦೩೩ | ೫೪೯೭೪ | ೮೯೬೧೮ | ೨೨೦ | ೧೦೮೩ | ೧೬೦ | ೯೯೦ | ೨೦ | ೦ |
| ೩೦-೩೪ | ೭೦೮೬೬ | ೭೬೯೫೭ | ೬೬೬೦ | ೧೩೦ | ೬೩೬೦೬ | ೭೧೬೦೭ | ೪೬೦ | ೨೫೫೦ | ೧೧೦ | ೧೯೦ | ೨೦ | ೦ |
| ೩೫-೩೯ | ೭೩೩೧ | ೭೩೪೩೦ | ೨೦೨೦ | ೬೮೦ | ೭೦೪೯೧ | ೬೮೬೬೦ | ೯೪೦ | ೩೩೯೦ | ೯೦ | ೭೯೦ | ೨೦ | ೦ |
| ೪೦-೪೪ | ೬೪೬೨೪ | ೫೭೭೨೦ | ೧೯೦ | ೩೦೦ | ೬೨೯೪೪ | ೫೧೧೦೦ | ೮೯೦ | ೫೯೨೦ | ೨೩೦ | ೮೯೦ | ೩೦ | ೧೦ |
| ೪೫-೪೯ | ೫೬೪೪೦ | ೪೯೯೯೦ | ೭೬೦ | ೨೧೦ | ೫೫೨೧೦ | ೪೦೯೯೪ | ೧೨೨೦ | ೬೪೦೬ | ೯೦ | ೪೯೦ | ೧೦ | ೦ |
| ೫೦-೫೪ | ೪೭೩೬೬ | ೪೩೦೪೧ | ೪೬೦ | ೨೦೦ | ೪೪೬೨೫ | ೩೧೬೮೧ | ೨೦೦೦ | ೧೦೬೬೦ | ೨೨೦ | ೪೦೦ | ೩೦ | ೦ |
| ೫೫-೫೯ | ೩೦೧೩೦ | ೨೯೩೬೦ | ೨೦ | ೯೦ | ೨೬೯೧೦ | ೧೭೨೦೦ | ೧೮೬೦ | ೬೮೭೦ | ೮೦ | ೨೦೦ | ೧೦ | ೦ |
| ೬೦-೬೪ | ೩೪೯೪೦ | ೩೩೧೭೮ | ೪೧೦ | ೮೦ | ೩೦೯೪೦ | ೧೬೧೭೮ | ೩೪೩೦ | ೧೬೧೨೦ | ೧೪೦ | ೨೬೦ | ೧೦ | ೦ |
| ೬೫-೬೬ | ೧೬೮೦೦ | ೧೬೭೯೦ | ೧೩೦ | ೧೦ | ೧೪೬೬೦ | ೮೮೦೦ | ೯೮೦ | ೮೩೮೦ | ೯೦ | ೩೦ | ೦ | ೦ |
| ೭೦+ | ೩೬೮೩೦ | ೩೨೨೪೪ | ೬೪೦ | ೧೪೦ | ೨೮೬೬೦ | ೮೩೪ | ೭೮೦೦ | ೨೪೩೦ | ೨೦೦ | ೩೦ | ೩೦ | ೦ |
| ವಯಸ್ಸು ತಿಳಿಸದವರು | ೪೬೧೦ | ೪೮೩೦ | ೪೫೩೦ | ೩೬೬೦ | ೩೮೦ | ೪೬೦ | ೩೦ | ೨೦ | ೪೦ | ೦ | ೪೦ | ೬೦ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಪಾರ್ಟ್–೪ ಎ –ಸಿ ಸೀರೀಸ್ ಪು: ೮೫–೮೭

### ಗ್ರಾಮೀಣ ಜನತೆ

ನಗರ ಪ್ರದೇಶದಿಂದ ಹೊರತಾದ ಗುಡ್ಡಗಾಡೂ ಸೇರಿದಂತೆ ಒಟ್ಟು ಗ್ರಾಮೀಣ ಪರಿಸರದಲ್ಲಿ ವಾಸಿಸುವವರನ್ನು 'ಗ್ರಾಮೀಣ ಜನತೆ' ಎಂದು ಪರಿಗಣಿಸಿ ಅಧ್ಯಯನ ಮಾಡಲಾಗುತ್ತದೆ. ಸಾಮಾನ್ಯವಾಗಿ, ಗ್ರಾಮೀಣ ಪ್ರದೇಶವು ನಗರ ಪ್ರದೇಶಕ್ಕಿಂತ ವಿಸ್ತಾರವಾಗಿಯೇ ಇರುತ್ತದೆ. ಅದನ್ನು ಅನುಸರಿಸಿ ಗ್ರಾಮೀಣ ಪ್ರದೇಶದ ಜನಸಂಖ್ಯೆಯು ನಗರ ಪ್ರದೇಶದ ಜನಸಂಖ್ಯೆಗಿಂತ ಹೆಚ್ಚಾಗಿಯೇ ಇರುತ್ತದೆ. ಆದರೆ, ಗ್ರಾಮೀಣ ಪ್ರದೇಶದ ಜನಸಾಂದ್ರತೆಯು ನಗರ ಪ್ರದೇಶದ ಜನಸಾಂದ್ರತೆಗಿಂತ ಕಡಿಮೆಯಾಗಿಯೇ ಇರುತ್ತದೆ.

೧೯೯೧ರ ಜನಗಣತಿ ಪ್ರಕಾರ ಕೋಲಾರ ಜಿಲ್ಲೆಯು ಇಡೀ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು (ಒಟ್ಟು ೩,೩೨೧) ಗ್ರಾಮಗಳನ್ನು ಹೊಂದಿದ ಜಿಲ್ಲೆಯಾಗಿದೆ. ಈ ಗ್ರಾಮಗಳಲ್ಲಿ ಜನವಸತಿ ಇದ್ದ ಗ್ರಾಮಗಳ ಸಂಖ್ಯೆ ೨,೮೮೯ ಹಾಗೂ ಬೇಚಿರಾಕ್ ಸಂಖ್ಯೆ ೪೩೨ ಆಗಿದ್ದಿತು. ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯು ೧೬,೯೯,೯೦೬ ಆಗಿದ್ದು, ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೭೬.೬೭ ರಷ್ಟಾಗುತ್ತದೆ. ಜಿಲ್ಲೆಯ ವಿವಿಧ ತಾಲೂಕುಗಳ ಸಂಖ್ಯೆಯನ್ನು ಹೋಲಿಸಿದರೆ ಬಾಗೇಪಲ್ಲಿಯಲ್ಲಿ ಅತಿ ಹೆಚ್ಚು (ಶೇ.೯೧.೫೪) ಹಾಗೂ ಬಂಗಾರಪೇಟೆಯಲ್ಲಿ ಅತಿ ಕಡಿಮೆ (ಶೇ.೫೨.೦೭) ಗ್ರಾಮೀಣ ಜನಸಂಖ್ಯೆ ಇದ್ದಿತು. ಉಳಿದಂತೆ, ಇತರ ತಾಲೂಕುಗಳಲ್ಲಿನ ಶೇಕಡಾಂಶ ಕ್ರಮವಾಗಿ ಹೀಗಿದ್ದಿತು: ಶ್ರೀನಿವಾಸಪುರ ಶೇ.೮೯.೮೫, ಮಾಲೂರು ಶೇ.೮೭.೯೦, ಗೌರಿಬಿದನೂರು ಶೇ.೮೬.೬೬, ಶಿಡ್ಲಘಟ್ಟ ಶೇ.೮೫.೦೩, ಗುಡಿಬಂಡೆ ಶೇ.೮೩.೪೯, ಮುಳಬಾಗಿಲು ಶೇ.೮೨.೪೯, ಚಿಂತಾಮಣಿ ಶೇ.೭೮.೬೨, ಚಿಕ್ಕಬಳ್ಳಾಪುರ ಶೇ.೭೨.೦೯ ಹಾಗೂ ಕೋಲಾರ ಶೇ.೭೦.೬೮. ೧೯೯೧ರ ಜನಗಣತಿಯಂತೆ ಜಿಲ್ಲೆಯ ಜನವಸತಿ ಗ್ರಾಮಗಳಲ್ಲಿ ಹಂಚಿಹೋಗಿದ್ದ ಜನಸಂಖ್ಯೆಯನ್ನು ಶ್ರೇಣೀಕರಿಸಿ ಕೋಷ್ಟಕ ೩.೧೧ರಲ್ಲಿ ನೀಡಲಾಗಿದೆ. ಗ್ರಾಮಗಳ ಒಟ್ಟು ಸಂಖ್ಯೆಯ ಶೇಕಡಾಂಶವನ್ನು ಕಂಸದಲ್ಲಿ ನೀಡಿದೆ (ಜಿಲ್ಲೆಯ ಯಾವ ಗ್ರಾಮವೂ ೧೦೦೦೦ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರಲಿಲ್ಲ).

**ಕೋಷ್ಟಕ ೩.೧೧: ಗ್ರಾಮೀಣ ಜನಸಂಖ್ಯೆ**

| ತಾಲೂಕು | ಜನವಸತಿ ಇರುವ ಒಟ್ಟು ಗ್ರಾಮ–ಗಳ ಸಂಖ್ಯೆ | ೨೦೦ಕ್ಕಿಂತ ಕಡಿಮೆ ಜನಸಂಖ್ಯೆಯ ಗ್ರಾಮಗಳು | ೨೦೦–೪೯೯ | ೫೦೦–೯೯೯ | ೧೦೦೦–೧೯೯೯ | ೨೦೦೦–೪೯೯೯ | ೫೦೦೦–೯೯೯೯ |
|---|---|---|---|---|---|---|---|
| ಕೋಲಾರ | ೩೩೩ | ೪೨(೧೩) | ೧೧೬(೩೫) | ೧೧೯(೩೬) | ೪೦(೧೨.೩೮) | ೫(೧.೫೪) | ೧(೦.೩೦) |
| ಗುಡಿಬಂಡೆ | ೮೪ | ೨೮(೩೩.೩೩) | ೨೬(೩೧) | ೨೦(೨೪) | ೮(೯.೫೨) | ೨(೨.೩೮) | – |
| ಗೌರಿಬಿದನೂರು | ೨೧೬ | ೨೬(೧೨.೦೩) | ೫೭(೨೬.೩೯) | ೬೧(೨೮) | ೪೪(೨೦.೩೭) | ೨೬(೧೨) | ೨(೦.೯೨) |
| ಚಿಕ್ಕಬಳ್ಳಾಪುರ | ೨೧೯ | ೫೪(೨೪.೬೬) | ೬೭(೩೦.೬) | ೬೫(೩೦) | ೩೦(೧೪) | ೩(೧.೩೬) | – |
| ಚಿಂತಾಮಣಿ | ೩೪೪ | ೬೫(೧೮.೯) | ೧೩೯(೪೦.೪೦) | ೧೦೧(೨೯.೩೬) | ೩೩(೧೦) | ೬(೧.೭೪) | – |
| ಬಾಗೇಪಲ್ಲಿ | ೨೦೯ | ೩೦(೧೪.೩೫) | ೭೫(೩೫.೮೯) | ೭೭(೩೭) | ೧೯(೯) | ೮(೩.೮೨) | – |
| ಬಂಗಾರಪೇಟೆ | ೩೫೨ | ೫೮(೧೬.೪೮) | ೧೪೭(೪೧.೭೬) | ೧೦೪(೨೯.೫) | ೩೧(೮.೮) | ೧೧(೩.೧೨) | ೧(೦.೨೮) |
| ಮಾಲೂರು | ೨೫೬ | ೬೧(೨೪) | ೧೧೧(೪೩) | ೫೬(೨೨) | ೨೪(೮) | ೩(೧) | ೧(೦.೩೩) |
| ಮುಳಬಾಗಿಲು | ೩೧೧ | ೫೬(೧೮) | ೧೨೨(೩೯.೨೨) | ೧೦೬(೩೪) | ೨೧(೬.೭೫) | ೫(೧.೬೦) | ೧(೦.೩೨) |
| ಶಿಡ್ಲಘಟ್ಟ | ೨೪೫ | ೫೦(೨೦.೪೧) | ೧೦೦(೪೧) | ೬೧(೨೪.೯) | ೨೮(೧೧.೪೨) | ೪(೧.೬೩) | ೨(೦.೮೧) |
| ಶ್ರೀನಿವಾಸಪುರ | ೨೮೦ | ೫೨(೧೮.೫೭) | ೧೧೮(೪೧) | ೮೨(೩೦) | ೨೬(೯) | ೨(೦.೬೮) | – |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪ್ಯುಲೇಶನ್ ಟೇಬಲ್ಸ್, ಪು.೪೫೪–೪೫೭

### ಪಟ್ಟಣಗಳ ಜನಸಂಖ್ಯೆ ಹಾಗೂ ಬೆಳವಣಿಗೆ

ಜನಗಣತಿಯ ಪ್ರಕಾರ ಕನಿಷ್ಠ ಐದು ಸಾವಿರ ಜನಸಂಖ್ಯೆ ಇರುವ, ಅವರಲ್ಲಿ ಶೇ.೭೫ರಷ್ಟು ಜನ ಕೃಷಿಯೇತರ ಉದ್ಯೋಗ ಅವಲಂಬಿಸಿದ್ದು, ಜನಸಾಂದ್ರತೆಯು ಚ.ಕಿ.ಮೀ.ಗೆ ಕನಿಷ್ಠ ೪೦೦ರಷ್ಟಾದರೂ ಇರುವ ಪ್ರದೇಶವನ್ನು 'ಪಟ್ಟಣ' ಎಂದು ಗುರುತಿಸಲಾಗುತ್ತದೆ.

ಪುರಸಭೆ, ನಗರಸಭೆ, ದಂಡುಪ್ರದೇಶ, ಅಧಿಸೂಚಿತ ಪ್ರದೇಶಗಳು ಪಟ್ಟಣಗಳ ವ್ಯಾಪ್ತಿಗೆ ಸೇರುತ್ತವೆ. ಅನೇಕ ಕಾರಣಗಳಿಗಾಗಿ ಗ್ರಾಮೀಣರು ಪಟ್ಟಣಗಳಿಗೆ ವಲಸೆ ಬಂದು ನೆಲೆಗೊಳ್ಳುತ್ತಾರೆ. ಕೈಗಾರಿಕೆ ಇತ್ಯಾದಿ ಕಾರಣಗಳಿಂದ ಪಟ್ಟಣಗಳು ಅವುಗಳಿಗೆ ಹೊಂದಿಕೊಂಡ ಗ್ರಾಮಗಳನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ತಮ್ಮೊಂದಿಗೆ ಸೇರಿಸಿಕೊಂಡು ಬೆಳೆಯುತ್ತವೆ. ಇದನ್ನು ನಗರೀಕರಣ ಎಂದು ಕರೆಯಲಾಗುತ್ತದೆ. ಇದೊಂದು ಸಾಮಾಜಿಕ ಹಾಗೂ ಆರ್ಥಿಕ ಪ್ರಕ್ರಿಯೆಯಾಗಿದೆ. ಕೋಲಾರ ಜಿಲ್ಲೆಯ ಪಟ್ಟಣ ಮತ್ತು ನಗರಗಳೂ ಈ ಪ್ರವೃತ್ತಿಯಿಂದ ಹೊರತಾಗಿಲ್ಲ.

ಕೋಲಾರ ಜಿಲ್ಲೆಯ ಪಟ್ಟಣಗಳ ಸಂಖ್ಯೆ ೧೯೦೧ ರಿಂದ ೧೯೯೧ರ ಅವಧಿಯಲ್ಲಿ ೧೨ ರಿಂದ ೧೫ಕ್ಕೆ ಏರಿದೆ. ಅಂದರೆ, ಕೇವಲ ಮೂರು ಪಟ್ಟಣಗಳು ಮಾತ್ರ ಹೆಚ್ಚಾಗಿವೆ. ಆದರೆ, ಪಟ್ಟಣಗಳ ಜನಸಂಖ್ಯೆ ಮಾತ್ರ ದಶಕದಿಂದ ದಶಕಕ್ಕೆ ಏರುತ್ತಾ ಬಂದಿದೆ. ೧೯೧೧ರಿಂದ ೨೧ರ ದಶಕದಲ್ಲಿ (ಶೇ.೫೫.೫೦) ಹಾಗೂ ೧೯೩೧ರಿಂದ ೪೧ರ ದಶಕದಲ್ಲಿ (ಶೇ.೪೦.೮೭) ಈ ಏರಿಕೆಯ ಪ್ರಮಾಣ ಅತಿ ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ. ಇದೇ ದಶಕಗಳಲ್ಲಿ ರಾಜ್ಯದಲ್ಲಿನ ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ ಈ ಪ್ರಮಾಣದಲ್ಲಿರಲಿಲ್ಲ ಎಂಬುದು ಗಮನಾರ್ಹವಾಗಿದೆ. ಆ ದಶಕಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಸ್ಥಾಪಿತವಾದ ಹೊಸ ಕೈಗಾರಿಕೆಗಳು, ಪಟ್ಟಣಗಳ ಪುನರ್‌ರಚನೆ ಮೊದಲಾದ ಅಂಶಗಳು ಇದಕ್ಕೆ ಕಾರಣವಾಗಿರಬಹುದು (ಹೆಚ್ಚಿನ ವಿವರಗಳಿಗೆ ಅಧ್ಯಾಯ–೮ ನೋಡಿರಿ). ಕೋಷ್ಟಕ ೩.೧೨ರಲ್ಲಿ ೧೯೦೧ ರಿಂದ ೧೯೯೧ರವರೆಗಿನ ದಶಕಗಳಲ್ಲಿ ಕೋಲಾರ ಜಿಲ್ಲೆಯಲ್ಲಿದ್ದ ಪಟ್ಟಣಗಳ ಸಂಖ್ಯೆ, ಪಟ್ಟಣಗಳ ಜನಸಂಖ್ಯೆ, ಆ ಸಂಖ್ಯೆಯಲ್ಲಿ ಆದ ವ್ಯತ್ಯಾಸ ಮತ್ತು ರಾಜ್ಯದ ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶದ ವಿವರಗಳನ್ನು ನೀಡಲಾಗಿದೆ:

**ಕೋಷ್ಟಕ ೩.೧೨ ಪಟ್ಟಣಗಳ ದಶಕವಾರು ಜನಸಂಖ್ಯೆ**

| ದಶಕಗಳು | ಪಟ್ಟಣಗಳ ಸಂಖ್ಯೆ | ಪಟ್ಟಣಗಳ ಜನಸಂಖ್ಯೆ | ಪಟ್ಟಣಗಳ ಜನಸಂಖ್ಯೆಯ ದಶಕವಾರು ಬೆಳವಣಿಗೆ | ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ | ರಾಜ್ಯದಲ್ಲಿನ ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ |
|---|---|---|---|---|---|
| ೧೯೦೧ | ೧೨ | ೮೮,೮೬೦ | – | – | – |
| ೧೯೧೧ | ೧೨ | ೯೩,೭೬೯ | +೪,೯೦೯ | +೫.೫೨ | –೪.೪೧ |
| ೧೯೨೧ | ೧೨ | ೧,೪೫,೮೭೮ | +೫೨,೧೦೯ | +೫೫.೫೦ | +೧೭.೫೩ |
| ೧೯೩೧ | ೧೨ | ೧,೫೫,೧೪೩ | +೯,೩೩೪ | +೬.೪೦ | +೨೧.೬೬ |
| ೧೯೪೧ | ೧೨ | ೨,೧೮,೫೪೪ | +೬೩,೪೦೧ | +೪೦.೮೭ | +೨೩.೦೩ |
| ೧೯೫೧ | ೧೩ | ೨,೭೯,೧೩೩ | +೬೦,೫೮೯ | +೨೭.೭೨ | +೬೧.೧೯ |
| ೧೯೬೧ | ೧೩ | ೨,೯೩,೨೭೨ | +೧೪,೧೩೯ | +೫.೦೭ | +೧೮.೨೬ |
| ೧೯೭೧ | ೧೪ | ೩,೧೩,೧೧೫ | +೧೯,೮೪೩ | +೬.೭೭ | +೩೫.೨೩ |
| ೧೯೮೧ | ೧೫ | ೪,೨೭,೮೩೧ | +೧,೧೪,೭೧೬ | +೩೬.೬೪ | +೫೦.೬೫ |
| ೧೯೯೧ | ೧೫ | ೫,೧೬,೯೮೩ | +೮೯,೧೫೨ | +೨೦.೮೪ | +೨೯.೬೨ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೧೯೯೧, ಜನರಲ್ ಪಾಪ್ಯುಲೇಶನ್ ಟೇಬಲ್ಸ್, ಪು.೧೭೮, ೧೮೦, ೫೯

**ಪರಿಶಿಷ್ಟ ಜಾತಿ**

ಕೋಲಾರ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ದಾಖಲಾದ ಪರಿಶಿಷ್ಟ ಜಾತಿಯವರ ಜನಸಂಖ್ಯೆ ೬,೭೧,೬೯೨. ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೨೬.೫ ಆಗುತ್ತದೆ. ಇದು ರಾಜ್ಯದ ಶೇಕಡಾಂಶಕ್ಕಿಂತ (೧೬.೨) ಹೆಚ್ಚಾಗಿದೆ. ಹಾಗೆಯೇ, ಜಿಲ್ಲೆಯ ನಗರಪ್ರದೇಶಕ್ಕಿಂತ (ಶೇ.೨೧.೭) ಗ್ರಾಮೀಣ ಪ್ರದೇಶದಲ್ಲಿ (ಶೇ.೨೮.೧) ಪರಿಶಿಷ್ಟ ಜಾತಿಯವರ ಶೇಕಡಾ ಪ್ರಮಾಣವು

ಹೆಚ್ಚಾಗಿದೆ. ತಾಲೂಕುವಾರು ಅಂಕಿಅಂಶಗಳನ್ನು ಪರಿಶೀಲಿಸಿದಾಗ ಗುಡಿಬಂಡೆಯಲ್ಲಿ ಅತಿ ಕಡಿಮೆ (೧೨,೧೫೦) ಮತ್ತು ಬಂಗಾರಪೇಟೆಯಲ್ಲಿ ಅತಿ ಹೆಚ್ಚಿನ (೧,೫೩,೬೪೫) ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಇದ್ದದ್ದು ದಾಖಲಾಗಿದೆ. ಸ್ತ್ರೀ–ಪುರುಷರ ಪ್ರಮಾಣದ ಬಗ್ಗೆ ಪರಿಶೀಲಿಸಿದಾಗ, ಒಟ್ಟಾರೆ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಕಡಿಮೆ ಇದ್ದರೂ ಮುಳಬಾಗಿಲು (೧,೦೪೩), ಬಂಗಾರಪೇಟೆ (೧,೦೨೪) ಹಾಗೂ ಚಿಕ್ಕಬಳ್ಳಾಪುರ (೧,೦೦೬) ನಗರ ಪ್ರದೇಶಗಳಲ್ಲಿ ಸ್ತ್ರೀಯರ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ. ವಿಶೇಷವೆಂದರೆ, ಗ್ರಾಮಾಂತರಪ್ರದೇಶದಲ್ಲಿ ಪರಿಶಿಷ್ಟ ವರ್ಗದ ಸ್ತ್ರೀಯರ ಪ್ರಮಾಣ ಪುರುಷರಿಗಿಂತ ಹೆಚ್ಚಾಗಿದೆ. ಹೆಚ್ಚಿನ ಮಾಹಿತಿಗಾಗಿ ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಇದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಹಾಗೂ ಸ್ತ್ರೀ ಪುರುಷರ ಪ್ರಮಾಣವನ್ನು ಕೋಷ್ಟಕ ೩.೧೩ರಲ್ಲಿ ನೀಡಿದೆ:

**ಪರಿಶಿಷ್ಟ ವರ್ಗ**

ಭಾರತೀಯ ಸಂವಿಧಾನದ ೩೪೨ನೇ ವಿಧಿಯಂತೆ ಪಟ್ಟಿ ಮಾಡಲಾದ ಜಾತಿ, ಉಪಜಾತಿ ಹಾಗೂ ಬುಡಕಟ್ಟುಗಳನ್ನು ಪರಿಶಿಷ್ಟ ವರ್ಗ/ಪಂಗಡ ಎಂದು ಕರೆಯಲಾಗಿದೆ. ೨೦೦೧ರ ಜನಗಣತಿಯಂತೆ ಕೋಲಾರ ಜಿಲ್ಲೆಯಲ್ಲಿ ೨,೦೫,೮೧೧ ಜನ ಪರಿಶಿಷ್ಟ ವರ್ಗದವರಿದ್ದರು. ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಇವರ ಶೇಕಡಾ ಪ್ರಮಾಣ ಕೇವಲ ೮.೧ ಆದರೂ ಇದು ರಾಜ್ಯದ ಪ್ರಮಾಣಕ್ಕಿಂತ (ಶೇ.೬.೬) ಹೆಚ್ಚಾಗಿಯೇ ಇದ್ದಿತು. ತಾಲೂಕುವಾರು ಅಂಕಿಅಂಶಗಳನ್ನು ಪರಿಶೀಲಿಸಿದರೆ ಗೌರಿಬಿದನೂರಿನಲ್ಲಿ ಅತಿ ಹೆಚ್ಚು (೪೦,೪೪೦) ಮತ್ತು ಮುಳಬಾಗಿಲಿನಲ್ಲಿ ಅತಿ ಕಡಿಮೆ (೭,೪೬೯) ಸಂಖ್ಯೆಯ ಪರಿಶಿಷ್ಟ ವರ್ಗದವರು ಇದ್ದದ್ದು ಕಂಡುಬಂದಿದೆ. ಸ್ತ್ರೀ–ಪುರುಷರ ಪ್ರಮಾಣವನ್ನು ಪರಿಶೀಲಿಸಿದಾಗ ಗ್ರಾಮಾಂತರಪ್ರದೇಶದಲ್ಲಿ (೯೭೫) ನಗರಪ್ರದೇಶಕ್ಕಿಂತ (೯೪೫) ಹೆಚ್ಚಿನ ಪ್ರಮಾಣದಲ್ಲಿ ಸ್ತ್ರೀಯರಿರುವುದು ಕಂಡುಬಂದಿದೆ. ಹಾಗೆಯೇ, ತಾಲೂಕುವಾರು ಸಂಖ್ಯಾ ಪ್ರಮಾಣವನ್ನು ಹೋಲಿಸಿ ನೋಡಿದಾಗ ಮುಳಬಾಗಿಲು (೧೦೪೦), ಕೋಲಾರ (೧೦೦೨) ಹಾಗೂ ಬಂಗಾರಪೇಟೆ(೧೦೦೧)ಗಳ ಗ್ರಾಮೀಣಪ್ರದೇಶದಲ್ಲಿ ಸ್ತ್ರೀಯರ ಪ್ರಮಾಣ ಹೆಚ್ಚಾಗಿರುವುದು ದಾಖಲಾಗಿದೆ. ಈ ಸಂಬಂಧಿಸಿದ ಇತರ ಅಂಕಿ–ಅಂಶಗಳಿಗಾಗಿ ಕೋಷ್ಟಕ ೩.೧೩ರಲ್ಲಿ ನೋಡಿರಿ.

**ಕೋಷ್ಟಕ ೩.೧೩: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಸಂಖ್ಯೆ ಹಾಗೂ ಸ್ತ್ರೀ–ಪುರುಷ ಪ್ರಮಾಣ**

| | | ೨೦೦೧ರ ಜನಸಂಖ್ಯೆ | | ೨೦೦೧ರ ಸ್ತ್ರೀ–ಪುರುಷ ಪ್ರಮಾಣ | |
|---|---|---|---|---|---|
| ತಾಲೂಕು | | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ |
| ೧ | ೨ | ೩ | ೪ | ೫ | ೬ |
| **ಬಾಗೇಪಲ್ಲಿ** | ಗ್ರಾಮ | ೪೦,೬೭೯ | ೩೬,೦೨೨ | ೯೭೯ | ೯೬೪ |
| | ನಗರ | ೩,೧೦೩ | ೧,೬೩೫ | ೯೫೨ | ೯೫೬ |
| | ಒಟ್ಟು | ೪೩,೭೮೨ | ೩೭,೬೫೭ | ೯೭೭ | ೯೬೪ |
| **ಬಂಗಾರಪೇಟೆ** | ಗ್ರಾಮ | ೭೧,೨೩೩ | ೮,೧೬೭ | ೯೮೪ | ೧,೦೦೧ |
| | ನಗರ | ೮೨,೪೧೨ | ೯೯೪ | ೧,೦೨೪ | ೯೪೧ |
| | ಒಟ್ಟು | ೧,೫೩,೬೪೫ | ೯,೧೬೧ | ೧,೦೦೫ | ೯೯೫ |
| **ಚಿಕ್ಕಬಳ್ಳಾಪುರ** | ಗ್ರಾಮ | ೪೦,೫೯೯ | ೧೪,೬೭೯ | ೯೭೯ | ೯೭೯ |
| | ನಗರ | ೭,೮೩೨ | ೧,೯೯೨ | ೧,೦೦೬ | ೯೫೫ |
| | ಒಟ್ಟು | ೪೮,೪೩೧ | ೧೬,೬೭೧ | ೯೮೩ | ೯೬೨ |
| **ಚಿಂತಾಮಣಿ** | ಗ್ರಾಮ | ೫೪,೪೯೧ | ೨೫,೪೭೮ | ೯೮೪ | ೯೭೮ |
| | ನಗರ | ೮,೬೬೪ | ೨,೯೩೮ | ೯೨೧ | ೯೧೭ |
| | ಒಟ್ಟು | ೬೩,೧೫೫ | ೨೮,೪೧೬ | ೯೭೫ | ೯೭೧ |
| **ಗೌರಿಬಿದನೂರು** | ಗ್ರಾಮ | ೬೧,೫೪೮ | ೩೭,೮೧೨ | ೯೫೭ | ೯೬೩ |
| | ನಗರ | ೩,೭೭೮ | ೨,೬೨೮ | ೯೮೩ | ೯೮೦ |
| | ಒಟ್ಟು | ೬೫,೩೨೬ | ೪೦,೪೪೦ | ೯೫೯ | ೯೬೩ |

| ೧ | ೨ | ೩ | ೪ | ೫ | ೬ |
|---|---|---|---|---|---|
| **ಗುಡಿಬಂಡೆ** | ಗ್ರಾಮ | ೧೧,೨೦೦ | ೬,೩೫೩ | ೯೯೧ | ೯೫೮ |
| | ನಗರ | ೯೫೦ | ೧,೫೮೦ | ೯೮೩ | ೯೭೧ |
| | ಒಟ್ಟು | ೧೨,೧೫೦ | ೭,೮೭೩ | ೯೯೦ | ೯೬೧ |
| **ಕೋಲಾರ** | ಗ್ರಾಮ | ೬೪,೯೨೯ | ೧೧,೬೦೯ | ೯೮೩ | ೧,೦೦೨ |
| | ನಗರ | ೧೩,೨೨೩ | ೧,೬೪೪ | ೯೦೮ | ೯೬೯ |
| | ಒಟ್ಟು | ೭೮,೧೫೨ | ೧೩,೨೫೩ | ೯೭೦ | ೯೯೮ |
| **ಮಾಲೂರು** | ಗ್ರಾಮ | ೪೬,೯೪೯ | ೧೮,೩೪೫ | ೯೯೩ | ೯೯೧ |
| | ನಗರ | ೩,೮೪೮ | ೬೪೩ | ೯೬೫ | ೯೬೦ |
| | ಒಟ್ಟು | ೫೦,೭೯೭ | ೧೮,೯೮೮ | ೯೯೧ | ೯೯೦ |
| **ಮುಳಬಾಗಿಲು** | ಗ್ರಾಮ | ೫೮,೩೧೨ | ೭,೧೧೨ | ೯೯೪ | ೯೭೪ |
| | ನಗರ | ೫,೨೮೭ | ೩೫೭ | ೧,೦೪೩ | ೧,೦೪೦ |
| | ಒಟ್ಟು | ೬೩,೫೯೯ | ೭,೪೬೯ | ೯೯೮ | ೯೭೭ |
| **ಶಿಡ್ಲಘಟ್ಟ** | ಗ್ರಾಮ | ೩೮,೭೫೯ | ೧೫,೬೪೬ | ೯೮೭ | ೯೭೪ |
| | ನಗರ | ೩,೧೫೯ | ೯೧೫ | ೯೮೦ | ೯೦೬ |
| | ಒಟ್ಟು | ೪೧,೮೯೮ | ೧೬,೫೬೧ | ೯೮೬ | ೯೭೦ |
| **ಶ್ರೀನಿವಾಸಪುರ** | ಗ್ರಾಮ | ೪೭,೨೭೭ | ೧೮,೮೮೭ | ೯೮೩ | ೯೬೦ |
| | ನಗರ | ೩,೪೮೯ | ೩೭೫ | ೮೫೫ | ೬೫೨ |
| | ಒಟ್ಟು | ೫೦,೭೬೬ | ೧೯,೨೬೨ | ೯೭೪ | ೯೫೩ |
| **ಜಿಲ್ಲೆಯ ಒಟ್ಟು** | ಗ್ರಾಮ | ೫,೩೫,೯೬೭ | ೧,೯೦,೦೭೦ | ೯೮೨ | ೯೭೫ |
| | ನಗರ | ೧,೩೫,೭೨೫ | ೧೫,೬೪೧ | ೯೯೫ | ೯೪೫ |
| | ಒಟ್ಟು | ೬,೭೧,೬೯೨ | ೨,೦೫,೭೧೧ | ೯೮೫ | ೯೭೩ |

ಆಧಾರ: ಸೆನ್ಸಸ್ ಆಫ್ ಇಂಡಿಯಾ ೨೦೦೧, ಟೇಬಲ್–೫ (ಸಿ.ಡಿ.ಆವೃತ್ತಿ)

## ಭಾಷೆಗಳು

ಕೋಲಾರ ಜಿಲ್ಲೆಯಲ್ಲಿ ಕನ್ನಡ, ತೆಲುಗು ಮಾತೃಭಾಷೆಯವರಷ್ಟೇಅಲ್ಲದೆ ಉರ್ದು, ತಮಿಳು ಮೊದಲಾದ ಭಾಷೆಗಳವರೂ ವಾಸಿಸುತ್ತಿದ್ದಾರೆ. ಇವರಲ್ಲಿ ೧೯೯೧ರ ಜನಗಣತಿಯಂತೆ ತೆಲುಗು ಭಾಷಿಕರು ಅತಿ ಹೆಚ್ಚಿನ ಪ್ರಮಾಣದಲ್ಲಿದ್ದರೆ (ಶೇ.೪೬.೮೪), ಕನ್ನಡಿಗರು (ಶೇ. ೩೨.೨೧), ಉರ್ದು ಭಾಷಿಕರು (ಶೇ. ೧೧.೨೬) ಹಾಗೂ ತಮಿಳರು (ಶೇ.೭.೮) ನಂತರದ ಸ್ಥಾನದಲ್ಲಿದ್ದಾರೆ (ಒರಿಯಾ, ಗುಜರಾತಿ ಮೊದಲಾದ ಭಾಷೆಯವರೂ ಅಲ್ಪಸಂಖ್ಯೆಯಲ್ಲಿದ್ದಾರೆ). ಕೋಷ್ಟಕ ೩.೧೪ರಲ್ಲಿ ಜಿಲ್ಲೆಯಲ್ಲಿ ಗಣತಿಯಾಗಿರುವ ಕೆಲವು ಪ್ರಮುಖ ಭಾಷಿಕರ ಸಂಖ್ಯೆಗಳನ್ನು ನೀಡಿದೆ:

**ಕೋಷ್ಟಕ ೩.೧೪: ಭಾಷೆಗಳು**

| ಭಾಷೆ | ಒಟ್ಟು | ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡಾಂಶ |
|---|---|---|
| **ಕನ್ನಡ** | ೭,೧೪,೧೩೧ | ೩೨.೨೧ |
| **ಹಿಂದಿ** | ೧೪,೩೭೦ | ೦.೬೫ |
| **ಮರಾಠಿ** | ೧೭,೫೯೨ | ೦.೭೮ |
| **ತಮಿಳು** | ೧,೭೪,೮೨೬ | ೭.೮೯ |
| **ತೆಲುಗು** | ೧೦,೩೮,೪೩೬ | ೪೬.೮೪ |
| **ಉರ್ದು** | ೨,೪೯,೮೨೫ | ೧೧.೨೭ |

ಆಧಾರ: ಸೆನ್ಸಸ್ ಆಫ್ ಇಂಡಿಯ–೧೯೯೧, ಪಾರ್ಟ್ ೪ ಬಿ–೧, ಟೇಬಲ್ ಸಿ–೭

**ಸಾಕ್ಷರತೆ**

ಜನಗಣತಿಯ ಪ್ರಕಾರ ಯಾವುದೇ ಭಾಷೆಯಲ್ಲಿ ಓದಲು ಮತ್ತು ಬರೆಯಲು ಸಮರ್ಥನಾದ ವ್ಯಕ್ತಿಯನ್ನು ಅಕ್ಷರಸ್ಥನೆಂದು ದಾಖಲಿಸಲಾಗುತ್ತದೆ. ಇದಕ್ಕೆ ಯಾವುದೇ ಶೈಕ್ಷಣಿಕ ಅರ್ಹತೆಯನ್ನು ನಿಗದಿಪಡಿಸಿರುವುದಿಲ್ಲ ಹಾಗೂ ಆರು ವರ್ಷದ ಒಳಗಿರುವ ಮಕ್ಕಳನ್ನು ಅನಕ್ಷರಸ್ಥರೆಂದು ಪರಿಗಣಿಸಲಾಗುತ್ತದೆ. ಕೋಲಾರ ಜಿಲ್ಲೆಯ ಸಾಕ್ಷರತೆಯು ೨೦೦೧ರ (ತಾತ್ಕಾಲಿಕ) ಜನಗಣತಿಯಂತೆ ಶೇ.೬೩.೧೪ ಇದ್ದು, ಅವರಲ್ಲಿ ಪುರುಷರ ಪ್ರಮಾಣ ಶೇ.೭೩.೧೪ ಮತ್ತು ಸ್ತ್ರೀಯರ ಪ್ರಮಾಣ ಶೇ.೫೨.೮೧ ಆಗಿದೆ. ಇದು ರಾಜ್ಯದ ಪ್ರಮಾಣಕ್ಕಿಂತ (ಶೇ.೬೭.೦೪: ಪುರುಷರು ೭೬.೨೯; ಸ್ತ್ರೀಯರು ಶೇ.೫೭.೪೫) ಕಡಿಮೆಯಾಗಿದೆ (ಹೆಚ್ಚಿನ ವಿವರಕ್ಕೆ ಅಧ್ಯಾಯ ೧೫ 'ಶಿಕ್ಷಣ' ನೋಡಿರಿ).

**ಅಂಗವಿಕಲರು**

ಕಿವುಡು, ಕುರುಡು, ಕೈಕಾಲು ಊನ, ಬುದ್ಧಿ ಮಾಂದ್ಯತೆ, ಮಾನಸಿಕ ಅಸ್ವಸ್ಥತೆ ಮೊದಲಾದವುಗಳನ್ನು ಅಂಗವಿಕಲತೆ ಎಂದು ಪರಿಗಣಿಸಲಾಗುತ್ತದೆ. ಕೆಲವರು ಹುಟ್ಟಿನಿಂದ ಅಂಗವಿಕಲರಾಗಿರುತ್ತಾರೆ. ಮತ್ತೆ ಕೆಲವರು ಆ ಬಳಿಕ ಆಕಸ್ಮಿಕ ಅಥವಾ ಅನಾರೋಗ್ಯದಿಂದ ಅಂಗವಿಕಲತೆಗೆ ತುತ್ತಾಗುತ್ತಾರೆ. ಇವರು ಮೇಲ್ನೋಟಕ್ಕೆ ಅಂಗವಿಕಲರಂತೆ ಕಂಡರೂ ತಮ್ಮ ಅಶಕ್ತತೆಯನ್ನು ಮರೆಸಿ, ತಮ್ಮ ಸಾಮರ್ಥ್ಯವನ್ನು ವಿಭಿನ್ನವಾಗಿ ತೋರುವವರಾಗಿರುತ್ತಾರೆ. ಅಂತೆಯೇ, ಅವರನ್ನು Physycally challenged persons ಅಥವಾ ವಿಶೇಷ ಮಕ್ಕಳು ಮೊದಲಾದ ಹೆಸರುಗಳಿಂದ ಈಚೆಗೆ ಗುರುತಿಸಲಾಗುತ್ತಿದೆ. ಅಂಗವಿಕಲರ ಗಣತಿಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತದೆ. ಆದರೂ ಅನೇಕ ಅಂಗವಿಕಲರು ನಿರ್ವಸಿತರಾಗಿ ಭಿಕ್ಷುಕ ಸಮುದಾಯದಲ್ಲಿ ಸೇರಿದ್ದು, ಸಾಮಾನ್ಯ ಗಣತಿ ಸಮಯದಲ್ಲಿ ಮನೆಗಳಲ್ಲಿ ಅವರು ಅಲಭ್ಯವಾಗುವುದರಿಂದ ಅಂಗವಿಕಲರ ವಾಸ್ತವ ಅಂಕಿ–ಅಂಶಗಳನ್ನು ಗುರುತಿಸುವುದು ಕಷ್ಟವಾಗುತ್ತದೆ. ಜನಗಣತಿ ಇಲಾಖೆಯು ೨೦೦೧ರ ಸಾಲಿಗೆ ಸಂಬಂಧಿಸಿ ಸಿದ್ಧಪಡಿಸಿರುವಂತೆ ಜಿಲ್ಲೆಯಲ್ಲಿ ಕಂಡುಬಂದ ವಿವಿಧ ಬಗೆಯ ಅಂಗವಿಕಲರ ಅಂಕಿ–ಅಂಶಗಳನ್ನು ಕೋಷ್ಟಕ–೩.೧೫ರಲ್ಲಿ ನೀಡಲಾಗಿದೆ. ಈ ಪಟ್ಟಿಯಲ್ಲಿನ ಅಂಕಿಅಂಶಗಳನ್ನು ಗಮನಿಸಿದಾಗ, ಜಿಲ್ಲೆಯಲ್ಲಿ ೪೪ ಸಾವಿರಕ್ಕೂ ಹೆಚ್ಚು ಅಂಗವಿಕಲರಿರುವುದು ವೇದ್ಯವಾಗುತ್ತದೆ. ಈ ವಿವಿಧ ಬಗೆಯ ಅಂಗವಿಕಲರಲ್ಲಿ ಅಂಧರು ಹೆಚ್ಚಿನ ಸಂಖ್ಯೆಯಲ್ಲಿಯೂ (೨೦,೨೦೮), ನಡಿಗೆಯಲ್ಲಿ ವೈಕಲ್ಯ ಉಳ್ಳವರು (ಕುಂಟ) ಎರಡನೆಯ ಸ್ಥಾನದಲ್ಲಿಯೂ (೧೨,೪೨೫) ಇದ್ದಾರೆ. ಅಂಗವಿಕಲರ ಸಂಖ್ಯೆಯನ್ನು ಲಿಂಗಾನುಗುಣವಾಗಿ ಹೋಲಿಸಿದಾಗ ೨೨,೮೬೩ರಷ್ಟು ಇರುವ ಪುರುಷರು ಸ್ತ್ರೀಯರಿಗಿಂತ(೧೯,೫೬೩) ಹೆಚ್ಚಿನ ಸಂಖ್ಯೆಯಲ್ಲಿರುವುದು ಹಾಗೂ ನಗರ ಪ್ರದೇಶ(೮,೮೮೬)ಕ್ಕಿಂತ ಗ್ರಾಮೀಣ ಪ್ರದೇಶ(೩೫,೫೪೦)ದಲ್ಲಿಯೇ ಈ ವಿವಿಧ ಬಗೆಯ ಅಂಗವಿಕಲರ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ.

**ಕೋಷ್ಟಕ ೩.೧೫: ಅಂಗವಿಕಲರು**

| ವಿಧ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| ೧ | ೨ | ೩ | ೪ | ೫ |
| **ಒಟ್ಟು ಅಂಗವಿಕಲರು** | ಒಟ್ಟು | ೪೪,೪೨೬ | ೩೫,೫೪೦ | ೮,೮೮೬ |
| | ಗಂಡು | ೨೨,೮೬೩ | ೧೯,೮೮೨ | ೪,೯೮೧ |
| | ಹೆಣ್ಣು | ೧೯,೫೬೩ | ೧೫,೬೫೮ | ೩,೯೦೫ |
| **ದೃಷ್ಟಿಯಲ್ಲಿ** | ಒಟ್ಟು | ೨೦,೨೦೮ | ೧೬,೧೦೪ | ೪,೧೦೪ |
| | ಗಂಡು | ೧೦,೬೩೮ | ೮,೪೯೬ | ೨,೧೪೨ |
| | ಹೆಣ್ಣು | ೯,೫೭೦ | ೭,೬೦೮ | ೧,೯೬೨ |
| **ಮಾತಿನಲ್ಲಿ** | ಒಟ್ಟು | ೪,೭೦೭ | ೩,೭೫೦ | ೯೫೭ |
| | ಗಂಡು | ೨,೬೩೦ | ೨,೦೯೫ | ೫೩೫ |
| | ಹೆಣ್ಣು | ೨,೦೭೭ | ೧,೬೫೫ | ೪೨೨ |

| ೧ | ೨ | ೩ | ೪ | ೫ |
|---|---|---|---|---|
| **ಶ್ರವಣದಲ್ಲಿ** | ಒಟ್ಟು | ೨,೪೮೫ | ೨,೦೦೯ | ೪೬೬ |
| | ಗಂಡು | ೧,೨೪೯ | ೧,೦೨೨ | ೨೨೭ |
| | ಹೆಣ್ಣು | ೧,೨೩೬ | ೯೮೭ | ೨೩೯ |
| **ನಡಿಗೆಯಲ್ಲಿ** | ಒಟ್ಟು | ೧೨,೪೨೩ | ೧೦,೦೫೫ | ೨,೩೬೮ |
| | ಗಂಡು | ೭,೮೪೩ | ೬,೩೩೧ | ೧,೫೧೨ |
| | ಹೆಣ್ಣು | ೪,೫೮೦ | ೩,೭೨೪ | ೮೫೬ |
| **ಮಾನಸಿಕವಾಗಿ** | ಒಟ್ಟು | ೪,೬೧೩ | ೩,೬೨೨ | ೯೯೧ |
| | ಗಂಡು | ೨,೫೦೩ | ೧,೯೩೮ | ೫೬೫ |
| | ಹೆಣ್ಣು | ೨,೧೧೦ | ೧,೬೮೪ | ೪೨೬ |

**ಧರ್ಮಗಳು**

ಇಹ ಮತ್ತು ಪರದ ವಿಶ್ಲೇಷಣೆ, ಲೌಕಿಕದಿಂದ ಪಾರಮಾರ್ಥಿಕದತ್ತ ನಡೆಯಲು ವ್ಯಕ್ತಿಯು ಇಟ್ಟುಕೊಳ್ಳಬೇಕಾದ ತಿಳಿವಳಿಕೆ, ಅನುಸರಿಸಬೇಕಾದ ಮಾರ್ಗ ಇತ್ಯಾದಿಗಳನ್ನು ಕುರಿತಂತೆ ಮನುಷ್ಯನ ಬದುಕಿಗೆ ತಾತ್ವಿಕ ಚೌಕಟ್ಟನ್ನು ರೂಪಿಸಿಕೊಡುವ ಪ್ರಯತ್ನವನ್ನು ವಿವಿಧ ಧರ್ಮಗಳು ತಮ್ಮ ತಮ್ಮ ನೆಲೆಯಲ್ಲಿ ಕಾಲಕಾಲಕ್ಕೆ ಮಾಡುತ್ತಾಬಂದಿವೆ. ಇವುಗಳಲ್ಲಿ ಜರತುಷ್ಟ್ರ ಕ್ರೈಸ್ತ, ಮುಸ್ಲಿಂ, ಸಿಖ್ ಮೊದಲಾದ ಧರ್ಮಗಳು ಒಬ್ಬೊಬ್ಬ ಬೋಧಕನ ಬೋಧನೆಗಳ ಅನುಸಾರ ರೂಪಿತವಾಗಿದ್ದರೆ, ಹಿಂದೂ ಧರ್ಮವು ಕಾಲಕಾಲಕ್ಕೆ ಬಂದ ಎಷ್ಟೋ ತತ್ವ ಚಿಂತಕರಿಂದ ರೂಪಿತವಾದ ಒಂದು ಜೀವನ ಕ್ರಮವಾಗಿದೆ. ಹಿಂದೂ ಧರ್ಮದಿಂದ ಕವಲಾಗಿ ಬೌದ್ಧ, ಜೈನ, ಸಿಖ್ ಧರ್ಮಗಳೂ ಹುಟ್ಟಿಕೊಂಡಿವೆ. ಇವಲ್ಲದೆ, ಒಬ್ಬೊಬ್ಬ ತತ್ವ ಬೋಧಕನ ಪ್ರಾಮುಖ್ಯತೆಗನುಗುಣವಾಗಿ ವಿವಿಧ ಮತ–ಪಂಥಗಳೂ ಹುಟ್ಟಿಕೊಂಡಿವೆ. ಈ ಮತ–ಪಂಥಗಳ ಅನುಯಾಯಿಗಳು ತಮ್ಮ ಪ್ರತ್ಯೇಕತೆಯನ್ನು ಸೂಚಿಸುವುದಕ್ಕಾಗಿ ತಮಗೇ ಮೀಸಲಾದ ಲಾಂಛನ, ಪವಿತ್ರದಿನ, ಅಧಿದೈವ, ಪವಿತ್ರಯಾತ್ರಾಸ್ಥಳ, ಪೂಜಾಕ್ರಮ, ಉಡುಗೆ–ತೊಡುಗೆ ಇತ್ಯಾದಿಗಳನ್ನು ಹೊಂದಿದ್ದಾರೆ. ಮತ, ಪಂಥಗಳ ತತ್ವ ನಂಬಿಕೆಗಳನ್ನು ಅನುಸರಿಸಿ ಅಲ್ಲಿನ ಜೀವನಶೈಲಿ, ಸಾಹಿತ್ಯ, ರಾಜಕೀಯ, ಕಲೆ, ಸಾಂಸ್ಕೃತಿಕ ಬದುಕು ರೂಪುಗೊಳ್ಳುತ್ತದೆ. ಆಧುನಿಕ ಸಂದರ್ಭದಲ್ಲಿ ವಿವಿಧ ಮತ–ಪಂಥಗಳ ಅನುಯಾಯಿಗಳು ಎಲ್ಲೆಡೆ ಕಾಣಬರುವುದು ಸಾಮಾನ್ಯವಾಗಿರುತ್ತದೆ. ಕೋಲಾರ ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಧರ್ಮೀಯರು ಹೆಚ್ಚಿನ ಪ್ರಮಾಣದಲ್ಲಿಯೂ ಜೈನ, ಸಿಖ್, ಬೌದ್ಧ ಧರ್ಮೀಯರು ಅಲ್ಪಪ್ರಮಾಣದಲ್ಲಿಯೂ ಕಾಣಬರುತ್ತಾರೆ. ಜಿಲ್ಲೆಯಲ್ಲಿದ್ದ ವಿವಿಧ ಧರ್ಮೀಯರ ಸಂಖ್ಯೆಯನ್ನು ೨೦೦೧ರ ಜನಗಣತಿ ಆಧರಿಸಿ ಕೋಷ್ಟಕ ೩.೧೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೩.೧೬**

| ಧರ್ಮಗಳು | ಗ್ರಾಮಾಂತರ | ನಗರ | ಒಟ್ಟು | ಶತಾಂಶ | ೧೯೯೧ರ ಶತಾಂಶ |
|---|---|---|---|---|---|
| **ಕ್ರೈಸ್ತರು** | ೩೭೫೧ | ೨೮೭೯೬ | ೩೨೫೪೭ | ೧.೨೮ | ೧.೫೬ |
| **ಜೈನರು** | ೭೫೩ | ೩೧೪೩ | ೩೮೯೬ | ೦.೧೫ | ೦.೧೬ |
| **ಬೌದ್ಧರು** | ೨೫೦ | ೩೬೦ | ೬೧೦ | ೦.೦೨ | ನಗಣ್ಯ |
| **ಮುಸಲ್ಮಾನರು** | ೧೨೦೯೬೯ | ೧೭೭೭೯೮ | ೨೯೮೭೬೭ | ೧೧.೭೮ | ೧೧.೪೦ |
| **ಹಿಂದೂಗಳು** | ೧೭೮೨೭೧೪ | ೪೧೩೯೪೬ | ೨೧೯೬೬೬೦ | ೮೬.೬೧ | ೮೬.೮೫ |
| **ಸಿಕ್ಕರು** | ೬೮ | ೨೭೩ | ೩೪೧ | ೦.೦೧ | ೦.೦೧ |
| **ಇತರ ಧರ್ಮೀಯರು** | ೧೩೧ | ೧೫೫ | ೨೮೬ | ೦.೦೧ | ನಗಣ್ಯ |
| **ಧರ್ಮ ಸೂಚಿಸದವರು** | ೯೧೦ | ೧೦೭೨ | ೨೯೮೨ | ೦.೧೧ | ೦.೦೨ |

ಆಧಾರ : ಸೆನ್ಸಸ್ ಆಫ್ ಇಂಡಿಯಾ ೨೦೦೧, ಸಿ.ಡಿ. ಆವೃತ್ತಿ

**ಬೌದ್ಧಧರ್ಮ:** ಶ್ರೀನಿವಾಸಪುರ ತಾಲೂಕಿನ ಹರಳಕುಂಟೆ ಗ್ರಾಮದ ಹೊರವಲಯದಲ್ಲಿ ಈಚೆಗೆ ತಾವು ಎರಡು ಬೌದ್ಧ ವಿಹಾರಗಳ ಅವಶೇಷಗಳನ್ನು ಪತ್ತೆಹಚ್ಚಿದ್ದು, ಅವುಗಳ ಆಧಾರದ ಮೇಲೆ ಕ್ರಿ.ಶ.೧–೨ನೆಯ ಶತಮಾನದ ಹೊತ್ತಿಗೆ ಬೌದ್ಧ ಧರ್ಮವು ಆ ಭಾಗದಲ್ಲಿ ಅಸ್ತಿತ್ವದಲ್ಲಿದ್ದಿತೆಂದು ಹೇಳಬಹುದಾಗಿದೆ ಎಂದು ಎಂ.ಜಿ. ಮಂಜುನಾಥ ಅವರು ಅಭಿಪ್ರಾಯಪಟ್ಟಿದ್ದಾರೆ. ಮುಳಬಾಗಿಲು ತಾಲೂಕಿನ ಮುಡಿಯನೂರು ಗ್ರಾಮದ ಒಂದು ತಾಮ್ರ ಶಾಸನದಲ್ಲಿನ ಬುದ್ಧನ ಪ್ರಸ್ತಾಪ ಹಾಗೂ ನಂದಿಯ ಭೋಗನಂದೀಶ್ವರ ದೇವಾಲಯದ ಹೊರಭಿತ್ತಿಯಲ್ಲಿನ ಬುದ್ಧನ ಶಿಲ್ಪದ ಆಧಾರದಿಂದ ಕೋಲಾರ ಜಿಲ್ಲೆಯಲ್ಲಿ ಕ್ರಿ.ಶ.೯ನೆಯ ಶತಮಾನದವರೆವಿಗೂ ಬೌದ್ಧ ಧರ್ಮ ಅಸ್ತಿತ್ವದಲ್ಲಿದ್ದಿತೆಂದು ಅವರು ಹೇಳಿದ್ದಾರೆ.

**ಹಿಂದೂ ಧರ್ಮ:** ಹಿಂದೂ ಧರ್ಮವು ಅನೇಕ ಪಂಥ–ಪಂಗಡಗಳನ್ನೂ, ಜಾತಿ ಬುಡಕಟ್ಟುಗಳನ್ನೂ ಹೊಂದಿದೆ. ಹಿಂದೂಗಳಲ್ಲಿ ವೈದಿಕ ಹಾಗೂ ಶೈವ ಪಂಥಗಳವರು ಕೆಲವು ತತ್ವ ಗ್ರಂಥಗಳ ನಿರ್ದೇಶನದಂತೆ ತಮ್ಮ ಧಾರ್ಮಿಕ ಬದುಕನ್ನು ಸಾಗಿಸುವವರಾದರೆ, ಹಿಂದುಳಿದ ವರ್ಗಗಳ ಅಸಂಖ್ಯಾತ ಜಾತಿ, ಉಪಜಾತಿಯವರು ತಲೆಮಾರಿನಿಂದಲೂ ವಾಗ್ರೂಢಿಯಲ್ಲಿ ಬಂದ ಜೀವನಾದರ್ಶಗಳನ್ನು ಒಪ್ಪಿದವರಾಗಿದ್ದಾರೆ. ಇವರು ಪುರಾಣೋಕ್ತ ದೇವತೆಗಳನ್ನಲ್ಲದೆ ಅಸಂಖ್ಯ ಜಾನಪದೀಯ ದೈವಗಳನ್ನು, ವಿಶೇಷವಾಗಿ ಮಾತೃ ದೇವತೆಗಳನ್ನು ನಂಬಿ ಆರಾಧಿಸುತ್ತಾರೆ. ಇವುಗಳಿಗೆ ಸಂಬಂಧಿಸಿದ ಗುಡಿ ಅಥವಾ ಪೂಜಾ ಸ್ಥಳಗಳು ಸಾಮಾನ್ಯವಾಗಿ ಪ್ರತೀ ಹಳ್ಳಿಯಲ್ಲಿಯೂ ಕಂಡುಬರುತ್ತವೆ. ಹಿಂದೂಗಳ ಧಾರ್ಮಿಕ ಚಿಂತನೆಗಳಲ್ಲಿ ಹಿಂದೆ ಲಕುಲೀಶ ಪಾಶುಪತ, ಕಾಳಾಮುಖ, ಕಾಪಾಲಿಕ, ನಾಥ, ಶಾಕ್ತ ಚಾರ್ವಾಕ ಮೊದಲಾದ ಪಂಥಗಳು ಹುಟ್ಟಿಕೊಂಡಿದ್ದರೂ ಗಾಣಪತ್ಯ, ಸೌರ, ಶೈವ, ವೈಷ್ಣವ, ಶಾಕ್ತ ಮತ್ತು ಕೌಮಾರ–ಈ ಆರು ಮತ(ಷಣ್ಮತ)ಗಳನ್ನು ಪ್ರಮುಖವಾದವುಗಳೆಂದು ಗುರುತಿಸಲಾಗಿದೆ. ಪ್ರಸ್ತುತದಲ್ಲಿ ಶಂಕರಾಚಾರ್ಯ ನಿರೂಪಿಸಿದ ಅದ್ವೈತ, ರಾಮಾನುಜಾಚಾರ್ಯ ಪ್ರತಿಪಾದಿಸಿದ ವಿಶಿಷ್ಟಾದ್ವೈತ, ಮಧ್ವಾಚಾರ್ಯ ಬೋಧಿಸಿದ ದ್ವೈತ ಹಾಗೂ ಬಸವಣ್ಣನ ಶಕ್ತಿ ವಿಶಿಷ್ಟಾದ್ವೈತ ಪಂಥಗಳ ಅನುಯಾಯಿಗಳು ವಿಶೇಷವಾಗಿ ಕಾಣಬರುತ್ತಾರೆ. ಅವರವರಿಗೆ ಸಂಬಂಧಿಸಿದ ಕೆಲವೊಂದು ಮತ–ಧಾರ್ಮಿಕ ಕೇಂದ್ರಗಳೂ ಜಿಲ್ಲೆಯಲ್ಲಿ ಇವೆ. ತಿರುಪತಿಯ ಪ್ರಭಾವದಿಂದಾಗಿ ಜಿಲ್ಲೆಯಲ್ಲಿ ವೆಂಕಟೇಶ್ವರ ಹಾಗೂ ಆಂಜನೇಯನ ಗುಡಿಗಳು ವಿಶೇಷವಾಗಿವೆ.

ಕ್ರಿ.ಶ. ಐದನೇ ಶತಮಾನಕ್ಕಿಂತಲೂ ಹಿಂದಿನಿಂದಲೇ ಜಿಲ್ಲೆಯಲ್ಲಿ ಹಿಂದೂ ದೇವಾಲಯಗಳ ನಿರ್ಮಾಣ ಅಥವಾ ಅದಕ್ಕೆ ಪೂರಕವಾದ ಚಟುವಟಿಕೆಗಳು ಪ್ರಾರಂಭವಾಗಿದ್ದುದನ್ನು ಶಾಸನ ಮತ್ತಿತರ ದಾಖಲೆಗಳಿಂದ ಅಧ್ಯಯನಕಾರರು ಗುರುತಿಸಿದ್ದಾರೆ. ಕ್ರಿ.ಶ.೪ನೇ ಶತಮಾನದ ಹೊತ್ತಿಗೇ ವೈದಿಕ ಧರ್ಮವು ಕೋಲಾರ ಜಿಲ್ಲೆಯಲ್ಲಿ ತನ್ನ ಪ್ರಭಾವ ಬೀರಿದ್ದಿತು. ಕೋಲಾರ ತಾಲೂಕಿನ ಚಲುವನಹಳ್ಳಿಯ ತಾಮ್ರಶಾಸನದಲ್ಲಿ ಮಾತೃಶರ್ಮ ಎಂಬ ಬ್ರಾಹ್ಮಣನಿಗೆ ಗದ್ದೆಯನ್ನು ದಾನವಾಗಿ ನೀಡಿದ ಪ್ರಸ್ತಾಪವಿದೆ. ಶೃಂಗೇರಿಯ ತಾಮ್ರ ಶಾಸನ (ಕ್ರಿ.ಶ.೫–೬ನೇ ಶತಮಾನ)ದಲ್ಲಿ ಗಂಗದೊರೆ ಅವಿನೀತನು ಕೊಲಪಲ್ಲಿ ಗ್ರಾಮದ ಹತ್ತು ಖಂಡುಗ ಗದ್ದೆಯನ್ನು ಬ್ರಾಹ್ಮಣನೊಬ್ಬನಿಗೆ ದಾನ ಕೊಟ್ಟ ವಿಷಯವಿದೆ. ಕೊಲಪಲ್ಲಿಯನ್ನು ಈಗಿನ ಮುಳಬಾಗಿಲು ತಾಲೂಕಿನ ಕೊಲದೇವಿ ಗ್ರಾಮ ಎಂದು ಅಧ್ಯಯನಕಾರರು ಗುರುತಿಸಿದ್ದಾರೆ. ಇದೇ ಅರಸನು ಮೇಲೂರಿನ (ಶಿಡ್ಲಘಟ್ಟ ತಾಲೂಕು) ಕೆರೆಯ ಕೆಳಗಿನ ಗದ್ದೆಯನ್ನು ತಿಪ್ಪೂರು ಗ್ರಾಮದ ಕಾಡಸ್ವಾಮಿ ಎಂಬ ಹರಿಭಕ್ತನಿಗೆ ಬ್ರಹ್ಮದೇಯವಾಗಿ ಕೊಟ್ಟ ವಿವರ ಬೆಂಗಳೂರು ಜಿಲ್ಲೆ ಮಲ್ಲೋಹಳ್ಳಿಯ ತಾಮ್ರಶಾಸನದಲ್ಲಿದೆ. ಬೆಂಗಳೂರಿನಲ್ಲಿ ದೊರೆತ ಕ್ರಿ.ಶ.೫ನೆಯ ಶತಮಾನದ ಒಂದು ತಾಮ್ರಶಾಸನದಲ್ಲಿ ಗಂಗದೊರೆ ಕೃಷ್ಣವರ್ಮನು ಪೇರೂರು (ಈಗಿನ ಶ್ರೀನಿವಾಸಪುರ ತಾಲೂಕಿನ ಯಲ್ದೂರು) ವಿಷಯದ ಕುಡಿಲಿಯಂ ಎಂಬ ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟ ವಿಷಯವಿದೆ.

ಕೆಲವು ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಮಾಹಿತಿಗಳಿಂದ ಕ್ರಿ.ಶ.ಏಳು–ಎಂಟನೇ ಶತಮಾನದ ಹೊತ್ತಿಗೆ ಜಿಲ್ಲೆಯಾದ್ಯಂತ ಲಕುಲೀಶ, ಪಾಶುಪತ, ಕಾಳಾಮುಖ ಮೊದಲಾದ ಶೈವಪಂಥಗಳು ಹರಡಿದ್ದುದೂ ತಿಳಿದುಬರುತ್ತದೆ. ಕೈವಾರ, ಆವನಿ ಮುಂತಾದೆಡೆ ಲಕುಲೀಶ ಪಂಥದ ಶಿಲ್ಪಗಳನ್ನೂ ಅಧ್ಯಯನಕಾರರು ಗುರುತಿಸಿದ್ದಾರೆ. ಕೋಲಾರ, ಸೀತಿಬೆಟ್ಟ ಮೊದಲಾದ ಸ್ಥಳಗಳಲ್ಲಿ ನಾಥಪಂಥದ ಭೈರವ, ಭೈರವಿ ಶಿಲ್ಪಗಳು ಕಂಡುಬಂದಿವೆ. ಯಲ್ದೂರು, ನಂದಿ, ಕುರುಡುಮಲೆ ಮೊದಲಾದೆಡೆ ಕಾಳಾಮುಖ ಶೈವರ ದೇವಾಲಯಗಳಿವೆ.

ಉತ್ತನೂರಿನ ೯೬೯ರ ಶಾಸನದ ಪ್ರಕಾರ ನನ್ನಿ ನೊಳಂಬ ಆಳುತ್ತಿದ್ದಾಗ, ಉತ್ತನೂರ ೧೨ ಬ್ರಾಹ್ಮಣರಿಗೆ ೧೦೦ ಗದ್ಯಾಣ ಹೊನ್ನನ್ನು ಪುದುವಟ್ಟಾಗಿ ನೀಡಿ, ಅದರಿಂದ ಬರುವ ಆದಾಯದಿಂದ ಬ್ರಾಹ್ಮಣರೈವರಿಗೆ ಭೋಜನ ನೀಡುವ ವ್ಯವಸ್ಥೆ ಮಾಡಲಾಯಿತು. ಅಲ್ಲದೆ, ಪರಮೇಶ್ವರ ದೇವರ ನಿತ್ಯಸೇವೆಗೆಂದು ೪೦ ಗದ್ಯಾಣದ ಭೂಮಿ ಖರೀದಿಸಿ ದಾನ ಬಿಟ್ಟ ಪ್ರಸ್ತಾಪವೂ ಅದರಲ್ಲಿದೆ. ಕ್ರಿ.ಶ.೮೮೦ರ ನಂದಿಯ ಶಾಸನದಲ್ಲಿ ಅಲ್ಲಿನ ದೇವಾಲಯಕ್ಕೆ ಗೋಪುರ ನಿರ್ಮಿಸಿದ ಉಲ್ಲೇಖವಿದೆ. ನರಸಾಪುರದ ಶಾಸನದಿಂದ (೧೦೨೦) ಬರಗೂರ ಅರಸನ ಮಗ ದೇಯಮಗೌಂಡನು ಆದಿತ್ಯ ದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದಾಗಿ ತಿಳಿದುಬರುತ್ತದೆ. ಜಿಲ್ಲೆಯಾದ್ಯಂತ ಇಂತಹ ನೂರಾರು ಶಾಸನಗಳು ದೊರೆಯುತ್ತವೆ.

**ಜೈನಧರ್ಮ:** ಕರ್ಮದ ಕಟ್ಟನ್ನು ಮುರಿದು ಸಂಸಾರವನ್ನು ದಾಟಿ ಮುಕ್ತಿ ಪಡೆದ ಜೀವರಿಗೆ ಜಿನರು'ಎಂದು ಹೆಸರು. ಅಂತಹ ಜಿನರಿಂದ ಉಪದೇಶಿಸಲ್ಪಟ್ಟ ಮತವೇ ಜೈನ ಮತ. ಅಹಿಂಸೆ ಮತ್ತು ದಯೆಗಳು ಜೈನಧರ್ಮದ ಮೂಲಸೂತ್ರಗಳಾಗಿವೆ. ತಮ್ಮ ಕೆಲಸಕ್ಕನುಗುಣವಾಗಿ ಫಲಪ್ರಾಪ್ತಿಯಾಗುತ್ತದೆ ಎಂದು ನಂಬಿರುವ ಜೈನರು ಹಿಂದೂಗಳಂತೆ ಪ್ರತ್ಯೇಕ ದೈವದ ಪರಿಕಲ್ಪನೆ ಹೊಂದಿರುವುದಿಲ್ಲ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ದೇವರು ಕಾರಣನಲ್ಲ ಎಂಬುದು ಅವರ ಪ್ರಬಲ ನಂಬಿಕೆಯಾಗಿದೆ. ಜೈನರಲ್ಲಿ ದಿಗಂಬರ ಹಾಗೂ ಶ್ವೇತಾಂಬರ ಎಂಬ ಎರಡು ಪಂಗಡಗಳಿವೆ. ಇವರಲ್ಲಿಯೂ ಉಪನಯನ ಮೊದಲಾದ ಸಂಸ್ಕಾರಗಳಿವೆ. ಈಗಲೂ ಜಿಲ್ಲೆಯ ಗುಡಿಬಂಡೆ ಒಂದು ಪ್ರಮುಖ ಜೈನಕ್ಷೇತ್ರವಾಗಿದೆ. ಗೌರಿಬಿದನೂರು ತಾಲೂಕಿನ ಕಡಬೂರು, ನಾಮಕೊಂಡ್ಲು, ಮಂಚೇನಹಳ್ಳಿ, ಕುರುಡಿ ಮೊದಲಾದೆಡೆಗಳಲ್ಲಿ ಜಿನಮಂದಿರಗಳಿವೆ.

ಪ್ರಾಚೀನತೆಯ ದೃಷ್ಟಿಯಿಂದ ಕ್ರಿ.ಶ.೪–೫ನೆಯ ಶತಮಾನದಲ್ಲಿಯೇ ಜಿಲ್ಲೆಯ ಕೆಲವೆಡೆ ಜೈನ ಬಸದಿಗಳು ನಿರ್ಮಾಣವಾಗಿದ್ದ ಅಂಶ ತಿಳಿದುಬರುತ್ತದೆ. ಶ್ರೀನಿವಾಸಪುರ ತಾಲೂಕಿನ ಯಲ್ದೂರು ಹಿಂದಿನ ಪೇರೂರು ಆಗಿದ್ದಿತೆಂದೂ ಅಲ್ಲಿನ ಬಸದಿಗಳ ಅವಶೇಷಗಳು ಕ್ರಿ.ಶ.೪–೫ನೇ ಶತಮಾನಕ್ಕೆ ಸೇರಿದ್ದವೆಂದೂ ಅಧ್ಯಯನಕಾರ ಎಂ.ಜಿ.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ. ಮಾಲೂರು ತಾಲೂಕಿನ ನೊಣಮಂಗಲದ (ಹಿಂದಿನ ಕಣ್ಣಮಂಗಲ; ಈಚೆಗೆ ಈ ಊರನ್ನು ಜಯಮಂಗಲ ಎಂದು ಕರೆಯಲಾಗುತ್ತಿದೆ) ತಾಮ್ರಶಾಸನದಲ್ಲಿ ಉರನೂರಿನ ಜೈನ ಬಸದಿಗೆ ಚನ್ನೇಲಕರನಿ ಗ್ರಾಮವನ್ನು ದಾನವಾಗಿ ಕೊಟ್ಟ ವಿವರಗಳಿವೆ. ನಂದಿಯ ಗೋಪೀನಾಥ ಗುಡ್ಡದಲ್ಲಿನ ಒಂದು ಶಾಸನದಲ್ಲಿ (ಕ್ರಿ.ಶ.ಸು.೭೫೦?) ಅಲ್ಲಿಯ ಬೃಹತ್ ಜಿನೇಂದ್ರ ಚೈತ್ಯಾಲಯವನ್ನು ರಾಮ ನಿರ್ಮಿಸಿದನು ಅದನ್ನು ಕುಂತಿದೇವಿ ವಿನೂತನವಾಗಿ ಪುನರ್ ನಿರ್ಮಿಸಿದಳು ಎಂದು ನಿರೂಪಿಸಲಾಗಿದೆ. ನೊಣಮಂಗಲದ ಶಾಸನದಲ್ಲಿ ಇಮ್ಮಡಿ ಮಾಧವನ ಕಾಲದಲ್ಲಿ ಮುದುಕೊಟ್ಟೂರು ವಿಷಯದ ಪೆರ್ಬೊಳಲು ಗ್ರಾಮದ ಮೂಲ ಸಂಘದ ವೀರದೇವನು ಅರ್ಹತ್ ಆಲಯ ನಿರ್ಮಿಸಿ, ಕೆರೆ ಕೆಳಗೆ ೧೨ ಖಂಡುಗ ವಾಪ ಭೂಮಿಯೊಂದಿಗೆ ಕುಮಾರಪುರ ಗ್ರಾಮವನ್ನೂ ದಾನಬಿಟ್ಟ ಪ್ರಸ್ತಾಪವಿದೆ. ಇದೇ ಊರಿನ ಇನ್ನೊಂದು ಶಾಸನದಲ್ಲಿ ಗಂಗದೊರೆ ಅವಿನೀತನು ಉರನೂರಲ್ಲಿ ಚಂದ್ರನಂದಿ ಸ್ಥಾಪಿತ ಅರ್ಹತ್ ಬಸದಿಗೆ ಹಾಗೂ ಪೇರೂರಿನ ಏವನಿ ಅಡಿಗಳ ಅರ್ಹತ್ ಬಸದಿಗೆ ದಾನಬಿಟ್ಟ ಉಲ್ಲೇಖವಿದೆ. ಹೀಗೆಯೇ ತೊಳ್ಳ (ಈಗಿನ ತೊಟ್ಲಿ), ಗೋಪೀನಾಥಗುಡ್ಡ, ಬಂಗಾರಪೇಟೆ, ಗುಡಿಬಂಡೆ, ಅರಾಭಿಕೊತ್ತನೂರು, ಗಾಂಡ್ಲಳ್ಳಿ, ಕೆ.ಜಿ.ಎಫ್., ಕೋಲಾರ ಮೊದಲಾದೆಡೆಯಲ್ಲಿನ ತೀರ್ಥಂಕರರ ಶಿಲ್ಪಗಳು ಹಾಗೂ ಶಾಸನೋಕ್ತ ಮಾಹಿತಿಗಳಿಂದ ಈ ಭಾಗದಲ್ಲಿ ಜೈನಧರ್ಮ ವ್ಯಾಪಕವಾಗಿದ್ದ ಅಂಶ ಮನವರಿಕೆಯಾಗುತ್ತದೆ.

**ಕ್ರೈಸ್ತ ಧರ್ಮ:** ಏಸುಕ್ರಿಸ್ತನ ತತ್ವಗಳನ್ನು ಅನುಸರಿಸುವವರನ್ನು ಕ್ರೈಸ್ತ ಧರ್ಮೀಯರೆಂದು ಗುರುತಿಸ ಲಾಗುತ್ತಿದೆ. ಶತ್ರುಗಳನ್ನೂ ಪ್ರೀತಿಸಿ. ಇನ್ನೊಬ್ಬರನ್ನು ಮಾನಸಿಕವಾಗಿ ನೋಯಿಸಿದರೂ ಅವರನ್ನು ಕೊಂದಂತೆಯೇ. ಪರಿಶುದ್ಧತೆಯೇ ಜೀವನದ ಸಾರ. ಏಕಾಂತದಲ್ಲಿ ನಿಮ್ಮ ಹೃದಯ ಎಂಬ ದೇವಾಲಯದಲ್ಲಿನ ತಂದೆಯನ್ನು ಪ್ರಾರ್ಥಿಸಿ. ದೇವರಿಗೆ ಎಲ್ಲರೂ ಸಮಾನರು. ದೇವರನ್ನು ತಿಳಿಯಲು ಸನ್ಯಾಸಿಗಳಾಗಬೇಕಿಲ್ಲ. ನಿತ್ಯದ ಕಾರ್ಯಗಳನ್ನು ಮಾಡುತ್ತಲೇ ದೇವರನ್ನು ಧ್ಯಾನಿಸಿ, ದೀನದಲಿತರಿಗೆ ಪ್ರೀತಿಯಿಂದ ನೆರವಾಗಿರಿ–ಇಂತಹ ಉಪದೇಶಗಳನ್ನು ಕ್ರಿಸ್ತನು ಬೋಧಿಸಿದ್ದಾನೆ. ಜಿಲ್ಲೆಯ ಕ್ರೈಸ್ತರಲ್ಲಿ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟ್ ಎರಡೂ ಪಂಗಡದವರು ಇದ್ದಾರೆ. ತಾತ್ವಿಕ ದೃಷ್ಟಿಕೋನಕ್ಕನುಗುಣವಾಗಿ ಈ ಎರಡೂ ಪಂಗಡದವರ ಆಚಾರ, ಸಂಸ್ಕಾರಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನತೆ ಕಂಡುಬರುತ್ತದೆ.

**ಕೋಲಾರ ಭಾಗದಲ್ಲಿ ಕ್ರೈಸ್ತ ಧರ್ಮದ ಪ್ರಾರಂಭ:** ಫ್ರೆಂಚ್ ಜೆಸುಯಿಟ್‌ರ ಆಶ್ರಯದಲ್ಲಿ ೧೭೦೦ರಲ್ಲಿ ಆರಂಭವಾದ ಕರ್ನಾಟಿಕ್ ಮಿಷನ್‌ನ ವ್ಯಾಪ್ತಿಯಲ್ಲಿ ಕೋಲಾರ, ಮುಳಬಾಗಿಲು, ಶಿಡ್ಲಘಟ್ಟ ಹಾಗೂ ಚಿಕ್ಕಬಳ್ಳಾಪುರ ಪ್ರಾಂತ್ಯಗಳೂ ಸೇರಿದ್ದವು. ದೆಲಫೋನ್ಸ್ತಾನ್, ಲೆಗಾಕ್, ಕಾಲ್‌ಮೆಟ್ ಮೊದಲಾದವರು ಈ ಭಾಗಗಳಲ್ಲಿ ಗುರುಗಳಾಗಿ ಮತ ಪ್ರಚಾರ ನಡೆಸಿದರು. ಮೌಡ್ಯು ಎಂಬಾತನು ತಮಿಳುನಾಡಿನ ಕಾಂಚಿಪುರ ಬಳಿಯ ಕರ್ರೈಪೂಂಡಿಯಿಂದ ೧೭೦೧ರಲ್ಲಿ ಧರ್ಮ ಪ್ರಚಾರವನ್ನು ಪ್ರಾರಂಭಿಸಿ ತಾಯಲೂರು ಮಾರ್ಗವಾಗಿ ಕೋಲಲ (ಕೋಲಾರ)ಕ್ಕೂ ಬಂದಿದ್ದನು. ಅಲ್ಲಿ ಆತನಿಗೆ ದೊರೆತ ಒಬ್ಬ ಬ್ರಾಹ್ಮಣನ ಸಂಪರ್ಕ ಆಶಾದಾಯಕವಾಗಿತ್ತಾದರೂ, ಮುಸ್ಲಿಮರ ಟೀಕೆಯನ್ನು ಸಹಿಸಲಾರದೆ ಅಲ್ಲಿಂದ ಪುಂಗನೂರಿಗೆ ಹೋದನು. ಅಲ್ಲಿ ಕೆಲವರು ಕ್ರೈಸ್ತರಾದರು. ಇದರಿಂದ ಉತ್ತೇಜಿತಗೊಂಡ ಆತನು ಪಾಂಡಿಚೆರಿಯಿಂದ ದೆಲಫೋನ್ಸ್ತಾನ್ ಎಂಬಾತನನ್ನು ಪುಂಗನೂರಿಗೆ ಕಳುಹಿಸಿದನು. ಆತನು ಪುಂಗನೂರು, ಆ ಬಳಿಕ ದೇವನಹಳ್ಳಿಗಳಲ್ಲಿ ದೊರೆತ ಸ್ಥಳೀಯ ಬ್ರಾಹ್ಮಣರು ಹಾಗೂ ಪಾಳೆಯಗಾರರ ನೆರವಿನಿಂದ ಮತಾಂತರ ಕಾರ್ಯ ನಡೆಸಿ, ಮುಂದೆ ಚಿಕ್ಕಬಳ್ಳಾಪುರಕ್ಕೆ ಬಂದನು. ಚಿಕ್ಕಬಳ್ಳಾಪುರದಲ್ಲಿಯೂ ತನ್ನ ಆ ಚಟುವಟಿಕೆಗಳನ್ನು ವಿಸ್ತರಿಸಿದ್ದಲ್ಲದೆ ೧೭೦೭–೮ರಲ್ಲಿ ಒಂದು ಚರ್ಚ್ ಅನ್ನು ಕಟ್ಟಿಸಿದನೆನ್ನಲಾಗಿದೆ. ೧೭೦೯ರಲ್ಲಿ ವೈಷ್ಣವ ಪಂಥದ ದಾಸರು ಈ ಧರ್ಮದ ವಿರುದ್ಧ ಮೊದಲ ಬಾರಿಗೆ ಸಂಘಟಿತ ರೀತಿಯಲ್ಲಿ ಪ್ರತಿಭಟನೆಯನ್ನು ಚಿಕ್ಕಬಳ್ಳಾಪುರದಲ್ಲಿ ಪ್ರಾರಂಭಿಸಿದರು. ಆದರೂ ಕೆಲವು ಹಿಂದೂ ಮುಖಂಡರ ಅನುಕಂಪದಿಂದ ಕ್ರೈಸ್ತರಿಗೆ ಹೆಚ್ಚಿನ ತೊಂದರೆಗಳಾಗಲಿಲ್ಲ. ಅಂತೆಯೇ ಮುಂದಿನ ವರ್ಷಗಳಲ್ಲಿ ಅನೇಕ ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ರೆಡ್ಡಿಗಳು, ಪರಿಶಿಷ್ಟ ಜಾತಿಯವರು ಹಾಗೂ ಮುಸ್ಲಿಮರು ಮತಾಂತರ ಹೊಂದಿದರು. ಆದರೆ, ಸು. ೧೭೧೨ರಲ್ಲಿ ಚಿಕ್ಕಬಳ್ಳಾಪುರಕ್ಕೆ ಮೈಸೂರು ಸೇನೆ ಮುತ್ತಿಗೆ ಹಾಕಿದಾಗ ಕ್ರೈಸ್ತ ಗುರುವಾಗಿದ್ದ ದೆಲಫೋನ್‌ತಾನ್ ಸ್ವತಃ ಅಲ್ಲಿದ್ದ ಚರ್ಚ್ ಅನ್ನು ಕೆಡವಿಹಾಕಿದನು. ಅದೇ ಮುತ್ತಿಗೆಯ ಸಂದರ್ಭದಲ್ಲಿ ಕಾಣಿಸಿಕೊಂಡ ಯಾವುದೋ ಅಂಟು ಜಾಡ್ಯವೊಂದು ಇಬ್ಬರು ಕ್ರೈಸ್ತ ಉಪದೇಶಕರನ್ನು ಬಲಿ ತೆಗೆದುಕೊಂಡಿತು. ದೆಲ್‌ಫೋನ್‌ತಾನನಿಗೂ ಆ ಅಂಟು ರೋಗ ತಗುಲಿದಾಗ ಆತನಿಗೆ ಔಷಧಿ ನೀಡಿದ್ದಲ್ಲದೆ, ಕರಾವಳಿ ಪ್ರದೇಶಕ್ಕೆ ಕರೆದೊಯ್ದುದರಿಂದ ಆತ ಬದುಕುಳಿಯುತ್ತಾನೆ. ದಾಸ ಪಂಥದವರ ಅಹವಾಲಿನಂತೆ ಸ್ಥಳೀಯ ಪಾಳೆಯಗಾರನು ಕ್ರೈಸ್ತರು ಚರ್ಚ್‌ಅನ್ನು ಒಂದು ಕೋಟೆಗೋಡೆಯಂತೆ ಕಟ್ಟುವುದರ ಸಂಬಂಧ ಕೆಲವು ನಿರ್ಬಂಧಗಳನ್ನು ವಿಧಿಸಿದನು. ಫ್ರಾನ್ಸಿನಿಂದ ಗುರುವಾಗಿ ಬಂದಿದ್ದ ಕಾಲ್ಮೆಟ್ ಎಂಬಾತ ಚಿಕ್ಕಬಳ್ಳಾಪುರದ ಬ್ರಾಹ್ಮಣರ ನೆರವಿನಿಂದ ವೇದಗಳನ್ನು ಅಭ್ಯಾಸ ಮಾಡಿದ್ದಲ್ಲದೆ, ನಾಲ್ಕು ವೇದಗಳ ಹಸ್ತಪ್ರತಿಗಳನ್ನು ಫ್ರಾನ್ಸಿನ ದೊರೆಯ ಆದೇಶದಂತೆ ಅಲ್ಲಿನ The Royal Oriental Libraryಗೆ ೧೭೩೩ರಲ್ಲಿ ಮೊದಲ ಬಾರಿಗೆ ಕಳುಹಿಸಿದನು. ಇಂತಹ ದಾಖಲೆಗಳಿಂದ ಕ್ರೈಸ್ತ ಧರ್ಮವು ೧೮ನೇ ಶತಮಾನದಿಂದಲೇ ಕೋಲಾರ ಭಾಗದಲ್ಲಿ ಕಾಣಿಸಿಕೊಂಡಿತೆಂದು ಭಾವಿಸಬಹುದಾಗಿದೆ (ಆಧಾರ: ಬೆಂಗಳೂರು ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ).

**ಇಸ್ಲಾಂ ಧರ್ಮ:** ಮಹಮದ್ ಪೈಗಂಬರ್ ಸ್ಥಾಪಿಸಿದ ಇಸ್ಲಾಂ ಧರ್ಮದ ಪ್ರಕಾರ ದೇವರು ಒಬ್ಬನೇ; ಆತ ಅನಂತ, ರೂಪರಹಿತ. ದೇವರಿಗೆ ಹೋಲಿಕೆ ಹಾಗೂ ಆಕಾರ ಕೊಡಬಾರದು. ಪರರನ್ನು ಸೋದರರಂತೆ ಕಾಣುವುದು, ಬಡವರಿಗೆ ದಾನ ಮಾಡುವುದು, ಸ್ವಶ್ರಮದಿಂದ ಸಂಪಾದನೆ ಮಾಡುವುದು, ರಂಜಾನ್‌ನಲ್ಲಿ ಉಪವಾಸ ಮಾಡುವುದು ಮೊದಲಾದ ಕಟ್ಟಳೆಗಳನ್ನೂ ಈ ಧರ್ಮವು ವಿಧಿಸಿದೆ. ಜಿಲ್ಲೆಯ ಮುಸ್ಲಿಮರಲ್ಲಿ ಸೈಯದ್, ಷೇಕ್, ಮುಘಲ್, ಪಠಾಣ್ ಮೊದಲಾದ ಒಳಪಂಗಡಗಳವರು ಇದ್ದಾರೆ. ಅರಳೆ ಶುದ್ಧಿ ಮಾಡುವ, ಹಾಸಿಗೆ ದಿಂಬುಗಳನ್ನು ಹೊಲಿದುಕೊಡುವ ಕಾಯಕವನ್ನು ಮುಖ್ಯವೃತ್ತಿಯಾಗಿ ಉಳ್ಳ ಪಿಂಜಾರರು ಇದ್ದಾರೆ. ಜಿಲ್ಲೆಯ ಎಲ್ಲಾ ಪಟ್ಟಣ, ವ್ಯಾಪಾರ ಕೇಂದ್ರಗಳಲ್ಲಿ ಮುಸ್ಲಿಮರು ಅಧಿಕಸಂಖ್ಯೆಯಲ್ಲಿ ಕಂಡುಬರುತ್ತಾರೆ. ಮುಸ್ಲಿಮರ ಕೆಲವು ಧಾರ್ಮಿಕ ಚಟುವಟಿಕೆಗಳಲ್ಲಿ ಹಿಂದೂಗಳೂ ನೆರವಾಗುವುದು ಸಾಮಾನ್ಯ ನಡವಳಿಕೆಯಾಗಿದೆ. ಕೋಲಾರ ತಾಲೂಕಿನ ನೂಲುಪುರ ಕೋಟೆಯಲ್ಲಿ (ಪ್ರಸ್ತುತ, ನೂಲಾಪುರ ಹೆಸರಿನ ಗ್ರಾಮವು ನೆರೆಯ ಶ್ರೀನಿವಾಸಪುರ ತಾಲೂಕಿನಲ್ಲಿದೆ) ದೊರೆತ ೧೭೯೯ರ ಒಂದು ಶಾಸನದಲ್ಲಿ ದಲಸನೂರು ಹೋಬಳಿಯ ನಾಡಗೌಡ ಅಯ್ಯಮಗೌಡ, ಕುಲಕರ್ಣಿ ಅಣ್ಣಮ ಹಾಗೂ ಇತರರು ನೂರ್ ಮಹಮದ್‌ಗೆ ಗಾಂಡ್ಲಹಳ್ಳಿ ಮುಚಲಕುಂಟೆಯಲ್ಲಿ ಭೂಮಿಯನ್ನು ಮಸೀದಿಯ ನಿರ್ವಹಣೆಗೆಂದು ದಾನ ನೀಡಿದ ಉಲ್ಲೇಖವಿದೆ.

**ಧಾರ್ಮಿಕ ಸಂಸ್ಥೆಗಳು**

ಧಾರ್ಮಿಕ ಹಿತಾಸಕ್ತಿ, ಧರ್ಮ ಪ್ರಚಾರ ಇತ್ಯಾದಿಗಳನ್ನು ಉದ್ದೇಶವಾಗಿಟ್ಟುಕೊಂಡು ಜಿಲ್ಲೆಯಲ್ಲಿ ಅನೇಕ ಸಂಘ–ಸಂಸ್ಥೆಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಕೆಲವು ತಮ್ಮ ಮತ ಸಂಪ್ರದಾಯದ ಧಾರ್ಮಿಕ ಚಟುವಟಿಕೆಗಳನ್ನು ಆಚರಿಸುವುದಕ್ಕೇ ಸೀಮಿತವಾಗಿದ್ದರೆ, ಇತರ ಕೆಲವು ಸಂಸ್ಥೆಗಳು ಸಾಮಾಜಿಕ ಹಿತಚಿಂತನೆಯ ಸೇವಾ ಕಾರ್ಯಗಳಲ್ಲಿಯೂ ದುಡಿಯುತ್ತಿವೆ. ಇಂತಹ ಕೆಲವು ಪ್ರಮುಖ ಮತ ಸಂಸ್ಥೆಗಳ ಕಿರು ಪರಿಚಯ ಇಲ್ಲಿದೆ:

**ಆದಿಚುಂಚನಗಿರಿ ಮಹಾಸಂಸ್ಥಾನ ಮಠ:** ಜಿಲ್ಲೆಯಲ್ಲಿ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಸೇವೆಯನ್ನು ನಡೆಸುವ ಉದ್ದೇಶದಿಂದ ೧೯೮೬ರಲ್ಲಿ ಬಾಲಗಂಗಾಧರನಾಥ ಸ್ವಾಮಿ ಅವರು ಚಿಕ್ಕಬಳ್ಳಾಪುರದಲ್ಲಿ ಈ ಮಠವನ್ನು ಪ್ರಾರಂಭಿಸಿದ್ದಾರೆ. ಇದು ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯ ಒಂದು ಶಾಖಾ ಮಠವಾಗಿದ್ದು, ನಾಥ ಸಂಪ್ರದಾಯಕ್ಕೆ ಸೇರಿದ್ದಾಗಿದೆ. ಈ ಮಠದ ಆಶ್ರಯದಲ್ಲಿ ಜಿಲ್ಲೆಯಲ್ಲಿ ಹಲವು ಶಾಲಾ ಕಾಲೇಜುಗಳಲ್ಲದೆ ಸಂಶೋಧನಾ ಕೇಂದ್ರ, ವೇದಿಕ್ ಸೆಂಟರ್, ತಪೋವನ ಮೊದಲಾದವೂ ಸ್ಥಾಪಿತವಾಗಿವೆ. ಯುವಜನರ ವ್ಯಕ್ತಿತ್ವ ವಿಕಸನಗೊಳಿಸುವ ಯೋಜನೆಯಂತೆ ಯುವಜನ ಜಾಗೃತಿ ಶಿಬಿರ, ಮಹಿಳಾ ಜಾಗೃತಿ ಶಿಬಿರಗಳನ್ನು ಪ್ರತೀ ವರ್ಷ ನಡೆಸಲಾಗುತ್ತಿದೆ. ಕರ್ನಾಟಕ ವನಸಂವರ್ಧನಾ ಟ್ರಸ್ಟ್‌ನ ವತಿಯಿಂದ ಜಿಲ್ಲೆಯಲ್ಲಿ ಲಕ್ಷಾಂತರ ಗಿಡ ನೆಡುವುದಲ್ಲದೆ, ಗ್ರಾಮಾಂತರ ಪ್ರದೇಶದಲ್ಲಿ ಹಲವು ಬಗೆಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನೂ ನಡೆಸಲಾಗುತ್ತಿದೆ.

**ಆಂಜನಪ್ಪ ಸ್ವಾಮಿ ಆಶ್ರಮ:** ಕೋಲಾರ ತಾಲೂಕಿನ ಗಟ್ಟಹಳ್ಳಿಯಲ್ಲಿರುವ ಈ ಆಶ್ರಮವು ತಾತ್ವಿಕ ಬದುಕನ್ನು ನಡೆಸಿದ ಆಂಜನಪ್ಪ ಸ್ವಾಮಿ ಎಂಬುವರಿಂದ ೧೯೪೯ರಲ್ಲಿ ನಿರ್ಮಿತವಾಗಿದೆ. ಜನರಲ್ಲಿ ತತ್ವ ಪ್ರಚಾರ ಮಾಡುವುದು, ಅದರ ಅಂಗವಾಗಿ ಆರಾಧನೆಗಳು, ಉತ್ಸವಗಳು ಮೊದಲಾದುವನ್ನು ನಡೆಸುವುದು ಈ ಆಶ್ರಮದ ಉದ್ದೇಶವಾಗಿದೆ. ಪ್ರತೀ ವಾರ ಉಚಿತ ವೈದ್ಯಕೀಯ ಶಿಬಿರಗಳನ್ನೂ ಇಲ್ಲಿ ನಡೆಸಲಾಗುತ್ತಿದೆ.

**ಚಿನ್ಮಯ ಸಾಂದೀಪನಿ ಆಶ್ರಮ:** ಕೋಲಾರ ತಾಲೂಕು ಚೊಕ್ಕಹಳ್ಳಿಯಲ್ಲಿ ಸ್ವಾಮಿ ಚಿನ್ಮಯಾನಂದ ಅವರಿಂದ ಈ ಆಶ್ರಮ ೧೯೯೦ರಲ್ಲಿ ಸ್ಥಾಪನೆಯಾಯಿತು. ಬೆಂಗಳೂರಿನ 'ಕರ್ನಾಟಕ ಚಿನ್ಮಯ ಸೇವಾ ಟ್ರಸ್ಟ್' ಈ ಆಶ್ರಮವನ್ನು ನಡೆಸುತ್ತಿದೆ. ಆಧ್ಯಾತ್ಮಿಕ ಅರಿವಿನ ಜೊತೆಗೆ ಸಮಾಜೋಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಜನರನ್ನು ತೊಡಗಿಸಿ, ಅಗತ್ಯವುಳ್ಳವರಿಗೆ ಉಚಿತ ಸೇವೆಗಳನ್ನು ಒದಗಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಅದಕ್ಕಾಗಿ ಶಿಸ್ತಿನ ಸ್ವಯಂ ಸೇವಕರನ್ನು ರೂಪಿಸಲು ಸಂಸ್ಥೆಯು 'ಸಾಂದೀಪನಿ ಸಾಧನಾಲಯ' ಎಂಬ ವಿದ್ಯಾಲಯಗಳನ್ನು ಸ್ಥಾಪಿಸಿದ್ದು, ಚೊಕ್ಕಹಳ್ಳಿಯ ಆಶ್ರಮ ಅಂತಹ ಒಂದು ಘಟಕವಾಗಿದೆ. ಜಾತಿ–ಮತ, ಮಡಿ–ಮೈಲಿಗೆಯ ಕಟ್ಟುಪಾಡುಗಳಿಲ್ಲದ ಈ ಆಶ್ರಮದಲ್ಲಿ ಮಾತೆಯರು, ಮಹನೀಯರು, ಆಚಾರ್ಯರಿಗಾಗಿ ಕುಟೀರಗಳಿವೆ; ಮಕ್ಕಳಿಗಾಗಿ ಶಾಲೆಗಳಿವೆ. ಗ್ರಾಮೀಣರ ಆರೋಗ್ಯದ ತಪಾಸಣೆಗಾಗಿ ಚಿನ್ಮಯ ಉಚಿತ ಆರೋಗ್ಯ ಕೇಂದ್ರವೂ ಇದೆ. ಬೇಸಿಗೆಯಲ್ಲಿ ಮಕ್ಕಳು ಹಾಗೂ ಯುವಜನರಿಗೆ ವಿವಿಧ ಕಲಿಕಾಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಉಳಿದಂತೆ, ವಾರ್ಷಿಕ ಹಬ್ಬ–ಹುಣ್ಣಿಮೆಗಳಲ್ಲಿ ಕೆಲವು ಧಾರ್ಮಿಕ ಆಚರಣೆಗಳನ್ನು ಇಲ್ಲಿ ನಡೆಸಲಾಗುತ್ತದೆ.

**ಥಿಯಾಸಫಿಕಲ್ ಸೊಸೈಟಿ:** ಅಂತರರಾಷ್ಟ್ರೀಯ ಆಧ್ಯಾತ್ಮ ಸಂಸ್ಥೆಯಾದ ಥಿಯಾಸಫಿಕಲ್ ಸೊಸೈಟಿಯ ಶಾಖೆಯು ೧೯೦೫ರಲ್ಲಿ ಕೋಲಾಹಲ ಥಿಯಾಸಫಿಕಲ್ ಲಾಡ್ಜ್ ಹೆಸರಿನೊಂದಿಗೆ ಕೋಲಾರದಲ್ಲಿ ಸ್ಥಾಪಿತವಾಯಿತು. ೧೯೬೭ರಲ್ಲಿ ಇದರ ಹೆಸರು ಅಂತರ ಗಂಗಾ ಥಿಯಾಸಫಿಕಲ್ ಲಾಡ್ಜ್ ಎಂದು ಬದಲಾಯಿತು. ವಿಶ್ವಪ್ರೇಮ, ವಿಶ್ವಶಾಂತಿಯ ಸ್ಥಾಪನೆ ಈ ಸಂಸ್ಥೆಯ ಉದ್ದೇಶಗಳಾಗಿವೆ. ಸತ್ಯಕ್ಕೆ ಮಿಗಿಲಾದ ಧರ್ಮವಿಲ್ಲ ಎಂಬುದು ಇದರ ಧ್ಯೇಯವಾಕ್ಯವಾಗಿದೆ. ಜಾತಿ, ಮತ, ಲಿಂಗ, ವರ್ಗ ಬೇಧಗಳಿರದ ಸಾರ್ವತ್ರಿಕ ಸೋದರ ಭಾವ ಬೆಳೆಸುವುದು, ಮತ, ತತ್ವಶಾಸ್ತ್ರಗಳ ತುಲನಾತ್ಮಕ ಅಧ್ಯಯನ ಹಾಗೂ ವಿಜ್ಞಾನದ ಅಧ್ಯಯನಕ್ಕೆ ಪ್ರೋತ್ಸಾಹ ನೀಡುವುದು, ಪ್ರಕೃತಿಯ ಗುಪ್ತ ನಿಯಮಗಳನ್ನು ಹಾಗೂ ಮಾನವನಲ್ಲಿರುವ ಸುಪ್ತಶಕ್ತಿಗಳನ್ನು ಕಂಡುಹಿಡಿಯುವುದು ಈ ಸಂಸ್ಥೆಯ ಮೂಲ ಉದ್ದೇಶಗಳೆನ್ನಲಾಗಿದೆ. ಆ ಹಿನ್ನೆಲೆಯಲ್ಲಿ ಆಧ್ಯಾತ್ಮ ವ್ಯಾಸಂಗ ಶಿಬಿರ ನಡೆಸುವುದು, ಪ್ರಾಣಿ ಹಿಂಸೆ, ಪರಿಸರ ನಾಶದ ವಿರುದ್ಧ ಕರಪತ್ರಗಳ ಮೂಲಕ ಅರಿವು ಮೂಡಿಸುವುದು, ಗ್ರಂಥಗಳ ಪ್ರಕಟಣೆ, ಅಂಗವಿಕಲರು,

ಶಾಲಾ ಕಾಲೇಜುಗಳಿಗೆ ಸಹಾಯ ನೀಡುವುದು, ಉಚಿತ ವೈದ್ಯಕೀಯ ಶಿಬಿರಗಳಿಗೆ ನೆರವಾಗುವುದು ಮೊದಲಾದ ಚಟುವಟಿಕೆಗಳನ್ನು ಈ ಸಂಸ್ಥೆ ನಡೆಸುತ್ತದೆ. ಮುಳಬಾಗಿಲು, ಚಿಂತಾಮಣಿ, ಕೋನುಗುಂಟ್ಲು, ಶ್ರೀನಿವಾಸಪುರ ಮೊದಲಾದೆಡೆ ಇದರ ಶಾಖೆಗಳಿದ್ದು, ಇಲ್ಲಿ ಡಾ.ಅನಿಬೆಸೆಂಟರ ಜನ್ಮ ದಿನ, ಸ್ಥಾಪನಾ ದಿನ ಮೊದಲಾದ ಕಾರ್ಯಗಳನ್ನು ಪ್ರತೀ ವರ್ಷ ಆಚರಿಸಲಾಗುತ್ತಿದೆ.

**ನಿಡುಮಾಮಿಡಿ ಮಹಾಸಂಸ್ಥಾನ ಮಠ:** ಬಾಗೇಪಲ್ಲಿ ತಾಲೂಕು ಗೂಳೂರಿನಲ್ಲಿರುವ ಈ ಮಠವನ್ನು ೧೧ನೆಯ ಶತಮಾನದಲ್ಲಿ ಶ್ರೀಶೈಲದಿಂದ ಬಂದ ಚಂದ್ರಗುಂಡ ದೇಶಿಕೇಂದ್ರರು ಸ್ಥಾಪಿಸಿದರೆನ್ನಲಾಗಿದೆ. ಇದು ವೀರಶೈವ ಸಂಪ್ರದಾಯದ ಪೀಠವಾಗಿದ್ದು, ಈವರೆಗೆ ೩೭ ಪೀಠಾಧೀಶರು ಆಗಿಹೋಗಿದ್ದು, ಈಗಿನ ಪೀಠಾಧೀಶ ವೀರಭದ್ರ ಚನ್ನಮಲ್ಲ ಮಹಾಸ್ವಾಮಿ ಅವರು ಇದನ್ನು 'ಮಾನವಧರ್ಮಪೀಠ'ವಾಗಿ ಪರಿವರ್ತಿಸಿದ್ದಾರೆ. ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಮೂಢನಂಬಿಕೆಗಳು, ಜಾತಿಪದ್ಧತಿ, ಮದ್ಯ ಹಾಗೂ ಮಾದಕ ದ್ರವ್ಯಗಳ ಸೇವನೆ ವಿರುದ್ಧ ಜನಜಾಗೃತಿ ಉಂಟುಮಾಡುವುದು, ಸಮಾನತೆ, ಸಾಮಾಜಿಕ ನ್ಯಾಯಗಳ ಪ್ರತಿಪಾದನೆಗಾಗಿ ಶ್ರಮಿಸುವುದು ಈ ಪೀಠಾಧೀಶರ ಆದರ್ಶಗಳಾಗಿವೆ. ಪೀಠದ ವತಿಯಿಂದ ಅನೇಕ ಶಾಲಾ ಕಾಲೇಜುಗಳು, ಬಡವಿದ್ಯಾರ್ಥಿಗಳ ಉಚಿತ ವಿದ್ಯಾರ್ಥಿ ನಿಲಯ, ವೃದ್ಧಾಶ್ರಮ, ಅಂಧ, ಕಿವುಡ ಮತ್ತು ಮೂಕ ಮಕ್ಕಳ ಶಾಲೆ ಮೊದಲಾದವುಗಳು ಸ್ಥಾಪಿತವಾಗಿವೆ. ಜಾತಿ–ಧರ್ಮ ಭೇದವಿರದೆ ಇಲ್ಲಿ ಎಲ್ಲರಿಗೂ ನಿತ್ಯದಾಸೋಹ ನಡೆಯುತ್ತಿದೆ. ವಾರ್ಷಿಕವಾಗಿ ನಿಗದಿತ ದಿನ ಮಾನವಹಕ್ಕುಗಳ ದಿನಾಚರಣೆಯೇ ಅಲ್ಲದೆ ಇತರ ಜಯಂತಿಗಳು, ಮಹೋತ್ಸವಗಳೂ ಜರುಗುತ್ತವೆ. ಜಿಲ್ಲೆ ಹಾಗೂ ರಾಜ್ಯದ ಇತರ ಭಾಗಗಳಲ್ಲಿಯೇ ಅಲ್ಲದೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಮೊದಲಾದ ನೆರೆಯ ರಾಜ್ಯಗಳಲ್ಲಿಯೂ ಈ ಮಠದ ಶಾಖಾಪೀಠಗಳು ಇವೆ.

**ರಾಮಕೃಷ್ಣ ಯೋಗಪೀಠ:** ಮಾಲೂರಿನಲ್ಲಿರುವ ಈ ಪೀಠವು ೧೯೮೬ರಲ್ಲಿ ಸ್ವಾಮಿ ಶ್ರೀಕಂಠಾನಂದ ಅವರಿಂದ ಸ್ಥಾಪಿತವಾಯಿತು. ಜಾತಿ, ಮತ ಭೇದಗಳಿಲ್ಲದ ಈ ಸಂಸ್ಥೆಯು ರಾಮಕೃಷ್ಣ ಪರಮಹಂಸರ ತತ್ವಾದರ್ಶಗಳನ್ನು ಆಧರಿಸಿದ್ದು, ಹಿರಿಯರು, ಕಿರಿಯರಿಗೆ ವ್ಯಕ್ತಿತ್ವ ನಿರ್ಮಾಣ ಕಾರ್ಯಾಗಾರಗಳು, ಆಧ್ಯಾತ್ಮಿಕ ಶಿಬಿರಗಳು ಮೊದಲಾದವುಗಳನ್ನು ನಡೆಸುತ್ತದೆ. ಇಲ್ಲಿ ಗುರುಕುಲ ಮಾದರಿಯ ವಿದ್ಯಾಪೀಠವೂ ಇದ್ದು, ಬಾಲಕರ ವಸತಿ ಶಾಲೆ ಹಾಗೂ ಸ್ಥಳೀಯರಿಗಾಗಿ ಒಂದು ನಿರ್ವಸತಿ ಶಾಲೆಯನ್ನು ನಡೆಸುತ್ತದೆ. ವಿವೇಕಾನಂದ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಗ್ರಂಥ ಪ್ರಕಟಣೆ, ವಿವೇಕಾನಂದ ಅಧ್ಯಯನಕೂಟಗಳ ಮೂಲಕ ವಿವೇಕಾನಂದರ ಕೃತಿಗಳ ಅಧ್ಯಯನ ಕಾರ್ಯಕ್ಕೆ ಇಂಬು ನೀಡುವುದು ಮೊದಲಾದ ಚಟುವಟಿಕೆಗಳು ನಡೆಯುತ್ತವೆ. ವಿಶೇಷ ದಿನಗಳಲ್ಲಿ ಉತ್ಸವಗಳನ್ನೂ, ಆರಾಧನೆಗಳನ್ನೂ ಏರ್ಪಡಿಸಲಾಗುತ್ತದೆ.

**ಯೋಗಿ ನಾರೇಯಣ ಆಶ್ರಮ:** ಚಿಂತಾಮಣಿ ತಾಲೂಕಿನ ಕೈವಾರದಲ್ಲಿನ ಶ್ರೀ ಯೋಗಿನಾರೇಯಣ ಆಶ್ರಮವು ಕೈವಾರ ತಾತಯ್ಯನವರ ತತ್ವಗಳನ್ನು ಪ್ರಚುರಪಡಿಸುವ ಉದ್ದೇಶ ಹೊಂದಿ, ತಾತಯ್ಯನವರ ಕಾಲಜ್ಞಾನ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದೆ; ತತ್ವಪದಗಳ ಧ್ವನಿಮುದ್ರಿಕೆಗಳನ್ನೂ ಹೊರತಂದಿದೆ. ಇವುಗಳಲ್ಲದೆ ಯತೀಂದ್ರರ ಆರಾಧನೆ, ಸಾಧುಗಳ ಸಮಾವೇಶ, ಅವರಿಗೆ ಕಾಷಾಯ ವಸ್ತ್ರದಾನ ಮಾಡುವುದು, ಸರ್ವಧರ್ಮ ಸಮ್ಮೇಳನ, ರಥೋತ್ಸವ, ಸಂಕೀರ್ತನಾ ಸೇವೆಗಳು, ಉಚಿತ ಸಾಮೂಹಿಕ ವಿವಾಹ, ಅನ್ನದಾನ ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

**ಶುಕ್ಲ ಯಜುರ್ವೇದ ಮಹಾಸಭಾ:** ಇದು ಮುಳಬಾಗಿಲಿನಲ್ಲಿ ೧೯೧೫ರಲ್ಲಿ ಪ್ರಾರಂಭವಾದ ಒಂದು ಧಾರ್ಮಿಕ ಸಂಸ್ಥೆಯಾಗಿದೆ. ತಮ್ಮ ಮತದ ಅನುಯಾಯಿಗಳು ವೇದ ಪದ್ಧತಿಯನ್ನು ಸರಳವಾಗಿ ಅನುಸರಿಸುವ ವಿಧಾನಗಳನ್ನು ಸೂಚಿಸುವುದು, ಅವರಲ್ಲಿ ವೇದಶಿಕ್ಷಣದ ಅರಿವು ಮೂಡಿಸುವುದು ಮೊದಲಾದ ಉದ್ದೇಶಗಳನ್ನು ಇದು ಹೊಂದಿದೆ. ಅದಕ್ಕನುಗುಣವಾಗಿ ಉಪನ್ಯಾಸಗಳು, ಶಿಬಿರಗಳು, ಶಂಕರ–ಮಧ್ವ–ರಾಮಾನುಜರಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ನಡೆಸುವುದು ಮೊದಲಾದ ಚಟುವಟಿಕೆಗಳನ್ನು ವಾರ್ಷಿಕವಾಗಿ ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ಜಿಲ್ಲೆಯ ಹಲವು ಸ್ಥಳಗಳಲ್ಲಿ ಯಾಜ್ಞವಲ್ಕ್ಯ ಸಂಘಗಳು ಸ್ಥಾಪಿತವಾಗಿವೆ

**ಮಾಧವ ತೀರ್ಥ ಸಂಸ್ಥಾನ:** ಕೋಲಾರ ತಾಲೂಕು ತಂಬಿಹಳ್ಳಿಯಲ್ಲಿ(ಮಾಧವಪುರ)ನ ಈ ಮಠವು ದ್ವೈತ ಸಂಪ್ರದಾಯಕ್ಕೆ ಸೇರಿದ್ದಾಗಿದೆ. ವೇದಾಧ್ಯಯನ ಹಾಗೂ ದ್ವೈತ ಸಿದ್ಧಾಂತದ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವುದರೊಂದಿಗೆ

ಆರಾಧನೆಗಳು, ಸಂಗೀತೋತ್ಸವಗಳು ಮೊದಲಾದ ಧಾರ್ಮಿಕ ಚಟುವಟಿಕೆಗಳನ್ನು ಈ ಮಠವು ಹಮ್ಮಿಕೊಳ್ಳುತ್ತದೆ. ಮಾಧವತೀರ್ಥರ ಮೂಲ ಬೃಂದಾವನ ಹಾಗೂ ಮಠವು ಗುಲ್ಬರ್ಗಾ ಜಿಲ್ಲೆಯ ಮಣೂರಿನಲ್ಲಿದೆ.

**ಶ್ರೀಪಾದರಾಜ ಮಠ:** ಮುಳಬಾಗಿಲು ಬಳಿ ಇರುವ ಈ ಮಠವು ಸಂಸ್ಕೃತ ಮತ್ತು ವೇದ ಅಧ್ಯಯನ ತರಗತಿಗಳನ್ನು ನಡೆಸುವುದರೊಂದಿಗೆ ದ್ವೈತ ಸಿದ್ಧಾಂತದ ಸಂಶೋಧನಾ ಕಾರ್ಯವನ್ನು ಕೈಗೆತ್ತಿಕೊಂಡಿರುವುದಾಗಿ ತಿಳಿದುಬಂದಿದೆ. ಇದು ಒಂದು ಕಾಲಕ್ಕೆ ಗುರುಕುಲದಂತೆ ಕಾರ್ಯನಿರ್ವಹಿಸುತ್ತಿದ್ದಿತೆಂದೂ ಹೇಳಲಾಗಿದೆ. ೨೦೦೨ರಲ್ಲಿ ಈ ಮಠದ ಆರನೇ ಶತಮಾನೋತ್ಸವವನ್ನು ನಡೆಸಲಾಯಿತು.

**ಪಾಪಾಗ್ನಿ ಮಠ:** ಚಿಕ್ಕಬಳ್ಳಾಪುರ ತಾಲೂಕಿನ ಕಳವರದಲ್ಲಿನ ಈ ಮಠವು ವಿಶ್ವಕರ್ಮ ವರ್ಗದವರಿಗೆ ಸೇರಿದ್ದಾಗಿದೆ. ಪಾಪಮಾಂಬ ಹಾಗೂ ವೀರಭೋಜಾಚಾರ್ಯರು ಈ ಮಠ ಸ್ಥಾಪಿಸಿದರೆಂಬ ಪ್ರತೀತಿ ಇದೆ. ಆ ನೆನಪಿಗಾಗಿಯೇ ಪ್ರತೀ ವರ್ಷ ಕಾರ್ತಿಕದಲ್ಲಿ ಪಾಪಮಾಂಬ ಆರಾಧನೆ ಹಾಗೂ ಚೈತ್ರದಲ್ಲಿ ವೀರಭೋಜಾಚಾರ್ಯರ ಆರಾಧನೆ ನಡೆಯುತ್ತದೆ. ಇವಲ್ಲದೆ ವೈಶಾಖ ದಶಮಿಯಲ್ಲಿ ವೀರಬ್ರಹ್ಮೇಂದ್ರರು, ಚೈತ್ರಬಹುಳ ದಶಮಿಯಲ್ಲಿ ಶಿವಶಂಕರಸ್ವಾಮಿ ಹಾಗೂ ಆಷಾಢಮಾಸ ಬಹುಳ ಅಷ್ಟಮಿಯಲ್ಲಿ ಶರಭಯೋಗೀಂದ್ರಸ್ವಾಮಿ ಅವರ ಆರಾಧನೆಗಳೂ ನಡೆಯುತ್ತವೆ. ಇವುಗಳಲ್ಲದೆ ಐತಾಂಡಹಳ್ಳಿ, ನಾಗಲಾಪುರ ಮೊದಲಾದೆಡೆ ವೀರಶೈವ ಮಠಗಳು, ಶಂಕರಸೇವಾಸಮಿತಿಗಳು ಮೊದಲಾದ ಇತರ ಧಾರ್ಮಿಕ ಸಂಸ್ಥೆಗಳೂ ಅಸ್ತಿತ್ವದಲ್ಲಿವೆ. ಅಗರದಲ್ಲಿನ ಶ್ರೀನಿವಾಸ ಆಶ್ರಮವು ೧೯೩೪ರಲ್ಲಿ ವೈಶ್ಯ ಸಮೂಹದಿಂದ ಪ್ರಾರಂಭವಾಗಿದ್ದು, ಅದು ಧರ್ಮ ಪ್ರಚಾರ ಕಾರ್ಯವನ್ನು ನಡೆಸುತ್ತಿದೆ.

**ಜಾತಿಗಳು**

ಭಾರತೀಯ ಸಾಮಾಜಿಕ ವ್ಯವಸ್ಥೆಯು ಅನೇಕ ಜಾತಿ, ಬುಡಕಟ್ಟುಗಳನ್ನು ಒಳಗೊಂಡುದ್ದಾಗಿದೆ. ಮೂಲತಃ ವೃತ್ತಿಯನ್ನು ಆಧರಿಸಿ ಜಾತಿಗಳು ಹುಟ್ಟಿಕೊಂಡಿದ್ದರೂ ಕ್ರಮೇಣ ಅವು ಪ್ರತ್ಯೇಕ ಪಂಗಡಗಳಾಗಿ ಗುರುತಿಸಿಕೊಂಡಿವೆ. ಪ್ರತೀ ಜಾತಿಯಲ್ಲಿ ಅನೇಕ ಉಪಜಾತಿಗಳೂ ರೂಪಿತವಾಗಿವೆ. ಜಾತಿ ಜಾತಿಗಳ ನಡುವೆ ನಿರ್ಬಂಧಗಳಿರುವ ಹಾಗೆ ಒಂದು ಸೀಮಿತ ಪರಿಧಿಯವರೆಗೆ, ಅವರಲ್ಲಿ ಸಹಜೀವನವೂ ಕಂಡುಬರುತ್ತದೆ. ಕೆಲವೊಂದು ಆಚಾರ–ಸಂಪ್ರದಾಯ, ಊಟೋಪಚಾರ, ಸಾಮಾಜಿಕ ಜೀವನಕ್ರಮಗಳು ಎಲ್ಲಾ ಜಾತಿಗಳಲ್ಲಿಯೂ ಕಂಡುಬರುವುದಾದರೂ ಬಹಳ ವೇಳೆ ಜಾತಿ ವಿಶಿಷ್ಟ ಪದ್ಧತಿಗಳೂ ಗಾಢವಾಗಿ ಇದ್ದು ಒಟ್ಟಾರೆ ಜಾತಿ ಎಂಬುದು ಒಂದು ಸಂಕೀರ್ಣವಾದ ವ್ಯವಸ್ಥೆಯಾಗಿದೆ. ಈಗಿನ ಕೋಲಾರ ಜಿಲ್ಲೆಯ ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ವಾಸಿಸುತ್ತಿರುವ ವಿವಿಧ ಜಾತಿಗಳಲ್ಲಿ ಕೆಲವೊಂದು ಜಾತಿಯವರು ಇಲ್ಲಿನ ಮೂಲ ನಿವಾಸಿಗಳಾಗಿದ್ದಿರಬಹುದಾದರೂ ಉಳಿದ ಬಹಳಷ್ಟು ಜಾತಿಯವರು ಇತರ ಭಾಗಗಳಿಂದ ಕಾಲಾಂತರದಲ್ಲಿ ಬಂದು ನೆಲೆಗೊಂಡವರಾಗಿದ್ದಾರೆ. ಹೀಗಾಗಿ, ಸಮ್ಮಿಶ್ರ ಭಾಷೆ, ಸಾಂಸ್ಕೃತಿಕ ಲಕ್ಷಣಗಳು ಇಲ್ಲಿ ಗೋಚರವಾಗುತ್ತವೆ. ಜಾತಿ ವಿಚಾರಗಳನ್ನು ಕುರಿತ ಪರಿಶೀಲನೆಯು ವಿವಿಧ ಜಾತಿಗಳು ಪ್ರಾಚೀನ ಹಂತದಲ್ಲಿ ಕೆಲವೇ ಮೂಲಗಳಿಂದ ಬಂದಿರಬಹುದಾದುದರ ಹಾಗೂ ಮುಂದೆ ಅವುಗಳಲ್ಲಿ ಆದ ಕವಲುಗಳ ಬಗೆಗೆ ಅರಿಯಲು ಸಹಾಯ ಮಾಡುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆದ ವಿವಿಧ ಬದಲಾವಣೆಗಳಿಂದಾಗಿ ಎಲ್ಲಾ ಜಾತಿಗಳೂ ನಾಗರಿಕತೆಯ ಪ್ರಭಾವಕ್ಕೆ ಒಳಗಾಗಿವೆ. ಹೀಗಾಗಿ, ಇಂದು ಪ್ರತೀ ಜಾತಿಯ ನಿರ್ದಿಷ್ಟ ಗುಣಾಂಶಗಳನ್ನು, ಪ್ರಾಚೀನ ಲಕ್ಷಣಗಳನ್ನು ಗುರುತಿಸುವುದು ಕಷ್ಟವಾಗಿದೆ. ಈ ಹಿನ್ನೆಲೆಯಲ್ಲಿ, ಕೋಲಾರ ಜಿಲ್ಲೆಯ ಕೆಲವೊಂದು ಪ್ರಮುಖ ಜಾತಿಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳಿಗೆ ಸಂಬಂಧಿಸಿದ ಸಂಕ್ಷಿಪ್ತ ಪರಿಚಯವನ್ನು ಮುಂದಿನ ಭಾಗದಲ್ಲಿ ಮಾಡಿಕೊಡಲಾಗಿದೆ.

**ಅಗಸ:** ಬಟ್ಟೆ ಮಡಿಮಾಡಿಕೊಡುವುದು, ಮದುವೆ ಹಾಗೂ ದೇವರ ಮೆರವಣಿಗೆಗಳಲ್ಲಿ ನಡೆ–ಮಡಿ ಹಾಸುವುದು, ಪತ್ತು ಹಿಡಿಯುವುದು, ಕೆಲವೊಂದು ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುವುದು ಮೊದಲಾದ ಸಾಂಪ್ರದಾಯಿಕ ಕೆಲಸಗಳನ್ನು ಮಾಡುತ್ತಿದ್ದ ಅಗಸರು ಈಚೆಗೆ ಜೀವನೋಪಾಯಕ್ಕಾಗಿ ಜಿರಾಯ್ತಿ (ಕೃಷಿ), ನೌಕರಿ ಮೊದಲಾದ ಕೆಲಸಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಮಲ್ಲಿಗೆ, ಸಂಪಿಗೆ, ಈಚಲು, ವಿಷ್ಣು, ಅರಿಸಿನ, ಬಳೆ, ಈಡಿಗ ಮೊದಲಾದ ಗೋತ್ರಗಳಿವೆ ಎಂದು ಹೇಳುತ್ತಾರೆ. ದತ್ತು ಸಂಪ್ರದಾಯವಿದೆ. ಹಿಂದೆ ಕುಲ ಪಂಚಾಯಿತಿ ವ್ಯವಸ್ಥೆ ಇದ್ದಿತು. ಮೈನೆರೆದ ಹೆಣ್ಣಿಗೆ ಐದು ದಿನಗಳವರೆಗೆ ಪ್ರತ್ಯೇಕ ಕೂರಿಸಿ ಆರತಿ

ಬೆಳಗುವ, ಕೊನೆಯ ದಿನ ಬಂಧುಗಳಿಗೆ ಊಟ ಹಾಕುವ ಪದ್ಧತಿ ಇದೆ. ಮಗು ಹುಟ್ಟಿದ ಒಂಬತ್ತು ದಿನದಿಂದ ಮೂರು ತಿಂಗಳ ಒಳಗೆ ನಾಮಕರಣ ಮಾಡುತ್ತಾರೆ. ವಿವಾಹವು ಸಾಮಾನ್ಯವಾಗಿ ಗಂಡಿನ ಮನೆಯಲ್ಲಿ ನಡೆಯುತ್ತಿದ್ದಿತು. ಬ್ರಾಹ್ಮಣ ಪುರೋಹಿತರು ವಿವಾಹ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ತೆರ ಪದ್ಧತಿ ಇದೆ. ಮಾಂಸಾಹಾರಿಗಳಾದ ಇವರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಅಗಸರು ಶವವನ್ನು ಸಾಮಾನ್ಯವಾಗಿ ಹೂಳುತ್ತಾರೆ. ಬಾಣಂತಿಯ ಅಥವಾ ದುರ್ಮರಣಕ್ಕೀಡಾದವರ ಶವಕ್ಕೆ ಅಗ್ನಿ ಸಂಸ್ಕಾರ ಮಾಡುತ್ತಾರೆ. ಸಾವಿನ ೧೧ನೇ ದಿನ ವೈಕುಂಠ ಸಮಾರಾಧನೆ ನಡೆಸುತ್ತಾರೆ.ಕದಿರಿ, ತಿರುಪತಿ, ಧರ್ಮಸ್ಥಳ, ಪುಂಗನೂರು ಬಳಿಯ ಬಾಯ್ಕೊಂಡಮ್ಮ, ಮುತ್ಯಾಲಮ್ಮ, ಸಪ್ಲಮ್ಮ ಮೊದಲಾದ ದೇವತೆಗಳಿಗೆ ಇವರು ನಡೆದುಕೊಳ್ಳುತ್ತಾರೆ.

ಅಗಸರಲ್ಲಿ ಶೂದ್ರರೂ, ಹೊಲೆಯರೂ ಇದ್ದಾರೆ. ಇವರು ತಮಗೆ ನಿಶ್ಚಿತವಾದ ಮನೆಗಳ ಬಟ್ಟೆಗಳನ್ನು ಒಗೆದು, ಪ್ರತಿಯಾಗಿ ಅವರಿಂದ ಒಂದಿಷ್ಟು ಧಾನ್ಯ ಪಡೆಯುತ್ತಾರೆ. ಸರಕಾರಕ್ಕೆ ಒಂದಿಷ್ಟು ತೆರಿಗೆ ಕಟ್ಟುತ್ತಾರೆ. ಊರಿಗೆ ಗಣ್ಯರನ್ನು ಬರಮಾಡಿಕೊಳ್ಳುವಾಗ ಪಂಜು ಹಿಡಿವ ಕಾಯಕವನ್ನು ಉಚಿತವಾಗಿ ಮಾಡುತ್ತಾರೆ. ಬಟ್ಟೆ ಬೇಯಿಸುವಾಗ ನೀರಿನಿಂದ ಹೊರಡುವ ಹಬೆಯೇ ಉಬ್ಬೆ ಬಟ್ಟೆಗಳು ಸುಟ್ಟು ನಾಶವಾಗದಿರಲಿ ಎಂಬ ಆಶಯದಿಂದ ಪ್ರಾಣಿ ಬಲಿಕೊಟ್ಟು ಈ ಉಬ್ಬೆ ದೇವರು ಅಥವಾ ಭೂಮದೇವರನ್ನು ಪೂಜಿಸುತ್ತಾರೆ – ಇತ್ಯಾದಿ ಮಾಹಿತಿಗಳನ್ನು ೧೮೦೦ರ ಸುಮಾರಿನಲ್ಲಿ ಕೋಲಾರ ಭಾಗದಲ್ಲಿ ಪ್ರವಾಸ ಮಾಡಿದ ಬುಕಾನನ್ ದಾಖಲಿಸಿದ್ದಾನೆ

**ಈಡಿಗ:** ಬಾಗೇಪಲ್ಲಿ ತಾಲೂಕಿನಲ್ಲಿ ಹೆಚ್ಚಾಗಿ ಕಂಡುಬರುವ ಈಡಿಗರು ಜಿಲ್ಲೆಯ ಇತರ ಭಾಗಗಳಲ್ಲಿ ವಿರಳವಾಗಿ ಕಂಡುಬರುತ್ತಾರೆ. ಸೇಂದಿ ಇಳಿಸಿ ಮಾರಾಟ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ಈಚೆಗೆ ವ್ಯವಸಾಯ, ನೌಕರಿ ಮೊದಲಾದ ವೃತ್ತಿಗಳಲ್ಲಿಯೂ ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಶಾಸನೋಳ್ಳು, ಬಡ್ಡೊಳ್ಳು ಮೊದಲಾದುವು ಇವರ ಕೆಲವು ಗೋತ್ರಗಳಾಗಿವೆ. ತೆಲುಗು ಮಾತೃಭಾಷೆಯಾಗುಳ್ಳ ಇವರು ಕನ್ನಡವನ್ನೂ ಬಲ್ಲವರಾಗಿದ್ದಾರೆ. ಈಡಿಗರಲ್ಲಿ ದತ್ತು ಪದ್ಧತಿ ಇದೆ. ವಿಚ್ಛೇದನಕ್ಕೆ ಅನುಮತಿ ಇದೆ. ಆದರೆ, ವಿಧವಾ ವಿವಾಹಕ್ಕೆ ಸಾಂಪ್ರದಾಯಿಕ ಅನುಮೋದನೆ ಇಲ್ಲ. ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ನಿಗದಿತ ದಿನಗಳವರೆಗೆ ಸೂತಕ ಆಚರಿಸುತ್ತಾರೆ. ವಿವಾಹದ ಕೆಲವು ಆಚರಣೆಗಳನ್ನು ಬ್ರಾಹ್ಮಣ ಪುರೋಹಿತ ನಡೆಸಿಕೊಡುತ್ತಾನೆ. ಹಿಂದೂಗಳ ಎಲ್ಲಾ ಹಬ್ಬಗಳನ್ನು ಆಚರಿಸುವ ಇವರು ಎಲ್ಲಮ್ಮ, ಗಂಗಮ್ಮ ಮೊದಲಾದ ದೇವರನ್ನು ಪೂಜಿಸುತ್ತಾರೆ. ತಿರುಪತಿ, ಧರ್ಮಸ್ಥಳ ಮೊದಲಾದುವು ಇವರ ಕೆಲವು ಯಾತ್ರಾಸ್ಥಳಗಳಾಗಿವೆ.

**ಒಕ್ಕಲಿಗ:** ಜಿಲ್ಲೆಯ ಒಕ್ಕಲಿಗರಲ್ಲಿ ಮೊರಸು ಒಕ್ಕಲಿಗ, ಮುಸುಕು ಒಕ್ಕಲಿಗ, ರೆಡ್ಡಿ ಒಕ್ಕಲಿಗ, ದಾಸೊಕ್ಕಲಿಗ (ಪೂಜಾರಿ ಒಕ್ಕಲಿಗ), ಸಾದ ಒಕ್ಕಲಿಗ, ಕುಂಚಿಟಿಗ ಒಕ್ಕಲಿಗ ಮೊದಲಾದ ಒಳ ಪಂಗಡಗಳು ಕಂಡುಬರುತ್ತವೆ. ಕೋಲಾರವು ಮೊರಸು ಒಕ್ಕಲಿಗರ ಆಧಿಕ್ಯ ಹೊಂದಿದ ಜಿಲ್ಲೆಯಾಗಿದೆ. ವ್ಯವಸಾಯವು ಒಕ್ಕಲಿಗರ ಸಾಂಪ್ರದಾಯಿಕ ವೃತ್ತಿಯಾಗಿದ್ದು, ಈಚೆಗೆ ವಿವಿಧ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಇವರಲ್ಲಿ ಮಲ್ಲಿಗೆ, ಹೊಂಗೆ, ಹಿಪ್ಪೆ ಆಲ, ಕಗ್ಗಲಿ, ಮಂಡಲಕ, ಮಿಂಚಲರಾಮ ಮೊದಲಾದ ಗೋತ್ರ ಅಥವಾ ಬೆಡಗುಗಳು ಇವೆ. ತೆಲುಗು ಮಾತೃಭಾಷೆಯಾಗಿ ಉಳ್ಳವರೂ ಕನ್ನಡ ಚೆನ್ನಾಗಿ ಬಲ್ಲವರಾಗಿದ್ದಾರೆ. ಒಕ್ಕಲಿಗರಲ್ಲಿ ಹಿಂದೆ ಜಾತಿ ಪಂಚಾಯಿತಿ ವ್ಯವಸ್ಥೆ ಇದ್ದಿತು. ಇವರಲ್ಲಿ ದತ್ತು ಪದ್ಧತಿ ಇದೆ. ವಿವಾಹದಲ್ಲಿ ವಧುವಿಗೆ ತೆರ (ಬಳೆಹಣ)–ನೀಡುವ ಸಂಪ್ರದಾಯವೂ ಇದೆ. ವಿವಾಹದ ಕೆಲವು ಶಾಸ್ತ್ರ ಆಚರಣೆಗಳು ಆಯಾ ಒಳಪಂಗಡಕ್ಕೆ ಸಂಬಂಧಿಸಿ ಬದಲಾಗುತ್ತವೆ. ಮುಖ್ಯ ಶಾಸ್ತ್ರಗಳು ಆಯಾ ಗುಂಪಿನ ಅನುಭವಸ್ಥರ ನಿರ್ದೇಶನದಂತೆ ನಡೆದರೂ ಕೆಲವು ಪ್ರಮುಖ ವಿಧಿಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಮಗು ಹುಟ್ಟಿದ ಒಂಭತ್ತು ಅಥವಾ ೧೧ ದಿನಕ್ಕೆ ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡಿ ಅಂದೇ ಅಥವಾ ಒಂದು ವರ್ಷದೊಳಗೆ ನಾಮಕರಣ ಮಾಡುತ್ತಾರೆ. ಮೈನೆರೆದ ಹುಡುಗಿಯನ್ನು ಪ್ರತ್ಯೇಕ ಇರಿಸಿ ಆರತಿ ಶಾಸ್ತ್ರ ಮಾಡುವ ಸಂಪ್ರದಾಯವಿದೆ. ಇವರಲ್ಲಿ ಸಾಮಾನ್ಯವಾಗಿ ಶವವನ್ನು ಹೂಳುವ, ೧೧ನೇ ದಿನಕ್ಕೆ ತಿಥಿ ಶಾಸ್ತ್ರ ಮಾಡುವ ನಡವಳಿಕೆಗಳಿವೆ. ಎಲ್ಲಾ ಹಿಂದೂ ಹಬ್ಬಗಳ ಜತೆಗೆ ಮೊರಸು ಒಕ್ಕಲಿಗರು ತಮ್ಮವೇಆದ ಹೊಸದೇವರು, ಕರಗದದೇವರು, ಬಂಡಿದೇವರು ಮೊದಲಾದ ಕೆಲ ದೇವರನ್ನೂ ಹೊಂದಿದ್ದಾರೆ. ಪೂರ್ವದಲ್ಲಿ ಇವರಲ್ಲಿ ಕೆಲವರು ಸೀತಿಬೆಟ್ಟದ ಭೈರೇದೇವರಿಗೆ ಬೆರಳು ಕೊಡುವ ಪದ್ಧತಿ ಹೊಂದಿದ್ದರು. ಇವರನ್ನು ಬೆರಳು ಕೊಡೋ ಒಕ್ಕಲಿಗರೆಂದು ಕರೆಯುತ್ತಾರೆ.

ಮೊರಸು ಒಕ್ಕಲಿಗರು ಮೂಲತಃ ಕರ್ನಾಟಕದವರೇ ಆಗಿದ್ದಾರೆ. ಬೇಸಾಯಗಾರರಾದ ಇವರು ಹಿಂದೆ ಸೈನ್ಯದಲ್ಲಿ ಪದಾತಿಗಳಾಗಿ ಕೆಲಸ ಮಾಡುತ್ತಿದ್ದರು. ಇವರಿಗೆ ಕಂದಾಚಾರಿಗಳೆಂಬ ಹೆಸರೂ ಇದೆ. ಇವರಲ್ಲಿ ಮೊರಸು ಒಕ್ಕಲಿಗ, ತೆಲುಗು ಮೊರಸು ಒಕ್ಕಲಿಗ, ಮೊಸರು ಒಕ್ಕಲಿಗ ಎಂಬ ವಿಧಗಳಿವೆ. ತಮ್ಮ ಪ್ರಧಾನ ದೈವವಾದ ಕಾಲಭೈರವನಿಗೆ ಸೀತಿಬೆಟ್ಟದಲ್ಲಿ ಇವರ ಹೆಣ್ಣು ಮಕ್ಕಳು ತಮ್ಮ ಬಲಗೈ ಬೆರಳನ್ನು ಬಲಿಕೊಡುತ್ತಾರೆ. ಇವರು ಹಂದಿಮಾಂಸ ಸೇವಿಸುವುದಿಲ್ಲ. ಮಾದಕ ದ್ರವ್ಯ ನಿಷೇಧಿಸಿದ್ದಾರೆ. ಇವರ ಮಹಿಳೆಯರೂ ಹೊಲ, ತೋಟಗಳಲ್ಲಿ ಅತ್ಯಂತ ಶ್ರಮದಿಂದ ದುಡಿಯುತ್ತಾರೆ ಮೊದಲಾದ ವಿವರಗಳನ್ನು ಬುಕಾನನ್ ತನ್ನ ಪ್ರವಾಸೀ ಬರಹದಲ್ಲಿ ದಾಖಲಿಸಿದ್ದಾನೆ.

**ಕುರುಬ:** ಕುರಿಸಾಕಣೆ ಹಾಗೂ ಕಂಬಳಿ ನೇಯ್ಗೆಯನ್ನು ಮುಖ್ಯ ಕಸುಬಾಗಿ ಹೊಂದಿದ್ದ ಕುರುಬರು ಅಥವಾ ಹಾಲು ಮತಸ್ಥರು ಕ್ರಮೇಣ ಕೃಷಿಕರಾಗಿಯೂ ಬದುಕಿ, ಈಚಿನ ದಿನಗಳಲ್ಲಿ ಬೇರೆ ಬೇರೆ ನೌಕರಿ, ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕುರುಬರಲ್ಲಿ ಹತ್ತಿಕಂಕಣ, ಉಣ್ಣೆ ಕಂಕಣ ಎಂಬ ಒಳಪಂಗಡಗಳಿದ್ದು ಅವರಲ್ಲಿ ಹಸಿರು, ಶಾವಂತಿಗೆ, ಆಂಧ್ರ ಮೊದಲಾದ ಗೋತ್ರಗಳಿವೆ ಎನ್ನಲಾಗಿದೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ; ದತ್ತು ಸಂಪ್ರದಾಯವೂ ಇದೆ. ಕುರುಬರಲ್ಲಿ ಮಗು ಹುಟ್ಟಿದ ೧೧ನೇ ದಿನಕ್ಕೆ ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಅಂದೇ ಅಥವಾ ಒಂದು ವರ್ಷದ ಒಳಗೆ ಅನುಕೂಲವಾದಾಗ ನಾಮಕರಣ ಶಾಸ್ತ್ರ ಮಾಡುತ್ತಾರೆ. ಮೈನೆರೆದ ಮಗಳನ್ನು ಸಾಮಾನ್ಯವಾಗಿ ಐದು ದಿನ ಹೊರಗೆ ಕೂರಿಸಿ ಆರತಿ ಮಾಡುವ ಸಂಪ್ರದಾಯವಿದೆ. ಇವರ ವಿವಾಹ ಕಾರ್ಯಗಳಿಗೆ ಬ್ರಾಹ್ಮಣ ಪುರೋಹಿತರು ಬರುವ ರೂಢಿ ಇದೆ. ಇವರಲ್ಲಿ ಶವವನ್ನು ಸಾಮಾನ್ಯವಾಗಿ ಸಮಾಧಿ ಮಾಡುತ್ತಾರೆ; ೧೧ ದಿನಕ್ಕೆ ಪುಣ್ಯಾಹ, ತಿಥಿ ಕಾರ್ಯ ಮಾಡುತ್ತಾರೆ. ಮಾಂಸಾಹಾರಿಗಳಾದ ಇವರು ಬೀರೇದೇವರು, ವೆಂಕಟರಮಣ, ಲಕ್ಷ್ಮಿ ಮೊದಲಾದ ದೈವಗಳನ್ನು ಆರಾಧಿಸುತ್ತಾರೆ. ಕಾಗಿನೆಲೆ, ತಿರುಪತಿ ಮೊದಲಾದವು ಇವರ ಕೆಲವು ಮುಖ್ಯ ಯಾತ್ರಾಸ್ಥಳಗಳಾಗಿವೆ.

**ಕುಂಬಾರ:** ದಿನಬಳಕೆ ಸಾಮಗ್ರಿಯಾದ ಮಣ್ಣಿನ ಮಡಕೆ, ಕುಡಿಕೆ, ನಾಡ ಹೆಂಚು ಮೊದಲಾದವನ್ನು ತಯಾರಿಸಿ, ಮಾರಾಟ ಮಾಡಿ ಜೀವನ ಮಾಡಿಕೊಂಡಿದ್ದ ಜಿಲ್ಲೆಯ ಕುಂಬಾರರು ಕ್ರಮೇಣ ಕೃಷಿ, ಕೂಲಿ, ನೌಕರಿ ಮೊದಲಾದ ದುಡಿಮೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆಂಧ್ರ ಗಡಿಭಾಗದಲ್ಲಿರುವ ಕೆಲವು ಕುಂಬಾರರ ಮಾತೃಭಾಷೆ ತೆಲುಗು. ಆದರೆ, ಸಾಮಾನ್ಯವಾಗಿ ಎಲ್ಲರೂ ಕನ್ನಡ ಬಲ್ಲರು. ಕುಂಬಾರರಲ್ಲಿ ಪಾಲ್ಲಿರಿ, ದಾರ್ವಾಟ, ಮದ್ನಾಪು, ದ್ಯಾವರು, ಮಾರಸಂತಲ್ಲಿ, ಗೋಕುಲ, ಲಗ್ಗೇರಿ, ಮಲ್ಲೊಲ ಮೊದಲಾದ ಗೋತ್ರಗಳಿವೆ. ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಕೆಲವೊಂದು ವಿವಾಹ ವಿಧಿಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಮಗು ಹುಟ್ಟಿದ ೧೧ದಿನಕ್ಕೆ ನಾಮಕರಣ ಮಾಡುತ್ತಾರೆ. ಮೈನೆರೆದ ಹೆಣ್ಣನ್ನು ಸೋದರಮಾವ ಹಾಕುವ ಊಡಿಗ ಸೊಪ್ಪಿನ ಗುಡಿಸಲಲ್ಲಿ ಕೂರಿಸಿ, ಒಸಗೆ ಹಾಕುತ್ತಾರೆ. ಗಂಡಿನವರೇ ಹೆಣ್ಣು ಹುಡುಕುವುದು, ಹೆಣ್ಣಿನ ಮನೆಯಲ್ಲಿಯೇ ವಿವಾಹ ಕಾರ್ಯ ನಡೆಯುವುದು ಹಿಂದಿನ ಪದ್ಧತಿ ಆಗಿದ್ದಿತು. ಇವರಲ್ಲಿ ಶವವನ್ನು ಹೂಳುತ್ತಾರೆ. ಈ ಸಂದರ್ಭದಲ್ಲಿ ಮಾತ್ರ ಸಂಸ್ಕಾರ ಮಾಡುವ ಗಂಡಸರು ಜಂಜಿವಾರಂ (ಜನಿವಾರ) ಹಾಕಿಕೊಳ್ಳುತ್ತಾರೆ. ನಾಮದವರು ಸೂತಕ ನಿವಾರಣೆಗೆ ದಾಸಯ್ಯನನ್ನು ಕರೆಸುತ್ತಾರೆ. ಕುಂಬಾರರಲ್ಲಿ ಶೈವ ಹಾಗೂ ವೈಷ್ಣವ ಸಂಪ್ರದಾಯದವರಿಬ್ಬರೂ ಇದ್ದು ಕುಂಭೇಶ್ವರ, ವೆಂಕಟೇಶ್ವರ, ಲಕ್ಷ್ಮಿ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ತಿರುಪತಿ, ಧರ್ಮಸ್ಥಳ ಮೊದಲಾದುವು ಇವರ ಕೆಲವು ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ಕೊಂಡಮಾಮ:** ಬೈರಾಗಿ, ಜಂಗಮಲು, ಶಾಸ್ತ್ರೀಕರು ಮೊದಲಾದ ಹೆಸರುಗಳಿಂದಲೂ ಗುರುತಿಸುವ ಇವರಿಗೆ ಕೊಂಡಮಾಮ ಎಂಬುದು ರೂಢಿಯ ಹೆಸರಾಗಿದೆ. ಜನರಿಗೆ ಭವಿಷ್ಯ ಹೇಳುವುದನ್ನು ಸಾಂಪ್ರದಾಯಕ ವೃತ್ತಿ ಮಾಡಿಕೊಂಡ ಇವರು ಈಚೆಗೆ ಕೃಷಿ, ಕೂಲಿ, ನೌಕರಿ ಮತ್ತಿತರ ಉದ್ಯೋಗಗಳನ್ನು ಅವಲಂಬಿಸಿ, ಒಂದೆಡೆ ನೆಲೆನಿಲ್ಲುತ್ತಿದ್ದಾರೆ. ತೆಲುಗು, ಕನ್ನಡ ಮೊದಲಾದ ಭಾಷೆಗಳನ್ನಾಡುವ ಇವರಲ್ಲಿ ಕೆಲವರು ಸಿಂಗಾಪುರ ಮೊದಲಾದೆಡೆಯೂ ಹೋಗಿ ಶಾಸ್ತ್ರ ಹೇಳಿ ಪ್ರಸಿದ್ಧರಾಗಿದ್ದಾರೆಂದು ತಿಳಿದುಬಂದಿದೆ. ಇವರಲ್ಲಿ ಬೈಲಪಾಟಿ, ಆಲೇಟಿ, ಮುಗ್ಗೋಲು, ನೂನೋಲು ಮೊದಲಾದ ಒಳಪಂಗಡಗಳಿದ್ದು ಸಗೋತ್ರ ವಿವಾಹ ನಿಷಿದ್ಧವಾಗಿದೆ. ಮಗು ಹುಟ್ಟಿದ ಐದು ಅಥವಾ ಒಂಬತ್ತು ದಿನಕ್ಕೆ 'ಮಗುವಿಗೆ ಹಾಲು ಹಾಕುವ ಶಾಸ್ತ್ರ' ಮಾಡುತ್ತಾರೆ. ಅಂದು 'ವಾಮ'ವನ್ನು ಅರೆದು, ಬಾಣಂತಿ ಮೈಗೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ಹೊಸ ಮೊರದಲ್ಲಿ ಎಲೆ, ಅಡಿಕೆ ಇಟ್ಟು ಅದನ್ನು ಹಿರಿಯ

ಮಹಿಳೆಯರಿಗೆ ಕೊಡಿಸುತ್ತಾರೆ. ಹೀಗೆ ಮಾಡುವುದರಿಂದ ತಾಯಿಯಿಂದ ಮಗುವಿಗೆ ಸಾಕಷ್ಟು ಹಾಲು ದೊರೆಯುವಂತಾಗುತ್ತದೆ ಎಂಬ ನಂಬಿಕೆ ಅವರದು. ಹುಡುಗಿ ವಯಸ್ಸಿಗೆ ಬಂದರೆ ಹೊಂಗೆಸೊಪ್ಪಿನ ಗುಡಿಸಲಲ್ಲಿ ಇರಿಸಿ ಒಂಬತ್ತು ದಿನ ಒಸಗೆ ಹಾಕುತ್ತಾರೆ. ಇವರು ಶವವನ್ನು ಚಟ್ಟದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಮೂರು ದಿನಕ್ಕೆ ಹಾಲು ಬಿಡೋ ಶಾಸ್ತ್ರ ಐದು ದಿನಕ್ಕೆ ತಿಥಿ ಕಾರ್ಯ ಮಾಡುತ್ತಾರೆ. ವೆಂಕಟರಮಣ, ದೇಶ ಮಾರಮ್ಮ, ಒಂಟಿಈರಲು, ದೊಡ್ಡದೇವರು ಮೊದಲಾದ ದೇವರುಗಳನ್ನು ಪೂಜಿಸುವ ಇವರು ಯುಗಾದಿ, ಸಂಕ್ರಾಂತಿ ಮತ್ತಿತರ ಹಬ್ಬಗಳನ್ನು ಆಚರಿಸುತ್ತಾರೆ.

**ಕೊರಮ:** ಕೊರಮ ಶೆಟ್ಟಿ, ಎರುಕುಲ (ಕೊರವಂಜಿ), ಕೊರಚ ಮೊದಲಾದ ಹೆಸರುಗಳಿರುವ ಕೊರಮರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಹಂದಿ ಸಾಕುವುದು, ಹೆಂಗಸರು ಹಚ್ಚೆಹಾಕುವುದು ಮೊದಲಾದ ಸಾಂಪ್ರದಾಯಿಕ ವೃತ್ತಿ ಮಾಡುವವರಾಗಿದ್ದರು. ಬಿದಿರಿಗೆ ಸಂಬಂಧಿಸಿದ ಕೆಲಸಗಳನ್ನೂ ಮಾಡುತ್ತಿರುವ ಇವರಲ್ಲಿ ಕೆಲವರು ಬಿದಿರು ಮಂಡಿಗಳನ್ನೂ ಇಟ್ಟುಕೊಂಡಿದ್ದಾರೆ. ಈಚೆಗೆ ಇವರಲ್ಲಿ ಕೆಲವರಾದರೂ ಉನ್ನತ ವಿದ್ಯಾಭ್ಯಾಸವನ್ನು ಮಾಡಿ ವಿದೇಶೀ ಸಂಸ್ಥೆಗಳಲ್ಲಿಯೂ ಇದ್ದಾರೆಂದು ತಿಳಿದುಬಂದಿದೆ. ತಮಿಳು ಮಾತೃಭಾಷೆಯವರಾದ ಕೊರಮರಲ್ಲಿ ಕನ್ನಡ, ತೆಲುಗನ್ನೂ ಬಲ್ಲವರಿದ್ದಾರೆ. ಇವರಲ್ಲಿ ಕಾವಾಡಿ, ಸಾತ್‌ಪಾಡಿ, ಮೇನ್‌ಪಾಡಿ, ಮೇಂದ್ರಗುತ್ತ ಮೊದಲಾದ ಗೋತ್ರಗಳಿದ್ದು ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರ ವಿವಾಹ, ತಿಥಿ ಮೊದಲಾದ ಶಾಸ್ತ್ರಾಚರಣೆಗಳಲ್ಲಿ ಬ್ರಾಹ್ಮಣ ಪುರೋಹಿತರು ಈಚೆಗೆ ಭಾಗವಹಿಸುತ್ತಿದ್ದಾರೆ.

ಕೊರಮರಲ್ಲಿ ಮಗು ಹುಟ್ಟಿದ ೧೧ ದಿನಕ್ಕೆ ಸೂತಕ ಕಳೆದುಕೊಳ್ಳುತ್ತಾರೆ. ಅಂದು ಬಾಣಂತಿ ಕೈಲಿ ಗಂಗೆ ಪೂಜೆ ಮಾಡಿಸುತ್ತಾರೆ. ವಿವಾಹದಲ್ಲಿ ಒನಕೆ ಶಾಸ್ತ್ರ ಅರಿವೇಣಿಶಾಸ್ತ್ರ ಕ್ಷೌರಿಕನಿಂದ ವಧೂವರರ ಉಗುರು ತೆಗೆಯೋ ಶಾಸ್ತ್ರ ಮೊದಲಾದುವನ್ನು ಮಾಡುತ್ತಾರೆ. ಅರಿಸಿನ ಶಾಸ್ತ್ರದ ದಿನ ೯ ಗೆಣ್ಣಿನ ಬಿದಿರು ಕಂಬವನ್ನು ನೇರಳೆಕೊಂಬೆ, ಕಳಸಾದಿಗಳೊಂದಿಗೆ ಇರಿಸಿ ಸೋದರ ಮಾವನು ಪೂಜಿಸುವ ವಿಧಿ ಇದೆ. ಇದನ್ನು “ಕಡ್ಡಿ ಶಾಸ್ತ್ರ” ಎನ್ನುತ್ತಾರೆ. ಮೈನೆರೆದಾಕೆಗೆ ಸೋದರಮಾವನು ಐದು ವಿಧದ ಸೊಪ್ಪಿನ ಗುಡಿಸಲು ಹಾಕುವ, ೧೧ ದಿನಕ್ಕೆ ಒಳಗೆ ಕರೆದುಕೊಳ್ಳುವ, ಒಸಗೆ ಹಾಕುವ ಸಂಪ್ರದಾಯಗಳಿವೆ. ಇವರಲ್ಲಿ ಹೆಣವನ್ನು ಹೂಳುತ್ತಾರೆ. ಶವವನ್ನು ಸಾಗಿಸಲು ಬಿದಿರಿನ ಚಟ್ಟ ಕಟ್ಟುತ್ತಾರೆ. ಅವಿವಾಹಿತನು ಮೃತನಾದಲ್ಲಿ ಆ ಶವವನ್ನು ಒಂದೇ ಬಿದಿರಿನಲ್ಲಿ ಇಬ್ಬರು ಹೊತ್ತೊಯ್ಯುವ ಪದ್ಧತಿ ಹಿಂದೆ ಇದ್ದಿತು. ೩ ದಿನಕ್ಕೆ ಹಾಲಿನಶಾಸ್ತ್ರ, ಕ್ಷೌರಿಕನು ಶವಹೊತ್ತವರ ಹೆಗಲು ತೊಳೆಯುವುದು, ೧೧ ದಿನಕ್ಕೆ ತಿಥಿ ಮತ್ತಿತರ ಶಾಸ್ತ್ರಗಳನ್ನು ನಡೆಸುತ್ತಾರೆ. ಗಂಗಮ್ಮ, ಮುನೇಶ್ವರ, ವೆಂಕಟರಮಣ ಮೊದಲಾದ ದೇವರುಗಳನ್ನು ಪೂಜಿಸುವ, ಹೊಸದಾಗಿ ಬಿದಿರು ತಂದಾಗ ಅದನ್ನು ಪೂಜಿಸಿದ ಬಳಿಕವೇ ಬಳಕೆ ಮಾಡುವ ಪದ್ಧತಿಯೂ ಇವರಲ್ಲಿದೆ.

**ಗಾಣಿಗ:** ಗಾಣ ಆಡಿಸಿ ಎಣ್ಣೆಬೀಜಗಳಿಂದ ಎಣ್ಣೆ ತೆಗೆಯುವುದು ಇವರ ಸಾಂಪ್ರದಾಯಿಕ ವೃತ್ತಿಯಾಗಿದೆ. ಈಚೆಗೆ ಕೃಷಿ, ನೌಕರಿಯಂತಹ ಇತರ ಉದ್ಯೋಗಗಳಲ್ಲಿಯೂ ಇವರು ತೊಡಗಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಕನ್ನೇಂದ್ರ, ನಾಗೇಂದ್ರ, ಉಪೇಂದ್ರ, ಮಲ್ಲೇಂದ್ರ, ಮಾರ್ಕಂಡೇಯ ಮೊದಲಾದುವು ಇವರಲ್ಲಿನ ಕೆಲವು ಗೋತ್ರಗಳಾಗಿವೆ. ಇವರಲ್ಲಿ ಜ್ಯೋತಿ ಪಣ, ಜ್ಯೋತಿನಗರ ವೈಶ್ಯ, ಕಿರುಗಾಣಿಗ, ಒಂಟೆತ್ತಿನ ಗಾಣಿಗ, ಜೋಡೆತ್ತಿನ ಗಾಣಿಗ ಮೊದಲಾದ ಒಳಪಂಗಡಗಳಿದ್ದು ಈಚೆಗೆ ಇವುಗಳಲ್ಲಿ ವಿವಾಹ ಸಂಬಂಧಗಳಾಗುತ್ತಿವೆ. ಗಾಣಿಗರಲ್ಲಿ ಮಗು ಹುಟ್ಟಿದ ೯ನೇ ದಿನ ಸೂತಕ ಕಳೆದು, ಮೂರು ತಿಂಗಳ ಒಳಗೆ ನಾಮಕರಣ ಮಾಡುತ್ತಾರೆ. ಋತುಮತಿಯಾದ ಹುಡುಗಿಯನ್ನು ಒಂಭತ್ತು ದಿನಗಳವರೆಗೆ ಪ್ರತ್ಯೇಕ ಕುಳ್ಳಿರಿಸಿ ಆರತಿ ಬೆಳಗುತ್ತಾರೆ. ಇವರಲ್ಲಿ ದತ್ತು ಸ್ವೀಕಾರ ಒಪ್ಪಿತವಾಗಿದೆ. ಕೂಡಿಕೆ, ವಿಚ್ಛೇದನಗಳು ಸಾಂಪ್ರದಾಯಿಕ ಮನ್ನಣೆ ಪಡೆದಿಲ್ಲ. ವಿವಾಹವು ಹೆಣ್ಣಿನ ಮನೆಯಲ್ಲಿಯೇ ನಡೆಯುವುದು ಹಿಂದಿನ ರೂಢಿಯಾಗಿದ್ದಿತು. ವಿವಾಹದ ಸಂದರ್ಭದಲ್ಲಿ ಜನಿವಾರ ಧರಿಸುವ ಪದ್ಧತಿ ಇದೆ. ಆಯಾ ಪಂಗಡಗಳ ರೀತಿ ರಿವಾಜಿನಂತೆ ವಿವಾಹ ಆಚರಣೆಗಳು ನಡೆದರೂ, ಬ್ರಾಹ್ಮಣ ಪುರೋಹಿತರೂ ಕೆಲವೊಂದು ಶಾಸ್ತ್ರಗಳನ್ನು ನಡೆಸುತ್ತಾರೆ. ಗಾಣಿಗರಲ್ಲಿ ಶವವನ್ನು ಹೂಳುತ್ತಾರೆ. ವ್ಯಕ್ತಿಯು ನಿಧನ ಹೊಂದಿದ ೧೧ ದಿನಗಳವರೆಗೆ ಮೈಲಿಗೆ ಆಚರಿಸಿ, ೧೨ನೇ ದಿನ ವೈಕುಂಠ ಸಮಾರಾಧನೆ ನಡೆಸುತ್ತಾರೆ. ಮಾಂಸಾಹಾರಿಗಳಾದ ಇವರು ಹಿಂದೂಗಳ ಎಲ್ಲಾ ಪ್ರಮುಖ ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ. ಶ್ರೀರಾಮನವಮಿಗೆ ಮೂರು ದಿನ ಮೊದಲು ಶ್ರೀರಾಮ ಕಲ್ಯಾಣೋತ್ಸವವನ್ನು ಸಾಮೂಹಿಕವಾಗಿ ಆಚರಿಸುವುದು ಕೆಲವೆಡೆ ಕಂಡುಬರುತ್ತದೆ.

**ಗೊಲ್ಲ:** ಪಶುಪಾಲನೆಯೇ ಕುಲ ಕಸುಬಾಗಿದ್ದ ಗೊಲ್ಲರು ಕ್ರಮೇಣ ವ್ಯವಸಾಯ, ನೌಕರಿ ಮತ್ತಿತರ ವೃತ್ತಿಗಳನ್ನೂ ನಡೆಸುತ್ತಿದ್ದಾರೆ. ಗೊಲ್ಲರಲ್ಲಿ ಕಾಡುಗೊಲ್ಲರು, ಊರುಗೊಲ್ಲರು ಎಂಬ ಪಂಗಡಗಳಿದ್ದು, ಇವರಲ್ಲಿ ಆಡು, ಸಾಸ್ವೆ ಮೊದಲಾದ ಗೋತ್ರಗಳಿವೆ. ಗಣೆ ಊದುವ, ಕಾವ್ಯಗಳನ್ನು ಹಾಡುವ, ಕೋಲಾಟ ಆಡುವ ಕಲಾವಿದರು ಇವರಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಗೊಲ್ಲರಲ್ಲಿ ಜಾತಿ ಪಂಚಾಯಿತಿ ವ್ಯವಸ್ಥೆ ಹಿಂದೆ ಬಹು ಶಕ್ತಿಶಾಲಿಯಾಗಿದ್ದಿತು. ಇವರಲ್ಲಿ ದತ್ತು ಸಂಪ್ರದಾಯವಿದೆ. ಗೊಲ್ಲರಲ್ಲಿ ಗರ್ಭಿಣಿಯನ್ನು ಹಟ್ಟಿಯ ಹೊರಗಿನ ಪ್ರತ್ಯೇಕ ಗುಡಿಸಲಲ್ಲಿ ಒಂಟಿಯಾಗಿ ಇರಿಸುವ, ಆಕೆಯೇ ಸ್ವತಃ ಹೆರಿಗೆ–ಬಾಣಂತಿ ಕಾರ್ಯ ಮಾಡಿಕೊಳ್ಳಬೇಕಾದ ಕಟ್ಟುಪಾಡುಗಳು ಹಿಂದೆ ವಿಶೇಷವಾಗಿದ್ದವು. ಮಗು ಹುಟ್ಟಿದ ಮೂರು ದಿನಕ್ಕೆ ಮೈಲಿಗೆ ಕಳೆದುಕೊಳ್ಳುವ, ಒಂಬತ್ತು ದಿನ ಅಥವಾ ಒಂದು ತಿಂಗಳ ಒಳಗೆ ನಾಮಕರಣ ಮಾಡುವ ಪದ್ಧತಿ ಇದೆ. ಮೈನೆರೆದ ಹುಡುಗಿಯನ್ನು ಮೂರು ದಿನದಿಂದ ೧೨ ದಿನಗಳವರೆಗೆ ಪ್ರತ್ಯೇಕ ಕೂರಿಸಿ ಒಸಗೆ ಹಾಕುವ ರೂಢಿ ಇವರಲ್ಲಿದೆ. ಕುಲದ ಮುಖಂಡರ ಮಾರ್ಗದರ್ಶನದಲ್ಲಿ ವಿವಾಹ ಕಾರ್ಯಗಳಾಗುತ್ತವೆ. ಬ್ರಾಹ್ಮಣ ಪುರೋಹಿತರೂ ಕೆಲವೊಂದು ವಿಧಿಗಳನ್ನು ನಡೆಸಿಕೊಡುತ್ತಾರೆ.ಇವರಲ್ಲಿ ಶವವನ್ನು ಹೂಳುತ್ತಾರೆ. ಆದರೆ ತೊನ್ನು ಅಥವಾ ಬೆಂಕಿ ಆಕಸ್ಮಿಕಗಳಂತಹ ದುರ್ಮರಣಕ್ಕೀಡಾದವರ ಶವಕ್ಕೆ ಅಗ್ನಿಸಂಸ್ಕಾರ ಮಾಡುತ್ತಾರೆ. ೧೦ ದಿನಗಳ ಸೂತಕ ಆಚರಿಸಿ, ೧೧ನೇ ದಿನ ತಿಥಿ ಮಾಡುತ್ತಾರೆ. ಗೊಲ್ಲ ಮಹಿಳೆಯರು ಗೊಲ್ಲ ಕಡಗ ಅಥವಾ ಕೃಷ್ಣಮುದ್ರೆ ಧರಿಸುವುದರಿಂದ, ಗಂಡ ಸತ್ತರೂ ತಾವು ವಿಧವೆಯರಾಗುವುದಿಲ್ಲ ಎಂಬ ನಂಬಿಕೆ ಹೊಂದಿರುವುದು ಇವರಿಗೇ ವಿಶಿಷ್ಟವಾದ ನಡವಳಿಕೆಯಾಗಿದೆ. ಜುಂಜಪ್ಪ, ಶ್ರೀಕೃಷ್ಣ ಮೊದಲಾದವು ಇವರ ಮುಖ್ಯ ಆರಾಧ್ಯ ದೈವಗಳಾಗಿವೆ.

**ಚೆನ್ನದಾಸ:** ದಾಸರು, ಪೂಸಲು ದಾಸರು ಮೊದಲಾದ ಹೆಸರುಗಳಿರುವ ಇವರು ಶಂಕು ಜಾಗಟೆ ಹಿಡಿದು ಮನೆಮನೆಗೆ ಹೋಗಿ ಭಿಕ್ಷೆ ಮಾಡುವವರಾಗಿದ್ದರು. ಇವರಲ್ಲಿ ಕೆಲವರಿಗೆ ಕೋಲೆ ಬಸವ ಆಡಿಸುವುದು ಸಾಂಪ್ರದಾಯಿಕ ವೃತ್ತಿಯಾಗಿದೆ ಎಂದು ಹೇಳಲಾಗಿದೆ. ಅಲೆಮಾರಿಗಳಾಗಿದ್ದ ಇವರು ಈಚೆಗೆ ಒಂದೆಡೆ ನೆಲೆಸಿ ಕೃಷಿ, ನೌಕರಿ, ಬೀದಿಬದಿ(ಚಿಲ್ಲರೆ) ವ್ಯಾಪಾರ ಇತ್ಯಾದಿಗಳಲ್ಲಿ ತೊಡಗಿದ್ದಾರೆ. ಮೈಲಾರೊಳ್ಳು, ಕುಂದರೊಳ್ಳು, ಗೋದಾವಳ್ಳು ಮೊದಲಾದ ಗೋತ್ರಗಳಿವೆ ಎನ್ನಲಾಗಿದೆ. ತೆಲುಗು ಮಾತೃಭಾಷೆಯ ಇವರು ಕನ್ನಡವನ್ನೂ ಬಲ್ಲರು. ಅಲ್ಲದೆ, ಲಿಪಿಯಿರದ ತಮ್ಮದೇ ಸಂಕೇತ ಭಾಷೆಯನ್ನೂ ಹೊಂದಿದ್ದರೆಂದು ತಿಳಿದುಬರುತ್ತದೆ. ಕುಲದ ಮುಖ್ಯನ ಮುಂದಾಳತ್ವದಲ್ಲಿ ಇವರ ಆಚಾರ–ಸಂಪ್ರದಾಯ ನಡೆಯುತ್ತವೆ. ವೈಷ್ಣವ ಪಂಥದ ಇವರು ವೆಂಕಟರಮಣ, ಹನುಮಂತ ಮೊದಲಾದ ದೇವರುಗಳನ್ನು ಆರಾಧಿಸುತ್ತಾರೆ.

**ತಿಗಳ:** ತಿಗಳರು ಮೂಲತಃ ತೋಟಗಾರಿಕೆಯನ್ನು ಮುಖ್ಯ ಕುಲಕಸುಬಾಗಿ ಇಟ್ಟುಕೊಂಡವರು. ಈಚೆಗೆ ವಿವಿಧ ನೌಕರಿಗಳನ್ನು ಅವಲಂಬಿಸಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ವ್ಯವಸ್ಥೆ ಈಗಲೂ ರೂಢಿಯಲ್ಲಿದೆ. ಯಜಮಾನ, ಆಣ್‌ಕಾರ, ಮುದ್ರೆಯವ ಹಾಗೂ ರಾಶಿಯವರು ಈ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಇವರ ಮುಂದಾಳತ್ವದಲ್ಲಿ ವಿವಾಹಾದಿ ಧಾರ್ಮಿಕ ಕಾರ್ಯಗಳು ನಡೆಯುತ್ತವೆ (ಕೆಲವೆಡೆ ಬ್ರಾಹ್ಮಣ ಪುರೋಹಿತರೂ ವಿವಾಹಕ್ಕೆ ಬರುವುದುಂಟು). ಮಗು ಹುಟ್ಟಿದ ೧೧ನೇ ದಿನ ಅಥವಾ ಮೂರು ತಿಂಗಳ ಒಳಗೆ ಮಗುವಿಗೆ ನಾಮಕರಣ ನಡೆಸುತ್ತಾರೆ. ಮೈನೆರೆದ ಹುಡುಗಿಗೆ ಐದರಿಂದ ಒಂಬತ್ತು ದಿನಗಳವರೆಗೆ ಆರತಿ, ಒಸಗೆ ಕಾರ್ಯಕ್ರಮ ನಡೆಸಿ ಕೊನೆಯ ದಿನ ಬಳಗಕ್ಕೆ ಊಟ ಹಾಕುತ್ತಾರೆ. ಇವರಲ್ಲಿ 'ತೆರ' ಸಂಪ್ರದಾಯ ಇದೆ. ವ್ಯಕ್ತಿ ನಿಧನನಾದ ೧೧ನೇ ದಿನ ತಿಥಿ ಕಾರ್ಯ ಮಾಡುತ್ತಾರೆ. ದ್ರೌಪದಿ, ಗಂಗಮ್ಮ, ವೆಂಕಟರಮಣ ಮೊದಲಾದ ದೇವರುಗಳನ್ನು ಪೂಜಿಸುತ್ತಾರೆ. ಧರ್ಮರಾಯನ ಒಕ್ಕಲಿನವರು (ವಹ್ನಿಕುಲ ಕ್ಷತ್ರಿಯರು) 'ಕರಗ' ಆಚರಣೆಯನ್ನು ವಿಶೇಷವಾಗಿ ನಡೆಸುತ್ತಾರೆ. ಬುಕಾನನ್ ತೆಲುಗು ಮೂಲದ ವನಪಳ್ಳಿಗಳು, ಅರವತಿಗಳರು ಹಾಗೂ ತಮಿಳು ಮೂಲದ ಉಳ್ಳಿ ತಿಗಳರ ಬಗ್ಗೆ ಬರೆಯುತ್ತಾ, ಇವರಿಗೆ ತೋಟಗಾರಿಕೆ ಕೌಶಲ್ಯ ಚೆನ್ನಾಗಿದೆ; ಹಣ್ಣು, ತರಕಾರಿಗಳನ್ನು ಸುತ್ತಲ ಪಟ್ಟಣಗಳಿಗೆ ಒಯ್ದು ಮಾರುತ್ತಾರೆ. ಮಾಂಸಾಹಾರಿಗಳಾದರೂ ಮಾದಕ ದ್ರವ್ಯ ಸೇವನೆ ಇಲ್ಲ. ತಿರುಪತಿ ಪೂಜಾರಿಯಿಂದ ಹಣಕೊಟ್ಟು ತಂದ ಪವಿತ್ರ ತೀರ್ಥವನ್ನು ತಮ್ಮ ತೋಟಗಳಿಗೆ ಚಿಮುಕಿಸುತ್ತಾರೆ – ಇತ್ಯಾದಿ ಮಾಹಿತಿ ನೀಡಿದ್ದಾನೆ.

**ದಕ್ಕಲಿಗ:** ದಕ್ಕಲ, ದೊಕ್ಕಲ, ಡಕ್ಕಲಿಗ ಇತ್ಯಾದಿ ಹೆಸರುಗಳಿಂದಲೂ ಗುರುತಿಸಲ್ಪಡುವ ಇವರು ಮಾದಿಗರನ್ನು ತಮ್ಮ ದಾಯಾದಿಗಳು ಅಥವಾ ಪೋಷಕರು ಎಂದು ನಂಬಿದವರಾಗಿದ್ದರು. ಅಂತೆಯೇ, ಮೂಲತಃ ಅಲೆಮಾರಿಗಳಾಗಿದ್ದು, ಮಾದಿಗ ಸಮುದಾಯದಿಂದ ಮಾತ್ರ ಆಹಾರ, ವಸ್ತ್ರಗಳನ್ನು ಎತ್ತುವಳಿ ಮಾಡಿ ಜೀವನ ಸಾಗಿಸುವವರಾಗಿದ್ದರು. ಈಚೆಗೆ ಅನುಕೂಲವಾದೆಡೆ

ನೆಲೆ ನಿಂತು ಸರಕಾರ ನೀಡಿದ ಜಮೀನಿನಲ್ಲಿ ವ್ಯವಸಾಯ ಮಾಡುವುದು, ಕೃಷಿಕೂಲಿ, ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮತ್ತಿತರ ವೃತ್ತಿಗಳಿಗೆ ತಮ್ಮ ಜೀವನ ವಿಧಾನವನ್ನು ಬದಲಿಸಿಕೊಳ್ಳುತ್ತಿದ್ದಾರೆ. ದಕ್ಕಲಿಗರಲ್ಲಿ ಕುಲಪಂಚಾಯಿತಿ, ಕಟ್ಟೆಮನೆ ವ್ಯವಸ್ಥೆ ಇದೆ. ಇವರಲ್ಲಿ ಜನನ, ಮರಣ, ಋತುದಿನಗಳಲ್ಲಿ ನಿಗದಿಯಂತೆ ಸೂತಕವನ್ನು ಆಚರಿಸಲಾಗುತ್ತದೆ. ಋತುಮತಿಯಾದಾಕೆಯನ್ನು ಸೊಪ್ಪಿನ ಗುಡಿಸಲಲ್ಲಿ ಇರಿಸುವ ಸಂಪ್ರದಾಯವೂ ಇದೆ. ಇತರರೊಡನೆ ಇವರು ಕನ್ನಡ, ತೆಲುಗಿನಲ್ಲಿ ವ್ಯವಹರಿಸಿದರೂ ತಮ್ಮ ತಮ್ಮಲ್ಲಿ ಲಿಪಿ ಇರದ ತಮ್ಮದೇ ಭಾಷೆಯೊಂದನ್ನು ಕೆಲವೆಡೆ ಬಳಸುವುದುಂಟು ಎನ್ನಲಾಗಿದೆ.

**ದರ್ಜಿ:** ಇವರನ್ನು ಭಾವಸಾರ ಕ್ಷತ್ರಿಯರೆಂದೂ ಕರೆಯಲಾಗುತ್ತದೆ. ಬಟ್ಟೆ ಹೊಲಿಯುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಈಚೆಗೆ ಇತರ ಉದ್ಯೋಗಗಳನ್ನೂ ಕೈಗೊಂಡಿದ್ದಾರೆ. ಮರಾಠಿ ಮಾತೃಭಾಷೆಯ ಇವರು ಕನ್ನಡವನ್ನೂ ಬಲ್ಲವರಾಗಿದ್ದಾರೆ. ಇವರಲ್ಲಿ ಭಾರದ್ವಾಜ, ಶುಕ್ಲಾಚಾರ್ಯ, ವಸಿಷ್ಠ ಮೊದಲಾದ ಗೋತ್ರಗಳಿದ್ದು, ಜನಿವಾರ ಧರಿಸುತ್ತಾರೆ. ಇವರ ವಿವಾಹ ಮೊದಲಾದ ಕಾರ್ಯಗಳ ಮುಂದಾಳತ್ವವನ್ನು ಜಾತಿ ಮುಖಂಡ 'ಶೆಟ್ಟಿ ಯಜಮಾನ್' ವಹಿಸುತ್ತಾರೆ. ಆದರೂ ಬ್ರಾಹ್ಮಣ ಪುರೋಹಿತರೇ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಡುತ್ತಾರೆ. ಇವರಲ್ಲಿ ಮಗು ಹುಟ್ಟಿದ ೧೦ನೇ ದಿನವರೆಗೆ ಮೈಲಿಗೆ ಆಚರಿಸಿ ೧೧ನೇ ದಿನ ಅಥವಾ ಒಂದು ವರ್ಷದ ಒಳಗೆ ನಾಮಕರಣ ಮಾಡುತ್ತಾರೆ. ಮೈನೆರೆದ ಹುಡುಗಿಯನ್ನು ಪ್ರತ್ಯೇಕ ಇರಿಸಿ ಆರತಿ ಬೆಳಗುತ್ತಾರೆ, ಕೊನೆಯ ದಿನ ಬಂಧುಗಳಿಗೆ ಔತಣ ಏರ್ಪಡಿಸುತ್ತಾರೆ. ಗಂಡಿನವರೇ ಹೆಣ್ಣನ್ನು ಹುಡುಕುವುದು, ಹೆಣ್ಣಿನ ಮನೆಯಲ್ಲಿಯೇ ವಿವಾಹ ನಡೆಸುವುದು ಇವರ ಸಂಪ್ರದಾಯವಾಗಿದೆ. ಸಾಮಾನ್ಯವಾಗಿ ಮಾಂಸಾಹಾರಿಗಳಾದ ದರ್ಜಿಗರಲ್ಲಿ ವ್ಯಕ್ತಿಯು ಸತ್ತ ೧೧ನೇ ದಿನಕ್ಕೆ ಕಾರ್ಯ, ೧೨ನೇ ದಿನಕ್ಕೆ ವೈಕುಂಠ ಸಮಾರಾಧನೆ ಮಾಡುತ್ತಾರೆ. ಎಲ್ಲಾ ಹಿಂದೂ ಹಬ್ಬಗಳನ್ನೂ ನಡೆಸುವ ಇವರಿಗೆ ಪಾಂಡುರಂಗ ಅಥವಾ ವಿಠೋಬ, ತುಳಜಾಭವಾನಿ ಬಹು ಮುಖ್ಯ ಆರಾಧ್ಯ ದೈವಗಳಾಗಿವೆ. ಪಂಡರಾಪುರ, ತಿರುಪತಿ, ನಂಜನಗೂಡು ಮೊದಲಾದವು ಇವರ ಕೆಲವು ಯಾತ್ರಾಸ್ಥಳಗಳೆನಿಸಿವೆ.

**ನಗರ್ತ:** ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುವ ಇವರಲ್ಲಿ ನಾಮಧಾರಿ ನಗರ್ತರು ಹಾಗೂ ಲಿಂಗಧಾರಿ (ಶೈವ) ನಗರ್ತರು ಎಂಬ ಎರಡು ಪ್ರಮುಖ ಪಂಗಡಗಳಿವೆ. ವ್ಯಾಪಾರ ಇವರ ಸಾಂಪ್ರದಾಯಿಕ ವೃತ್ತಿಯಾಗಿದ್ದು, ಈಚೆಗೆ ಇತರ ವೃತ್ತಿ–ನೌಕರಿಗಳಲ್ಲಿಯೂ ತೊಡಗಿದ್ದಾರೆ. ಇವರ ಮಾತೃಭಾಷೆ ಕನ್ನಡ. ಕೆಲವರು ತೆಲುಗು ಮಾತನಾಡುತ್ತಾರೆ. ಕನ್ನೇಂದ್ರ, ಕೊಮರೇಂದ್ರ, ಚಾಚೇಂದ್ರ, ಕೋವೇಂದ್ರ, ವಲ್ಕಲ, ವರುಣ ಮೊದಲಾದುವು ಇವರಲ್ಲಿನ ಕೆಲವು ಗೋತ್ರಗಳಾಗಿವೆ. ದತ್ತು ಸಂಪ್ರದಾಯ ಒಪ್ಪಿತವಾಗಿದೆ. ವಿಧವಾ ವಿವಾಹ, ತೆರ ಪದ್ಧತಿಗಳು ಸಾಂಪ್ರದಾಯಿಕವಾಗಿ ಇಲ್ಲ. ವಿವಾಹ ವಿಚ್ಛೇದನಕ್ಕೆ ಅನುಮತಿ ಇದೆ. ಸಸ್ಯಾಹಾರಿಗಳಾದ ಇವರಲ್ಲಿ ಉಪನಯನ, ಜನಿವಾರಧಾರಣೆ ಇತ್ಯಾದಿ ಆಚರಣೆಗಳಿವೆ. ನಗರ್ತರಲ್ಲಿ ಜಾತಿ ಪಂಚಾಯಿತಿ ಇದ್ದು, ಶೆಟ್ಟಿ ಯಜಮಾನರು ವಿವಾದಗಳನ್ನು ಬಗೆಹರಿಸುತ್ತಾರೆ. ಇವರಲ್ಲಿ ಪುರೋಹಿತ ವರ್ಗವಿಲ್ಲ. ನಾಮಧಾರಿಗಳಾದರೆ ಬ್ರಾಹ್ಮಣ ಪುರೋಹಿತರನ್ನು, ಶಿವಾಚಾರ್ಯರಾದರೆ ಆರಾಧ್ಯರು ಅಥವಾ ಜಂಗಮರನ್ನು ಕರೆಸಿ ಶಾಸ್ತ್ರಾಚಾರಗಳನ್ನು ನಡೆಸುತ್ತಾರೆ. ಇವರಲ್ಲಿ ಬಸುರಿಯು ಹಡೆದ ೧೫ ದಿನಗಳವರೆಗೆ 'ಪುರುಡಿನ' (ಅಶುಚಿ) ಕಾಲವೆಂದು ಪರಿಗಣಿಸಿ ಆಕೆಯನ್ನು ಕೋಣೆಯಲ್ಲಿರಿಸಿ, ೧೬ನೆಯ ದಿನ ಆಕೆಗೆ ಅಭ್ಯಂಜನ ಮಾಡಿಸಿ, ಗಂಡ ಹೆಂಡತಿಯರನ್ನು ಹಸೆ ಮೇಲೆ ಕುಳ್ಳಿರಿಸಿ ಬ್ರಾಹ್ಮಣರಿಂದ ಪುಣ್ಯಾಹ ವಿಧಿ, ನಾಮಕರಣ ಇತ್ಯಾದಿ ನಡೆಸುವುದು ಪದ್ಧತಿಯಾಗಿದೆ.ನಗರ್ತರಲ್ಲಿ ಹಿಂದೆ, ವಿವಾಹವಾದ ೪ನೆಯ ರಾತ್ರಿ ವಧೂವರರಿಗೆ ನೀಡಿದ ಒಡವೆವಸ್ತ್ರಗಳು, ಉಡುಗೊರೆಗಳನ್ನು ಊರ ಪೇಟೆಬೀದಿಗಳಲ್ಲಿ ಮೆರವಣಿಗೆ ಮಾಡುವ (ಪೇಟೆ ಒಸಗೆ) ಪದ್ಧತಿ ಇದ್ದಿತು. ಇವರಲ್ಲಿ ನಾಮಧಾರಿಗಳು ಶವವನ್ನು ಸುಟ್ಟರೆ, ಶಿವಾಚಾರ್ಯದವರು ಹೂಳುತ್ತಾರೆ. ನಗರೇಶ್ವರ ಇವರ ಕುಲದೇವತೆ. ಅದಲ್ಲದೆ ವೀರಭದ್ರ, ವೆಂಕಟರಮಣ, ಲಕ್ಷ್ಮಿ, ಆಂಜನೇಯ, ಅನ್ನಪೂರ್ಣೆ ಮೊದಲಾದ ದೇವತೆಗಳನ್ನೂ ಇವರು ಪೂಜಿಸುತ್ತಾರೆ. ತಿರುಪತಿ, ಧರ್ಮಸ್ಥಳ ಇವರ ಕೆಲ ಯಾತ್ರಾಸ್ಥಳಗಳೆನಿಸಿವೆ.

**ನಟುವ:** ನಟುವಾಂಗದವರು ಎಂದೂ ಗುರುತಿಸುವ ನಟುವರು ಮೂಲದಲ್ಲಿ ಬುಡಕಟ್ಟು ಜನವರ್ಗದವರಾಗಿದ್ದು, ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದವರಾಗಿದ್ದಾರೆ. ಅಲ್ಲಿ ಇವರು ಸಣ್ಣ ಪುಟ್ಟ ವ್ಯಾಪಾರದೊಂದಿಗೆ ನಾಟ್ಯ ಮಾಡುವವರೂ ಆಗಿದ್ದು, ಕ್ರಮೇಣ ನೃತ್ಯ, ಸಂಗೀತಾದಿಗಳನ್ನೇ ಕುಲ ವೃತ್ತಿಯಾಗಿ ಹೊಂದಿದ್ದವರು. ರಾಜಕೀಯ, ಸಾಮಾಜಿಕ ರಂಗಗಳಲ್ಲಿ ಆದ

ಸ್ಥಿತ್ಯಂತರಗಳ ಪರಿಣಾಮವಾಗಿ ಕುಲಕಸುಬು ನಾಮಾವಶೇಷವಾಗಿದ್ದು, ಈಗ ಬದುಕಿಗಾಗಿ ವ್ಯಾಪಾರ, ವ್ಯವಸಾಯ, ನೌಕರಿ ಮೊದಲಾದ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಆಂಧ್ರದ ಗಡಿಭಾಗಗಳಲ್ಲಿನ ಬಹುಪಾಲು ನಟುವರು ಈಗ ಬಣಜಿಗರಾಗಿ ಪರಿವರ್ತಿತರಾಗಿದ್ದಾರೆ ಎಂದೂ ಅಧ್ಯಯನಕಾರರು ದಾಖಲಿಸಿದ್ದಾರೆ. ನಟುವರ ಮಾತೃಭಾಷೆ ತೆಲುಗು. ಆದರೆ ಸ್ಥಳೀಯವಾಗಿ ಕನ್ನಡವನ್ನು ಮಾತನಾಡುತ್ತಾರೆ. ಇವರಲ್ಲಿ ಎರಡು ಮುಖ್ಯ ಗುಂಪುಗಳಿವೆ: ೧.ಪ್ರಕೃತರು ೨. ತಿರುನಾಮದವರು. ಪ್ರಕೃತರು ನೃತ್ಯಕ್ಕೆ ಪ್ರಸಿದ್ಧರಾದವರು; ಸಸ್ಯಾಹಾರಿಗಳು. ಸಂಗೀತಕ್ಕೆ ಹೆಸರಾದ ತಿರುನಾಮದವರು ಮಾಂಸಾಹಾರಿಗಳಾಗಿದ್ದು ಇವರಲ್ಲಿ ಪರಸ್ಪರ ವಿವಾಹ ಸಂಬಂಧ ಇರುವುದಿಲ್ಲ. ಶೆಟ್ಟಿ ಬಲಜಿಗರಲ್ಲಿನ ದಾಸಯ್ಯನನ್ನೇ ತಮ್ಮ ಕುಲಪುರೋಹಿತನೆಂದು ನಟುವರು ನಂಬಿದ್ದಾರೆ. ಆತನ ಮೂಲಕವೇ ಇವರ ಶವಸಂಸ್ಕಾರ ಆಚರಣೆಗಳು ನಡೆಯುವುದು. ಸ್ವಾತಂತ್ರ್ಯ ಪೂರ್ವದಲ್ಲಿ ವಿಶಿಷ್ಟವಾದ ಜೀವನ ಕ್ರಮವನ್ನು ಹೊಂದಿದ್ದ ನಟುವರಲ್ಲಿ ಮಹಿಳೆಗೆ ವಿಶೇಷ ಪ್ರಾತಿನಿಧ್ಯವಿದ್ದಿತು. ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ಇತರರ ಹಾಗೆ ಇವರೂ ಸೂತಕಾಚರಣೆ ನಡೆಸಿದರೂ ನಾಮಕರಣ, ಮೈನೆರೆದಾಗಿನ ಒಸಗೆ, ಗೆಜ್ಜೆಪೂಜೆ, ವಿವಾಹ ಆಚರಣೆಗಳು ಇವರಿಗೆ ಮಾತ್ರವೇ ವಿಶಿಷ್ಟವಾಗಿದ್ದವು.

**ನಾಯಕ:** ನಾಯಕರು ಮೂಲತಃ ಅರಣ್ಯ ಜೀವಿಗಳಾಗಿದ್ದವರು. ಬೇಟೆಯಾಡುವುದು ಆಗಿನ ಅವರ ಮುಖ್ಯ ಜೀವನೋಪಾಯವಾಗಿದ್ದಿತು. ಆದ್ದರಿಂದಲೇ ಅವರನ್ನು 'ಬೇಡ'ರೆಂದೂ ಕರೆಯಲಾಗುತ್ತದೆ. 'ವಾಲ್ಮೀಕಿ'ಯನ್ನು ತಮ್ಮ ಪೂರ್ವಜ ಎಂದು ಗುರುತಿಸಿಕೊಳ್ಳುವುದರಿಂದ ತಾವು ವಾಲ್ಮೀಕಿ ಜಾತಿಯವರೆಂದು ಹೇಳಿಕೊಳ್ಳುವುದೂ ಉಂಟು. ಆಯಾ ಪ್ರದೇಶದ ದೊರೆಗಳ ಕೈಕೆಳಗೆ ಸೈನಿಕರಾಗಿಯೂ ಸೇವೆ ಸಲ್ಲಿಸುತ್ತಿದ್ದ ಇವರು ಕ್ರಮೇಣ ಕೃಷಿ, ಕೃಷಿಕೂಲಿ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಕೋಲಾರ ಜಿಲ್ಲೆಯ ಬಾಗೇಪಲ್ಲಿ, ಶಿಡ್ಲಘಟ್ಟ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ ತಾಲೂಕುಗಳಲ್ಲಿ ಇವರು ಹೆಚ್ಚಾಗಿ ವಾಸಿಸುತ್ತಿದ್ದಾರೆಂದು ಹೇಳಲಾಗಿದೆ. ಹೆಚ್ಚಿನ ಊರುಗಳಲ್ಲಿ 'ತಳಾರಿ'ಯ ಕಾರ್ಯವೂ ಇವರದೇ ಎನ್ನಲಾಗಿದೆ. ಇವರಲ್ಲಿ ಜಾತಿ ಪಂಚಾಯತಿ ಇದ್ದು, ಮುಖಂಡನನ್ನು 'ಯಜಮಾನ' ಎನ್ನುತ್ತಾರೆ. ಪಸುಪಲು, ಸಾರೇಲು, ಮಲ್ಲಿಗೆ, ಮಂದಲ, ಹಾಲು ಮೊದಲಾದುವು ಇವರಲ್ಲಿನ ಕೆಲವು ಗೋತ್ರಗಳಾಗಿವೆ. ಇವರಲ್ಲಿ ಕೂಡಿಕೆ, ವಿವಾಹವಿಚ್ಛೇದನ, ದತ್ತು ಹಾಗೂ ತೆರ ಪದ್ಧತಿಗಳಿವೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾರೆ. ತೆಲುಗು ಮಾತೃಭಾಷೆಯಾದ ಇವರು ಕನ್ನಡವನ್ನೂ ಬಲ್ಲವರಾಗಿದ್ದಾರೆ. ಹುಟ್ಟು, ಸಾವು ಹಾಗೂ ಋತುಮತಿಯಾದ ಸಂದರ್ಭಗಳಲ್ಲಿ ನಿಬಂಧನೆಯಂತೆ ಸೂತಕ, ಶುದ್ಧಿ ಕ್ರಿಯೆಗಳನ್ನು ಆಚರಿಸುತ್ತಾರೆ. ಶವವನ್ನು ಹೂಳುವ ಪದ್ಧತಿ ಇದೆ. ವಿವಾಹದಲ್ಲಿ ಚಪ್ಪರದ ಶಾಸ್ತ್ರದಂದು ಹುತ್ತಕ್ಕೆ ಪೂಜೆ ಮಾಡಿ, ತಾಯಿಯೇ ಹುಡುಗಿ ಕೊರಳಿಗೆ ತವರು ಮನೆ ಬಟ್ಟನ್ನು (ತಾಳಿ) ಕಟ್ಟುತ್ತಾಳೆ. ಪಾನಕ ನೀಡಿ, ದಿಬ್ಬಣವನ್ನು ಕರೆತರುತ್ತಾರೆ. ವಧು, ವರರನ್ನು ಪ್ರತ್ಯೇಕ ಸ್ಥಳದಲ್ಲಿ ಕೂರಿಸಿ ಅರಿಸಿನ ಶಾಸ್ತ್ರ ಮಾಡುತ್ತಾರೆ. ಕ್ಷೌರಿಕನಿಂದ ಕಾಲಿನ ಉಗುರು ತೆಗೆಸುವ ಶಾಸ್ತ್ರದಲ್ಲಿ ಇಬ್ಬರನ್ನೂ ಅಕ್ಕಪಕ್ಕ ಕೂರಿಸುತ್ತಾರೆ. ಸೋದರ ಮಾವ ಸಾಂಪ್ರದಾಯಿಕ ಶಾಸ್ತ್ರಗಳನ್ನು ನೆರವೇರಿಸುತ್ತಾನೆ. ಬಿಳಿವಸ್ತ್ರದ ನೆರಳಲ್ಲಿ ವರನನ್ನು ಕರೆತರುವುದನ್ನು 'ಉಲ್ಲಿಡಿ ಶಾಸ್ತ್ರ' ಎನ್ನಲಾಗುತ್ತದೆ. ಕರೀ ಕಂಬಳಿ ಗದ್ದುಗೆ ಹೂಡಿ ಶಿವಾಸನ ಹಾಕುವ, ಓಕಳಿ ಆಡುವ ಶಾಸ್ತ್ರಗಳೂ ಇವರಲ್ಲಿವೆ. ಇವರು ಬೆಂಗಳೂರು ಹಾಗೂ ಹರಪನಹಳ್ಳಿಯಲ್ಲಿರುವ ವಾಲ್ಮೀಕಿ ಮಠಕ್ಕೆ ನಡೆದುಕೊಳ್ಳುತ್ತಾರೆ. ತಿರುಪತಿ, ಆಂಧ್ರಪ್ರದೇಶದ ಕದಿರಿ ಮೊದಲಾದವು ಇವರ ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ನಾಯಿಂದ:** ಇವರಿಗೆ ಮಂಗಲವಾಳ್ಳು (ತೆಲುಗು ಪದ), ಭಜಂತ್ರಿ, ಸವಿತಾ ಸಮಾಜ ಮೊದಲಾದ ಹೆಸರುಗಳೂ ಇವೆ. ಕ್ಷೌರಿಕ ವೃತ್ತಿಯನ್ನು ಸಾಂಪ್ರದಾಯಿಕ ಕಸುಬು ಮಾಡಿಕೊಂಡ ಇವರು ಈಚೆಗೆ ಕೃಷಿ ಮತ್ತಿತರ ನೌಕರಿಗಳನ್ನು ಅವಲಂಬಿಸಿದ್ದಾರೆ. ಡೋಲು, ನಾಗಸ್ವರ ನುಡಿಸುವುದು ಇವರ ವಿಶೇಷ ವೃತ್ತಿ ಕಲೆಯಾಗಿದೆ. ಇವರಲ್ಲಿ ಅರಿಸಿನ (ಪಸುಪು), ಹೊಂಗೆ (ಕಾನಗ), ಮಲ್ಲೆಲು, ಮಂದಲ (ಮಂದೆ), ಪೂವಿನ, ಕೋಟಾನು ಕೋಟಲು, ಶೆಟ್ಟಿ, ಘಂಟಾ, ಹಸಲೆ ಮೊದಲಾದ ಗೋತ್ರಗಳು, ಮೋಡಿಕಾರ್ಲು, ನಾಮಧಾರಿ ಎಂಬ ಕೆಲವು ಒಳಪಂಗಡಗಳೂ ಇವೆ. ನಾಮಧಾರಿಗಳು ಪೆದ್ದಬಟ್ಟು (ದೊಡ್ಡ ತಾಳಿ) ಹಾಕಿದರೆ, ಮೋಡಿಕಾರ್ಲು ಚಿನ್ನಬಟ್ಟು (ಚಿಕ್ಕ ತಾಳಿ) ಧರಿಸುತ್ತಾರೆ. ಇವರ ಮಾತೃಭಾಷೆ ತೆಲುಗು ಆದರೂ ಕನ್ನಡವನ್ನೂ ಮಾತನಾಡುತ್ತಾರೆ. ಇವರಲ್ಲಿ ದತ್ತು, ಕೂಡಿಕೆ, ತೆರ ಮೊದಲಾದ ಪದ್ಧತಿ ಹಾಗೂ ಜಾತಿ ಪಂಚಾಯಿತಿ ಇವೆ. ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ನಿರ್ದಿಷ್ಟ ದಿನಗಳವರೆಗೆ ಸೂತಕ ಆಚರಿಸುವ, ಮೈಲಿಗೆ ನಿವಾರಿಸಿಕೊಳ್ಳುವ ಶಾಸ್ತ್ರ ಸಂಪ್ರದಾಯಗಳಿವೆ. ಬ್ರಾಹ್ಮಣ

ಪುರೋಹಿತ ಇವರ ವಿವಾಹದ ಕೆಲವು ವಿಧಿಗಳನ್ನು ನಡೆಸಿಕೊಡುತ್ತಾನೆ. ಚಲವಾದಿಯು ತನ್ನ ಗಂಟೆ–ಮುದ್ರೆಗಳೊಂದಿಗೆ ಇವರ ಶಾಸ್ತ್ರಗಳಲ್ಲಿ ಭಾಗವಹಿಸುತ್ತಾನೆ. ಇವರಲ್ಲಿ ಶವವನ್ನು ಹೂಳುವ ಪದ್ಧತಿ ಇದೆ. ೧೨ನೇ ದಿನ ವೈಕುಂಠ ಸಮಾರಾಧನೆ ಮಾಡುತ್ತಾರೆ. ಮಾಂಸಾಹಾರ ಸೇವನೆ ರೂಢಿಯಲ್ಲಿದೆ. ವೆಂಕಟರಮಣ, ಈಶ್ವರ ಮೊದಲಾದುವು ಇವರ ಕೆಲವು ದೇವತೆಗಳು. ತಿರುಪತಿ ಇವರ ಪ್ರಮುಖ ಯಾತ್ರಾಸ್ಥಳವಾಗಿದೆ. ಕದಿರಿ ಪೂರ್ಣಮಿಯಂದು ಕೆಲವರು ದಾಸಯ್ಯನನ್ನು ಕರೆಸಿ ದೇವರು ಪೂಜಿಸುವುದುಂಟನ್ನ

**ನೇಕಾರ:** ಹೆಸರೇ ಸೂಚಿಸುವಂತೆ ಬಟ್ಟೆ ನೇಯುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಈಚೆಗೆ ಇತರ ನೌಕರಿಗಳಲ್ಲಿಯೂ ತೊಡಗಿದ್ದಾರೆ. ನೇಕಾರರಲ್ಲಿ ದೇವಾಂಗ, ಪದ್ಮಸಾಲಿ, ಪಟ್ಟುಸಾಲಿ ಹಾಗೂ ತೊಗಟ ಎಂಬ ಒಳಪಂಗಡಗಳಿವೆ. ಇವುಗಳಲ್ಲಿ ಪರಸ್ಪರ ವಿವಾಹ ಸಂಬಂಧ ಇರುವುದಿಲ್ಲ. ತೊಗಟರನ್ನುಳಿದು ಉಳಿದವರು 'ಜಂಜಿವಾರ' ಧರಿಸುತ್ತಾರೆ. ದೇವಾಂಗದವರಲ್ಲಿ ಕನ್ನಡದವರು ಹಾಗೂ ಆಂಧ್ರ ದೇವಾಂಗದವರು ಎಂಬ ವಿಭಾಗವಿದ್ದು, ಆಂಧ್ರ ದೇವಾಂಗದವರ ಮಾತೃಭಾಷೆ ತೆಲುಗು ಆಗಿದೆ. ಪಟ್ಟು ಎಂದರೆ ರೇಷ್ಮೆ ಎಂಬ ಅರ್ಥವೆಂದೂ, ರೇಷ್ಮೆಯಲ್ಲಿ ಗಜಗಳ ವಿನ್ಯಾಸವನ್ನು ರೂಪಿಸುತ್ತಿದ್ದುದರಿಂದ ತಮಗೆ ಗಜನಾಣ್ಯ ಪಟ್ಟು ಸಾಲಿಗಳೆಂಬ ಹೆಸರೂ ಇದೆ, ಗಂಡಭೇರುಂಡವನ್ನು ತಮ್ಮ ಕುಲಚಿಹ್ನೆಯಾಗಿ ಬಳಸಿಕೊಳ್ಳುತ್ತೇವೆ ಎಂಬುದಾಗಿ ಪಟ್ಟುಸಾಲಿಗಳು ಹೇಳುತ್ತಾರೆ. ನೇಕಾರರಲ್ಲಿ ಜಾತಿ ಪಂಚಾಯಿತಿ, ದತ್ತು ಸಂಪ್ರದಾಯ, ತೆರ ಪದ್ಧತಿ ಇವೆ. ವಿಧವಾ ವಿವಾಹಕ್ಕೆ ಸಾಂಪ್ರದಾಯಿಕ ಮನ್ನಣೆ ಇಲ್ಲ. ಆದರೆ, ವಿವಾಹ ವಿಚ್ಛೇದನಕ್ಕೆ ಅನುಮತಿ ಇದೆ. ಇವರಲ್ಲಿ ಪುರೋಹಿತ ವರ್ಗವಿದ್ದು, ಸಾಂಪ್ರದಾಯಿಕ ವಿಧಿಗಳನ್ನು ಅವರೇ ನಡೆಸಿಕೊಡುತ್ತಾರೆ. ದೇವಾಂಗದವರಲ್ಲಿ ಹುಡುಗಿ ಋತುಮತಿಯಾದಾಗ ಒಂಬತ್ತರಿಂದ ೧೬ ದಿನಗಳವರೆಗೆ ಪ್ರತ್ಯೇಕ ಕೂರಿಸಿ, ಸಂಜೆ ವೇಳೆ ಆಕೆಗೆ ವಿವಿಧ ವೇಷ–ಅಲಂಕಾರ ಮಾಡಿ, ಆರತಿ ಬೆಳಗುವ ರೂಢಿ ಇದೆ. ಮಗು ಹುಟ್ಟಿದ ೧೨ ಅಥವಾ ೧೬ನೇ ದಿನಕ್ಕೆ ಪುಣ್ಯಾಹ ಮಾಡಿಸಿ, ನಾಮಕರಣ ಶಾಸ್ತ್ರ ಮಾಡುತ್ತಾರೆ. ಇವರಲ್ಲಿ ವ್ಯಕ್ತಿ ಸತ್ತ ೧೨ನೇ ದಿನಕ್ಕೆ ಪುಣ್ಯಾಹ, ವೈಕುಂಠಸಮಾರಾಧನೆ ಮಾಡುತ್ತಾರೆ. ಚೌಡೇಶ್ವರಿ ಇವರ ಕುಲದೇವತೆ. ವೆಂಕಟೇಶ್ವರ, ನಂಜುಂಡೇಶ್ವರ ಮೊದಲಾದ ದೇವತೆಗಳನ್ನೂ ಪೂಜಿಸುತ್ತಾರೆ. ಗುಟ್ಟೆ ಚೌಡೇಶ್ವರಿ, ಆವಲ ಬೆಟ್ಟ, ಗೋಪಿನಾಥ ಗುಡ್ಡ, ಬನಶಂಕರಿ ಮೊದಲಾದುವು ಇವರ ಕೆಲವು ಯಾತ್ರಾಸ್ಥಳಗಳಾಗಿವೆ. ಇವರಲ್ಲಿ ಶೈವ ಹಾಗೂ ವೈಷ್ಣವ ಮತಾವಲಂಬಿಗಳಿದ್ದಾರೆ.

**ಬಲಿಜ:** ಬಲಜಿಗ, ಬಣಜಿಗ ಎಂದೂ ಗುರುತಿಸಲಾಗುವ ಬಲಿಜರು ವಿಜಯನಗರ ಪತನಾನಂತರ ಈ ಭಾಗಕ್ಕೆ ವಲಸೆ ಬಂದರೆಂಬ ಅಭಿಪ್ರಾಯವಿದೆ. ಇವರಲ್ಲಿ ಸೆಟ್ಟಿ ಬಲಜಿಗ, ಗಾಜುಲು ಬಲಜಿಗ ಎಂಬ ಪಂಗಡಗಳಿವೆ. ಬಳೆ ಹಾಗೂ ಅರಿಸಿನ–ಕುಂಕುಮಗಳಂತಹ ವಸ್ತುಗಳ ವ್ಯಾಪಾರ ಇವರ ಸಾಂಪ್ರದಾಯಕ ಉದ್ಯೋಗವಾಗಿದ್ದಿತು. ಜಾತಿ ಪಂಚಾಯಿತಿ, ಅವಿಭಕ್ತ ಕುಟುಂಬಗಳು ಇವರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ತಮ್ಮಲ್ಲಿ ವಿಷ್ಣುಪಾಲ್, ಪಸ್ಪುನಾಟಿ, ಶಾರದ, ಮುಚುಕುಂದ, ಮಲ್ಲೆಲು, ಪೊಸುಪು ಮೊದಲಾದ ಗೋತ್ರಗಳಿವೆ ಎಂದು ಈ ಜನಾಂಗದ ವಕ್ತೃಗಳು ತಿಳಿಸಿದ್ದಾರೆ. ಮುಲರನಾಡು, ಪಸುಪನಾಡು, ವೇಲನಾಡು ಮೊದಲಾದವು ಇವರಲ್ಲಿನ ಕೆಲವು ಒಳಪಂಗಡಗಳಾಗಿದ್ದು ಈಚೆಗೆ ಇವುಗಳಲ್ಲಿ ಪರಸ್ಪರ ವಿವಾಹ ಸಂಬಂಧಗಳಾಗುತ್ತಿವೆ ಎನ್ನಲಾಗಿದೆ. ತೆಲುಗು ಮಾತೃಭಾಷೆಯಾದ ಇವರಿಗೆ ಕನ್ನಡದ ಅಭ್ಯಾಸವೂ ಇದೆ. ಇವರಲ್ಲಿ ಮಗು ಹುಟ್ಟಿದ ೧೧ನೇ ದಿನಕ್ಕೆ ಸೂತಕ ಕಳೆದುಕೊಳ್ಳುತ್ತಾರೆ. ಅಂದೇ ಅಥವಾ ಒಂದು ವರ್ಷದೊಳಗಾಗಿ ನಾಮಕರಣ ಶಾಸ್ತ್ರ ಮಾಡುವ ರೂಢಿ ಇದೆ. ಮಗುವಿಗೆ ಐದು ಅಥವಾ ೧೧ನೇ ತಿಂಗಳಲ್ಲಿ ಅಥವಾ ಮೂರು ವರ್ಷಗಳ ಒಳಗೆ ಮನೆದೇವರಲ್ಲಿ ಹೋಗಿ ಕೂದಲು ತೆಗೆಸುವ ಶಾಸ್ತ್ರ ಮಾಡುತ್ತಾರೆ. ಋತುಮತಿಯಾದವಳನ್ನು ಮೂರರಿಂದ ಒಂಭತ್ತು ದಿನಗಳವರೆಗೆ ಪ್ರತ್ಯೇಕ ಕೂರಿಸಿ, ಸಾಂಪ್ರದಾಯಿಕ ವಿಧಿಗಳನ್ನು ನಡೆಸುತ್ತಾರೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಆಚರಣೆಗಳನ್ನು ನೆರವೇರಿಸಿಕೊಡುವ ರೂಢಿ ಇದೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರು ದೀಪಾವಳಿ, ಯುಗಾದಿ ಹಾಗೂ ಸಂಕ್ರಾಂತಿಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಇವರಲ್ಲಿ ಶವವನ್ನು ಹೂಳುವ, ಇಲ್ಲವೇ ಸುಡುವ ಮತ್ತು ಸಾವಿನ ೧೧ನೇ ದಿನ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆ ಮಾಡುವ ಪದ್ಧತಿ ಇದೆ. ಈ ಆಚರಣೆಗಳಂದು ದಾಸಬಣಜಿಗರು ದಾಸಪ್ಪನನ್ನು ಕರೆಸುವ ಪದ್ಧತಿ ಇದೆ. ಕೈವಾರ, ತಿರುಪತಿ ಮೊದಲಾದ ಕ್ಷೇತ್ರಗಳಿಗೆ ಹೋಗಿ ಬರುತ್ತಾರೆ. ಇವರು ಮಾಂಸಾಹಾರಿಗಳು.

**ಬುಡಗ ಜಂಗಮ:** ಬುಡಗ ಎಂಬ ಚರ್ಮ ವಾದ್ಯದೊಂದಿಗೆ ಬುರ್ರ ಕಥಾ ಎಂಬ ಜನಪದ ಕಲೆಯನ್ನು ಪ್ರದರ್ಶಿಸುವ ಜನವರ್ಗವನ್ನು ಬುಡುಗ ಜಂಗಮ ಎಂದು ಗುರುತಿಸಲಾಗುತ್ತಿದೆ. ಇವರು ತೆಲುಗು ಮೂಲದವರು. ರಾಜ್ಯದ ಇತರ ಭಾಗಗಳಲ್ಲಿ

ಇವರಿಗೆ ಮಾಲ ಸನ್ಯಾಸಿ, ಬೈರಾಗಿ ಮತ್ತಿತರ ಹೆಸರುಗಳೂ ಇವೆ ಎನ್ನಲಾಗಿದೆ ಹಾಗೂ ಹಗಲು ವೇಷದಂತಹ ಕಲೆಗಳನ್ನೂ ಪ್ರದರ್ಶಿಸಿ ಜೀವನ ಮಾಡುವುದು ಇವರ ಸಾಂಪ್ರದಾಯಿಕ ವೃತ್ತಿ ಎಂದು ತಿಳಿದುಬಂದಿದೆ. ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಕಾಣಬರುವ ಅಲೆಮಾರಿ ಜನವರ್ಗವಾದ ಇವರು ಈಚೆಗೆ ಅನುಕೂಲವಾದೆಡೆ ಮನೆ ಕಟ್ಟಿ, ನೆಲೆನಿಲ್ಲುವ ಬದಲಾವಣೆಗೆ ಒಳಗಾಗುತ್ತಿದ್ದಾರೆ. ಇವರಲ್ಲಿ ಕುಲ ಪಂಚಾಯ್ತಿಯ ತೀರ್ಮಾನವೇ ಅಂತಿಮ. ಪುರೋಹಿತ ವರ್ಗವಿಲ್ಲ. ವರದಕ್ಷಿಣೆ ಪದ್ಧತಿಯೂ ಇಲ್ಲ. ವಧುದಕ್ಷಿಣೆ ಇದೆ. ೬೭ ಬೆಡಗುಗಳು ಹಾಗೂ ಬುಡಗ ಭಾಷೆ ಎಂಬ ಲಿಪಿ ಇರದ ಭಾಷೆಯ ಮೂಲಕ ತಮ್ಮ ಜನವರ್ಗವನ್ನು ಪರಸ್ಪರ ಗುರುತಿಸಿಕೊಳ್ಳುತ್ತಾರೆ. ಇವರಲ್ಲಿ ಸತ್ತವರನ್ನು ಹೂಳುತ್ತಾರೆ.

**ಬ್ರಾಹ್ಮಣ:** ಮೂಲತಃ ಪೌರೋಹಿತ್ಯ, ದೇವಾಲಯಗಳಲ್ಲಿ ಅರ್ಚನೆ, ಶ್ಯಾನುಭೋಗಿಕೆ, ಅಧ್ಯಯನ–ಅಧ್ಯಾಪನಗಳಂತಹ ಸಾಂಪ್ರದಾಯಿಕ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಬ್ರಾಹ್ಮಣರು ಈಚೆಗೆ ವ್ಯಾಪಾರ, ಹೋಟೆಲ್ ಉದ್ಯಮ, ನೌಕರಿ ಮೊದಲಾದವುಗಳನ್ನೂ ಅವಲಂಬಿಸಿದ್ದಾರೆ. ಇವರಲ್ಲಿ ಅದ್ವೈತ ಸಿದ್ಧಾಂತವನ್ನು ಅನುಸರಿಸುವವರನ್ನು ಸ್ಮಾರ್ತರೆಂದೂ, ವಿಶಿಷ್ಟಾದ್ವೈತ ತತ್ವದವರನ್ನು ಶ್ರೀವೈಷ್ಣವರೆಂದೂ, ದ್ವೈತ ಸಿದ್ಧಾಂತದವರನ್ನು ಮಾಧ್ವ ಅಥವಾ ವೈಷ್ಣವರೆಂದೂ ಕರೆಯಲಾಗುತ್ತಿದೆ. ಅವರಲ್ಲಿ ಹಲವು ಒಳಪಂಗಡಗಳಿವೆ. ಸ್ಮಾರ್ತರಲ್ಲಿ ಮುಲುಕುನಾಡು, ವೆಲುನಾಡು, ಅರವೇಲು, ಅರವತ್ತು ಒಕ್ಕಲು, ಶಿವದ್ವಿಜ, ಬೊಬ್ಬೂರು ಕಮ್ಮೆ, ಸಿರುನಾಡು ಮೊದಲಾದ ಉಪ ಪಂಗಡಗಳಿವೆ. ಮಾಧ್ವರಲ್ಲಿ ಬಡಗನಾಡು, ದೇಶಸ್ಥ, ಆಚಾರ್ಯ ಇತ್ಯಾದಿಗಳಿವೆ. ಕಾಣ್ವ ಸಂಪ್ರದಾಯದ ಯಾಜ್ಞವಲ್ಕ್ಯರಲ್ಲಿ ಕೆಲವರು ಸ್ಮಾರ್ತ, ಕೆಲವರು ವೈಷ್ಣವ ಸಿದ್ಧಾಂತಗಳನ್ನು ಪಾಲಿಸುತ್ತಾರೆ. ಹೆಚ್ಚಾಗಿ ಸೂರ್ಯ ನಾರಾಯಣನ ಪೂಜೆ ಮಾಡುತ್ತಾರೆ. ಶ್ರೀವೈಷ್ಣವರಲ್ಲಿ ಹೆಬ್ಬಾರ್, ಅಯ್ಯಂಗಾರ್, ಮಂಡ್ಯಂ ಅಯ್ಯಂಗಾರ್, ವೈಖಾನಸ, ತೆಂಗಲೆ, ವೆಡಗಲೆ ರೀತಿಯ ಪ್ರಭೇಧಗಳಿವೆ.  ಬ್ರಾಹ್ಮಣರಲ್ಲಿ ವಿಭಕ್ತ ಕುಟುಂಬ ಪದ್ಧತಿ ಹೆಚ್ಚಾಗಿ ಕಂಡುಬರುತ್ತದೆ. ದತ್ತುಸ್ವೀಕಾರ ಪದ್ಧತಿಯೂ ಇದೆ. ಹುಟ್ಟು, ಸಾವುಗಳ ಸಂದರ್ಭದಲ್ಲಿ ಮೈಲಿಗೆ ಆಚರಿಸುತ್ತಾರೆ. ಮಗು ಹುಟ್ಟಿದ ೧೧ನೇ ದಿನಕ್ಕೆ ಶುದ್ಧಿಯಾಗಿ, ನಾಮಕರಣ ಮಾಡುತ್ತಾರೆ. ಋತುಮತಿಯಾದಾಕೆಗೆ ಆರತಿ ಮಾಡುವ ಸಂಪ್ರದಾಯವಿದೆ. ವಿವಾಹಕ್ಕೆ ಮೊದಲು ಹುಡುಗನಿಗೆ ಉಪನಯನ ಮಾಡುತ್ತಾರೆ. ಇವರ ವಿವಾಹ ಪದ್ಧತಿಯಲ್ಲಿ ಸಾಲಂಕೃತ ಕನ್ಯಾದಾನಕ್ಕೆ ಆದ್ಯತೆ ಇದೆ. ವರಪೂಜೆ, ಕಾಶೀಯಾತ್ರೆ, ಸಪ್ತಪದಿ, ಧಾರೆ, ಮಾಂಗಲ್ಯ ಧಾರಣೆ ಮೊದಲಾದ ಆಚರಣೆಗಳು ಪುರೋಹಿತರ ಮಾರ್ಗದರ್ಶನದಲ್ಲಿ ನೆರವೇರುತ್ತವೆ. ಇವರಲ್ಲಿ ತೆರ ಪದ್ಧತಿ ಇಲ್ಲ. ಬ್ರಾಹ್ಮಣರು ಶವಗಳಿಗೆ ವಿಧ್ಯುಕ್ತವಾಗಿ ಅಗ್ನಿಸಂಸ್ಕಾರ ಮಾಡುತ್ತಾರೆ. ಮೃತ ಮಕ್ಕಳನ್ನು ಹೂಳುತ್ತಾರೆ. ವ್ಯಕ್ತಿ ಸತ್ತ ಐದು, ಏಳು, ಒಂಬತ್ತನೇ ದಿನಗಳಲ್ಲಿ ಕರ್ಮವನ್ನು ಆರಂಭಿಸಿ ೧೪ನೇ ದಿನ ವೈಕುಂಠ ಸಮಾರಾಧನೆ ಮಾಡುತ್ತಾರೆ. ತಿರುಪತಿ, ಮುಳಬಾಗಿಲು, ಮಂತ್ರಾಲಯ, ಧರ್ಮಸ್ಥಳ, ಮೇಲುಕೋಟೆ, ಶೃಂಗೇರಿ, ಉಡುಪಿ, ಕಾಶಿ, ಬದರಿ ಮೊದಲಾದವು ಇವರ ಪ್ರಮುಖ ಯಾತ್ರಾಸ್ಥಳಗಳೆನಿಸಿವೆ

**ಬೆಸ್ತ:** ಮೀನುಗಾರಿಕೆ ಜಿಲ್ಲೆಯ ಬೆಸ್ತ (ಗಂಗಾಮತಸ್ಥ)ರ ಸಾಂಪ್ರದಾಯಿಕ ವೃತ್ತಿಯಾಗಿದೆ. ಆದರೂ ಈಚೆಗೆ ಅವರೂ ಕೃಷಿ, ಪಶುಪಾಲನೆ, ನೌಕರಿ ಮೊದಲಾದ ಉದ್ಯೋಗಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಸ್ತರಲ್ಲಿ ಪರಾಶರ ಮೊದಲಾದ ಗೋತ್ರಗಳಿವೆ. ತೆಲುಗು ಮಾತೃಭಾಷೆಯಾದರೂ ಕನ್ನಡವನ್ನೂ ಬಲ್ಲವರಾಗಿದ್ದಾರೆ. ಇವರಲ್ಲಿ ದತ್ತು ಸಂಪ್ರದಾಯವಿದೆ. ಮಗು ಹುಟ್ಟಿದಾಗ ಮೈಲಿಗೆ ಆಚರಿಸಿ, ೧೨ನೇ ದಿನ, ತಪ್ಪಿದಲ್ಲಿ ೪೦ ದಿನಗಳ ಒಳಗೆ ನಾಮಕರಣ ಮಾಡುತ್ತಾರೆ. ಮೈನೆರೆದ ಹುಡುಗಿಯನ್ನು ಒಂಭತ್ತು ದಿನ ಪ್ರತ್ಯೇಕ ಕೂರಿಸಿ ಆರತಿ ಮಾಡುವ, ಕೊನೆಯ ದಿನ ಬಂಧುಗಳಿಗೆ ಔತಣ ಮಾಡುವ ಪದ್ಧತಿ ಇದೆ. ಗಂಡಿನ ಮನೆಯಲ್ಲಿಯೇ ಮದುವೆ ಕಾರ್ಯನಡೆಯುವುದು ಸಂಪ್ರದಾಯವಾದರೂ ಈಚೆಗೆ ಅನುಕೂಲಕ್ಕೆ ತಕ್ಕ ಸ್ಥಳದಲ್ಲಿ ನಡೆಸುತ್ತಾರೆ. ಬ್ರಾಹ್ಮಣ ಪುರೋಹಿತರು ಇವರ ವಿವಾಹ ವಿಧಿಗಳನ್ನು ನಡೆಸಿಕೊಡುತ್ತಾರೆ. ಬೆಸ್ತರು ಹಿಂದೂಗಳ ಎಲ್ಲಾ ದೇವರುಗಳನ್ನು ಪೂಜಿಸಿದರೂ ಗಂಗಾ ದೇವತೆಯನ್ನು ವಿಶೇಷವಾಗಿ ಆರಾಧಿಸುತ್ತಾರೆ. ಮಹಾಲಯ ಅಮಾವಾಸ್ಯೆಯ ದಿನ ಹಿರಿಯರಿಗೆ ಎಡೆ ಇಟ್ಟು ಅಂದು ಗಂಗಾಪೂಜೆಯನ್ನು ನೆರವೇರಿಸುತ್ತಾರೆ. ಇವರಲ್ಲಿ ಶವವನ್ನು ಹೂಳುತ್ತಾರೆ. ಸತ್ತ ೧೦ ದಿನಗಳವರೆಗೆ ಮೈಲಿಗೆ ಆಚರಿಸಿ, ೧೧ನೇ ದಿನ ತಿಥಿ ಕಾರ್ಯಮಾಡುತ್ತಾರೆ. ತಿರುಪತಿ, ಧರ್ಮಸ್ಥಳ ಮೊದಲಾದವು ಇವರ ಕೆಲವು ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ಬೋವಿ:** ಇವರಿಗೆ ಬೋಯಿ ಅಥವಾ ವಡ್ಡ ಎಂಬ ಹೆಸರೂ ಉಂಟು. ಮಣ್ಣು ಅಗೆಯುವುದು, ಕಲ್ಲು ಒಡೆಯುವುದು, ಕೆರೆ, ಬಾವಿ ಕೆಲಸ ಮೊದಲಾದುವನ್ನು ಸಾಂಪ್ರದಾಯಿಕ ವೃತ್ತಿಯಾಗುಳ್ಳ ಇವರು ಈಚೆಗೆ ಕೃಷಿ, ಕೂಲಿ, ನೌಕರಿ ಮೊದಲಾದ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಇವರ ಸಾಂಪ್ರದಾಯಿಕ ವೃತ್ತಿಯನ್ನು ಆಧರಿಸಿ ಇವರಲ್ಲಿ ಮಣ್ಣು ವಡ್ಡರು, ಕಲ್ಲು ವಡ್ಡರು,

ಬಂಡಿ ವಡ್ಡರು, ಉಪ್ಪು ವಡ್ಡರು ಇತ್ಯಾದಿ ಒಳ ಪಂಗಡಗಳಾಗಿವೆ. ಒಟ್ಲು, ಬಂಡಿ ಮೊದಲಾದುವು ಇವರ ಕೆಲವು ಗೋತ್ರಗಳಾಗಿವೆ. ತೆಲುಗು ಇವರ ಮಾತೃಭಾಷೆಯಾದರೂ ಕನ್ನಡವನ್ನೂ ಬಲ್ಲರು. ಇವರಲ್ಲಿ ಜಾತಿ ಪಂಚಾಯಿತಿ, ದತ್ತು, ವಿಚ್ಛೇದನ, ಕೂಡಿಕೆ, ಓಲಿ (ತೆರ) ಸಂಪ್ರದಾಯಗಳೂ ಇವೆ. ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ನಿಗದಿತ ದಿನಗಳವರೆಗೆ ಸೂತಕ ಆಚರಿಸುತ್ತಾರೆ. ಬ್ರಾಹ್ಮಣ ಪುರೋಹಿತರು ಇವರ ವಿವಾಹ ಶಾಸ್ತ್ರಗಳಲ್ಲಿ ಭಾಗವಹಿಸುತ್ತಾರೆ. ಮಾಂಸಾಹಾರಿಗಳಾದ ಇವರು ಮುನೇಶ್ವರ, ಚೌಡೇಶ್ವರಿ ಮೊದಲಾದ ದೇವತೆಗಳನ್ನು ಪೂಜಿಸುವ, ತಿರುಪತಿ, ಧರ್ಮಸ್ಥಳ ಮೊದಲಾದ ತೀರ್ಥಕ್ಷೇತ್ರಗಳಿಗೆ ಹೋಗಿಬರುವ ಪದ್ಧತಿ ಇಟ್ಟುಕೊಂಡಿದ್ದಾರೆ.

ಇವರು, ಉಪ್ಪು ಹಾಗೂ ಧಾನ್ಯಗಳ ವ್ಯಾಪಾರವನ್ನು, ನಂದಿದುರ್ಗದ ಪರಿಸರದಲ್ಲಿ ಬೆಳೆಯುವ 'ಜಲ್' ಎಂಬ ಗಿಡದ ರಸದಿಂದ ಒಂದು ರೀತಿಯ ಅರಗು ತಯಾರಿಸುವ ಕೃಷಿಯನ್ನು (ರೇಷ್ಮೆ ಕೃಷಿಯಂತೆ) ಮಾಡುತ್ತಿದ್ದರೆಂದೂ, ಪೆನುಗೊಂಡೆಯ ವೈಷ್ಣವ ಬ್ರಾಹ್ಮಣ ಗುರುಗಳಿಗೆ ಕಾಣಿಕೆ ನೀಡಿ, ಚಕ್ರ ಮುದ್ರೆಯನ್ನೊತ್ತಿಸಿಕೊಂಡು ಎಲ್ಲರೂ ಉಪದೇಶ ಪಡೆಯುತ್ತಿದ್ದರೆಂದೂ, ದೀಕ್ಷೆ ಪಡೆದವರು ಅತ್ಯಂತ ಮಡಿಯಿಂದ ಪ್ರತ್ಯೇಕ ಅಡುಗೆ ಮಾಡಿಕೊಳ್ಳುತ್ತಿದ್ದರು ಹಾಗೂ ವಿಷ್ಣುವಿನ ಧ್ಯಾನ, ಕೀರ್ತನೆಗಳಲ್ಲಿ ತೊಡಗುತ್ತಿದ್ದರು ಎಂದೂ ಬುಕಾನನ್ ತನ್ನ ಬರಹದಲ್ಲಿ ದಾಖಲಿಸಿದ್ದಾನೆ.

**ಮರಾಠ:** ಇವರು ಮೂಲತಃ ಮಹಾರಾಷ್ಟ್ರ ಭಾಗದಿಂದ ಸೈನಿಕರಾಗಿ ಈ ಜಿಲ್ಲೆಗೆ ಬಂದವರು ಎನ್ನಲಾಗಿದೆ. ಈಗ ಕೃಷಿ, ವ್ಯಾಪಾರ, ನೌಕರಿ ಮೊದಲಾದ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಚವ್ಹಾನ್, ಗಾಯ್ಕವಾಡ್, ನಾಂದೇಕರ್, ಘೋರ್ಪಡೆ, ಪವಾರ್, ಸಿಂಧ್ಯ ಮೊದಲಾದವು ಮರಾಠರ ಕೆಲವು ಬಣಗಳಾಗಿವೆ. ಇವರ ಮಾತೃಭಾಷೆ ಮರಾಠಿಯಾಗಿದ್ದು, ಕನ್ನಡ ಹಾಗೂ ತೆಲುಗನ್ನೂ ಮಾತನಾಡುತ್ತಾರೆ. ಇವರಲ್ಲಿ ಮೊದಲಿಗೆ ಅವಿಭಕ್ತ ಕುಟುಂಬಗಳು ಹೆಚ್ಚಿದ್ದವು. ಇವರಲ್ಲಿ ಜಾತಿಪಂಚಾಯಿತಿ, ದತ್ತು ಪದ್ಧತಿ ಇವೆ. ವಿಧವಾ ವಿವಾಹ ಹಾಗೂ ತೆರ ಪದ್ಧತಿಗಳು ಸಾಂಪ್ರದಾಯಿಕವಾಗಿ ಇಲ್ಲ. ಗಂಡಿನವರೇ ಹೆಣ್ಣನ್ನು ಹುಡುಕುವುದು ಸಂಪ್ರದಾಯ. ಮರಾಠರು ಜನಿವಾರ ಧರಿಸುತ್ತಾರೆ. ಇವರ ಆಚರಣೆಗಳನ್ನು ಬ್ರಾಹ್ಮಣಪುರೋಹಿತರು ನಡೆಸಿಕೊಡುತ್ತಾರೆ. ಇವರಲ್ಲಿ ಶವವನ್ನು ಕೂರಿಸಿ ಹೂಳುವ ಇಲ್ಲವೇ ಅಗ್ನಿ ಸಂಸ್ಕಾರ ಮಾಡುವ ಪದ್ಧತಿಗಳಿವೆ. ಹಿಂದೂಗಳ ಎಲ್ಲಾ ಹಬ್ಬಗಳನ್ನು ಆಚರಿಸುವ ಮರಾಠರು ಈಶ್ವರ, ಭವಾನಿ, ವೆಂಕಟರಮಣ ಮೊದಲಾದ ದೇವರನ್ನು ಪೂಜಿಸುತ್ತಾರೆ. ತಿರುಪತಿ, ಪಂಢರಾಪುರ, ಶಿರಡಿ ಮೊದಲಾದವು ಇವರ ಕೆಲವು ಯಾತ್ರಾಸ್ಥಳಗಳೆನಿಸಿವೆ.

**ಮಾದಿಗ:** ಕೋಲಾರ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಇವರು ಕಂಡುಬರುತ್ತಾರೆ. ಚರ್ಮ ಹದ ಮಾಡುವುದು, ಚಪ್ಪಲಿ ಹೊಲಿಯುವುದು, ಚರ್ಮದ ಸಾಧನಗಳನ್ನು ತಯಾರಿಸುವುದು ಇವರ ಸಾಂಪ್ರದಾಯಿಕ ಕಸುಬಾಗಿದ್ದಿತು. ಇವರು ಹಳ್ಳಿಗಳಲ್ಲಿ ನೀರುಗಂಟಿಯ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಈಚೆಗೆ ಕೃಷಿ, ನೌಕರಿ ಮೊದಲಾದ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಆಧುನಿಕ ಸಂದರ್ಭದಲ್ಲಿ ಹರಿಜನರು ಅಥವಾ ದಲಿತರೆಂದೂ ಗುರುತಿಸಲ್ಪಡುವ ಇವರನ್ನು ಸರ್ಕಾರವು ಪರಿಶಿಷ್ಟ ಜಾತಿಗೆ ಸೇರಿಸಿದೆ. ಸೀಮಲು, ಮಲ್ಲಿಗೆ, ಆವಲು, ಎಮ್ಮೆ, ಮೆಣಸು, ಬೇವು ಮೊದಲಾದುವು ಜಿಲ್ಲೆಯ ಮಾದಿಗರ ಅಥವಾ ಆದಿಜಾಂಬವರಲ್ಲಿನ ಕೆಲ ಗೋತ್ರಗಳು ಹಾಗೂ ಮೊರಬೂವ, ತಣಿಗೆಬೂವ ಮೊದಲಾದುವು ಕೆಲ ಒಳ ಬಣಗಳಾಗಿವೆ. ಮಾದಿಗರಲ್ಲಿ ಜಾತಿ ಪಂಚಾಯಿತಿ, ದತ್ತು ಪದ್ಧತಿ, ಕೂಡಿಕೆ, ವಿವಾಹ ವಿಚ್ಛೇದನ, ತೆರಪದ್ಧತಿಗಳು ರೂಢಿಯಲ್ಲಿವೆ. ಇವರಲ್ಲಿ ಮಗು ಹುಟ್ಟಿದ ಐದನೇ ದಿನಕ್ಕೆ ಸೂತಕ ಕಳೆದುಕೊಳ್ಳುವ, ಒಂದು ತಿಂಗಳ ಒಳಗೆ ನಾಮಕರಣ ಮಾಡುವ ಸಂಪ್ರದಾಯವಿದೆ. ಮೈನೆರೆದ ಹೆಣ್ಣುಮಗಳಿಗೆ ಒಂಭತ್ತರಿಂದ ೧೨ ದಿನಗಳವರೆಗೆ ಒಸಗೆ ಹಾಕುತ್ತಾರೆ. ಮದುವೆಯು ಅನುಕೂಲಕ್ಕೆ ತಕ್ಕ ಸ್ಥಳದಲ್ಲಿ ನಡೆಯುತ್ತದೆ. ಇವರಲ್ಲಿ ಶವವನ್ನು ಹೂಳುತ್ತಾರೆ. ಕದಿರಿ ನರಸಿಂಹ, ಎಲ್ಲಮ್ಮ, ಮಾರಮ್ಮ, ಚೌಡಮ್ಮ, ಗಂಗಮ್ಮ ಮೊದಲಾದುವು ಇವರ ಕೆಲವು ಆರಾಧ್ಯ ದೈವಗಳಾಗಿವೆ.

**ಮಾಷ್ಟೀಕ:** ಪರಿಶಿಷ್ಟರಲ್ಲಿ ಒಂದು ಉಪಜಾತಿಯಾದ ಮಾಷ್ಟೀಕರಲ್ಲಿ ಮಾದಿಗ ಮಾಷ್ಟೀಕ ಮತ್ತು ಹೊಲೆಯ ಮಾಷ್ಟೀಕರೆಂಬ ಒಳ ಪ್ರಭೇದಗಳಿವೆ ಎನ್ನಲಾಗಿದೆ. ಇವರು ತಮ್ಮನ್ನು 'ಮಾದಿಗ, ಹೊಲೆಯ'ರ ಮಕ್ಕಳೆಂದು ಸಾಂಪ್ರದಾಯಿಕವಾಗಿ ಕರೆದುಕೊಳ್ಳುತ್ತಾರೆ. ಅಂತೆಯೇ, ಅವರಿಂದ 'ಹಕ್ಕಿನ ಭಿಕ್ಷೆ' ಬೇಡಿ ಬದುಕುವುದೂ ತಮ್ಮ ಹಕ್ಕು ಎಂದು ಅವರು ಭಾವಿಸಿದ್ದೂ ಉಂಟು. ಆದರೆ,

ಮಧ್ಯಕಾಲೀನ ಯುಗದಲ್ಲಿ ಅವರು ಜಟ್ಟಿ, ಮಾವುತ, ಮೋಡಿವಿದ್ಯೆ ಮೊದಲಾದ ವೃತ್ತಿ ವಿಶೇಷಗಳಲ್ಲಿ ಪರಿಣತಿ ಹೊಂದಿದ್ದರು ಎಂದೂ ತಿಳಿದುಬರುತ್ತದೆ. ಒಂದು ಕಾಲಕ್ಕೆ ಅಲೆಮಾರಿಗಳಾಗಿದ್ದ ಇವರು ಈಚೆಗೆ ಒಂದೆಡೆ ನೆಲೆ ನಿಂತು ಕೃಷಿ, ಕೃಷಿಕೂಲಿ, ನೌಕರಿ ಮೊದಲಾದವುಗಳನ್ನು ಮಾಡುತ್ತಿದ್ದಾರೆ. ತೆಲುಗು, ತಮಿಳನ್ನು ಮಾತನಾಡುವ ಮಾಷ್ಟೀಕರಲ್ಲಿ ಕೆಲವರು ಕನ್ನಡವನ್ನೂ ಬಲ್ಲವರಾಗಿದ್ದಾರೆ. ಅಲ್ಲದೆ, 'ತಾಂಬ್ರಾ' ಎಂಬ ತಮ್ಮದೇ ಲಿಪಿರಹಿತ ರಹಸ್ಯ ಭಾಷೆಯೊಂದನ್ನು ಬಳಸುವುದಾಗಿಯೂ ತಿಳಿದುಬರುತ್ತದೆ.

ಮಾಷ್ಟೀಕರಲ್ಲಿ ಜಾತಿ ಪಂಚಾಯಿತಿ ಪದ್ಧತಿ ಇದೆ. ಜಾತಿ ಗುರುಗಳೇ ಅವರ ಎಲ್ಲಾ ಆಚರಣೆಗಳ ಪೌರೋಹಿತ್ಯ ನಡೆಸಿಕೊಡುತ್ತಾರೆ. ಮಗು ಜನಿಸಿದ ಐದು ದಿನಗಳ ಬಳಿಕ ಪುರುಡು (ಸೂತಕ) ಕಳೆದುಕೊಳ್ಳುತ್ತಾರೆ. ಮೈನೆರೆದಾಕೆಯನ್ನು ಮೂರು ದಿನ ಮನೆಯ ಹೊಸ್ತಿಲ ಬದಿ ಇರಿಸುತ್ತಾರೆ. ಆದರೆ ಹಸಿರು ಗುಡಿಸಲು ಹಾಕುವ ಪದ್ಧತಿ ಇಲ್ಲ. ಮದುವೆಯಲ್ಲಿ ಅರಿವೇಣಿಗಳನ್ನು ಪೂಜಿಸುವ ಸಂಪ್ರದಾಯವಿದೆ. ಇವರಲ್ಲಿ 'ಓಲಿ' ಪದ್ಧತಿ ಇದೆ. ನಿಧನವಾದ ವ್ಯಕ್ತಿ ವಿವಾಹಿತವಾಗಿದ್ದರೆ, ಶವವನ್ನು ಗುಡಿಪಾಡು (ಸಣ್ಣ ಮಂಟಪ)ದಲ್ಲಿ, ಅವಿವಾಹಿತರಾಗಿದ್ದರೆ ಬಾಳೆಎಲೆಗಳಲ್ಲಿ ಅಥವಾ ಒಂಟಿ ಬಡಿಗೆಯಲ್ಲಿ ಸ್ಮಶಾನಕ್ಕೆ ಸಾಗಿಸುತ್ತಾರೆ. ಶವಯಾತ್ರೆಯಲ್ಲಿ 'ಯಾಲಾಲ ಪಾಟಲು' ಎಂಬ ಪದಗಳನ್ನು ಹಾಡುವುದು ಪದ್ಧತಿಯಾಗಿದೆ.

**ಮೇದ:** ಕೊರಮರ ಹಾಗೆ ಮೇದರೂ, ಬಿದಿರು ಹೆಣಿಗೆ ಕೆಲಸವನ್ನು ಸಾಂಪ್ರದಾಯಿಕವಾಗಿ ಮಾಡುವವರು. ಆದರೂ ಕೊರಮರು ಪರಿಶಿಷ್ಟ ಜಾತಿಗೆ ಸೇರಿದ್ದರೆ, ಮೇದರು ಪರಿಶಿಷ್ಟ ವರ್ಗಕ್ಕೆ ಸೇರಿದ್ದಾರೆ. ಮೇದರಲ್ಲಿ ಕಂಚಮ, ತಮಿನೇನಿ, ಕನಿಕರುಪು, ಸೀರ್ಪು, ಪೊಲೆಪಲ್ಲಿ, ಮಂಡಿಮಿ, ತಾಳೆ, ಊಟಕೋಟ ಮೊದಲಾದ ಒಳಪಂಗಡಗಳಿವೆ. ಪುಲಿ, ನಾಗಚಲ, ಯಲಮ ಮೊದಲಾದ ಗೋತ್ರಗಳಿವೆ ಹಾಗೂ ಸಗೋತ್ರ ವಿವಾಹ ನಿಷಿದ್ಧವೆನ್ನುತ್ತಾರೆ. ಇವರಲ್ಲಿ ವಿವಾಹಾದಿ ಕಾರ್ಯಗಳು ಕುಲದ ಯಜಮಾನರ ನೇತೃತ್ವದಲ್ಲಿ ನಡೆಯುತ್ತಿದ್ದವು. ಸೂತಕ ಕಳೆವ ಶಾಸ್ತ್ರಕ್ಕೆ ಹಿಂದೆ ದಾಸಪ್ಪನನ್ನು ಕರೆಸುತ್ತಿದ್ದರು. ಈಗ ಬ್ರಾಹ್ಮಣ ಪುರೋಹಿತರು ಬರುವುದಾಗಿ ಹೇಳುತ್ತಾರೆ. ಇವರ ಕುಲಗುರು ಚಿತ್ರದುರ್ಗದಲ್ಲಿ ಇದ್ದಾರೆಂದು ತಿಳಿದುಬಂದಿದೆ.

ಮೇದರಲ್ಲಿ ಮಗು ಜನಿಸಿದ ೧೧ ದಿನಕ್ಕೆ ಸೂತಕ ಕಳೆದುಕೊಳ್ಳುತ್ತಾರೆ. ಹುಡುಗಿ ಮೈನೆರೆದಾಗ ಸೋದರಮಾವ ಹಸಿರು ಗುಡಿಸಲು ಹಾಕುತ್ತಾನೆ. ೧೬ ದಿನಕ್ಕೆ ಒಸಗೆ ಹಾಕಿ, ಸೂತಕ ಕಳೆದುಕೊಳ್ಳುತ್ತಾರೆ. ಅಷ್ಟೂ ದಿನ ಅವರ ನೆಂಟರಿಷ್ಟರು ವಿಶೇಷ ಅಡುಗೆ ಮಾಡಿಕೊಂಡು ಬಂದು ಆಕೆಗೆ ಉಣಬಡಿಸುತ್ತಾರೆ. ಮನೆಯಿಂದ ತಂದ ಎಣ್ಣೆಯನ್ನು ಆಕೆಯ ತಲೆಗೆ ಹಚ್ಚಿ, ತಲೆ ಬಾಚಿ, ಹೂ ಮುಡಿಸುವ ವಿಶೇಷ ನಡವಳಿಕೆ ಇವರಲ್ಲಿದೆ. ಇವರ ಮದುವೆಯಲ್ಲಿ ಮಡಿವಾಳಿಯು ಚಪ್ಪರದ ಪ್ರವೇಶಭಾಗದಲ್ಲಿ ಅರಿಸಿನ ಬಣ್ಣದಲ್ಲಿ ಅದ್ದಿದ ಬಟ್ಟೆಯ 'ತೋರಣ'ಕಟ್ಟುವ ಪದ್ಧತಿ ಇದೆ; ಕ್ಷೌರಿಕನು ವಧೂ–ವರರ ಉಗುರುತೆಗೆವ ಶಾಸ್ತ್ರ ಮಾಡುತ್ತಾನೆ. ಅರಿವೇಣಿ ಶಾಸ್ತ್ರವೂ ಇದೆ. ಆದರೆ, ಭತ್ತಕುಟ್ಟುವ ಶಾಸ್ತ್ರ ತಮ್ಮಲ್ಲಿ ಇಲ್ಲ ಎನ್ನುತ್ತಾರೆ. ಧಾರೆ ಆದ ಮೇಲೆ ವಧೂ–ವರರು ಕುಲದ ಯಜಮಾನರಿಗೆ ನಿಗದಿತ ಶುಲ್ಕ ನೀಡುವ, ಅದಕ್ಕೆ ಪ್ರತಿಯಾಗಿ ಕುಲದ ಯಜಮಾನರ ಪರವಾಗಿ ಅವರಿಗೆ ಒಸಗೆ ಹಾಕುವ ಪದ್ಧತಿಯೂ ಇದೆ. ಶವಸಂಸ್ಕಾರದಲ್ಲಿ ಬಿದಿರಿನ ಚಟ್ಟಕಟ್ಟುತ್ತಾರೆ. ಅವಿವಾಹಿತನ ಶವವನ್ನು ಒಂಟಿಬಡಿಗೆಯಲ್ಲಿ ಇಬ್ಬರೇ ಎತ್ತಿಕೊಂಡುಹೋಗುವುದು ಈ ಕಾಲಕ್ಕೆ ಮುಜುಗರ ಉಂಟುಮಾಡುವುದರಿಂದ, ಶವವನ್ನು ಎಕ್ಕದ ಗಿಡದೊಂದಿಗೆ ವಿವಾಹ ಮಾಡಿ, ಬಳಿಕ ಆ ಶವವನ್ನು ನಾಲ್ವರು ಹೊತ್ತೊಯ್ಯುವ ಪದ್ಧತಿ ಇಟ್ಟುಕೊಂಡಿದ್ದಾರೆ. ಈ ನಾಲ್ವರಲ್ಲಿ ಇಬ್ಬರು ಸೋದರ ಸಂಬಂಧಿಗಳಾದರೆ ಇನ್ನಿಬ್ಬರು ಸೋದರ ಮಾವನ ವರಸೆಯವರಾಗಬೇಕು. ಎಕ್ಕದ ಕೊಂಬೆಯನ್ನು ಸೋದರಮಾವನ ವರಸೆಯವನೇ ತಂದು, ಶವದ ಪಕ್ಕ ಇರಿಸುತ್ತಾನೆ. ಮೃತನ ಸೋದರ ಮೃತನ ಪರವಾಗಿ ಅರಿಸಿನದ ಕೊನೆಯನ್ನು ಎಕ್ಕದ ಕೊಂಬೆಗೆ ಕಟ್ಟಿದರೆ ವಿವಾಹವಾಯಿತು ಎಂದು ಅವರ ನಂಬಿಕೆಯಾಗಿದೆ. ಅವಿವಾಹಿತ ಕನ್ಯೆ ಸತ್ತರೆ ಇಂಥಾ ಶಾಸ್ತ್ರ ಮಾಡುವುದಿಲ್ಲ ಎಂದೂ ಹೇಳುತ್ತಾರೆ.

ಮೇದರು ಮಲಾಲಮ್ಮನನ್ನು ತಮ್ಮ ಕುಲದೇವತೆ ಎಂದು ಪರಿಗಣಿಸಿದ್ದು, ವರ್ಷಕ್ಕೊಮ್ಮೆ ಜಾತಿಬಂಧುಗಳೆಲ್ಲಾ ಸೇರಿ ಈ ದೇವರ ಹಬ್ಬ ಮಾಡುತ್ತಾರೆ. ಆಗ ಊರಾಚೆ ತೋಪಿನಲ್ಲಿ ಹಸಿರುಚಪ್ಪರ ಹಾಕಿ ಈ ದೇವತೆಗೆ ವಿಶೇಷ ಬಲಿ ಅರ್ಪಿಸಿ ಪೂಜೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಪುಲಿಗೋತ್ರದವನಿಗೆ ಹುಲಿ ರೀತಿ ವೇಷಹಾಕುತ್ತಾರೆ. ಆತ ಖಡ್ಗ ಹಿಡಿದು ತನ್ನವರೊಂದಿಗೆ ಸೇರಿ ಒಂದು ತಂಡವಾಗುತ್ತಾನೆ. ಪೂಜಾರಿಕಡೆಯವರು ಕೆಲವರು ಸೇರಿ ಇನ್ನೊಂದು ತಂಡವಾಗುತ್ತಾರೆ. ಇವರು ಪರಸ್ಪರ "ಕೋಬಲಿ"

– "ಟೇಬಲಿ" ಎಂದು ಸ್ಪರ್ಧಾತ್ಮಕವಾಗಿ ಕೂಗುವುದು, ಪೂಜಾರಿ ಕೈಲಿರುವ "ಪುಲಿಮುದ್ದ" (ಅನ್ನ)ವನ್ನು ಹುಲಿವೇಷದವ ತಿನ್ನಲು ನುಗ್ಗುವುದು, ಆಗ ಪೂಜಾರಿ ತಂಡದವನು ಪಾತ್ರೆಯಲ್ಲಿ ಕುದಿಯುತ್ತಿರುವ ಮಾಂಸವಿಶೇಷವನ್ನು ಕೈಯಿಂದ ಎತ್ತಿ ಈ ಹುಲಿವೇಷದವನತ್ತ ಎಸೆಯುವುದು ಇತ್ಯಾದಿ ಆಚರಣಾತ್ಮಕವಾಗಿ ನಡೆಯುತ್ತದೆ ಎಂದು ಹೇಳುತ್ತಾರೆ.

**ಮೊದಲಿಯಾರ್:** ಇವರು ಮೂಲತಃ ತಮಿಳುನಾಡಿನವರು. ಸುಮಾರು ೨೦೦–೩೦೦ ವರ್ಷಗಳಿಗೂ ಹಿಂದೆಯೇ ಆ ಭಾಗದಿಂದ ವಲಸೆ ಬಂದು ಈ ಜಿಲ್ಲೆಯಲ್ಲಿ ನೆಲೆಗೊಂಡರೆಂದು ತಿಳಿದುಬಂದಿದೆ. ಮೊದಲಿಗೆ ಜಮೀನ್ದಾರರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಇವರು ಕ್ರಮೇಣ ವ್ಯಾಪಾರವನ್ನು ತಮ್ಮ ಸಾಂಪ್ರದಾಯಕ ವೃತ್ತಿಯಾಗಿ ಮಾಡಿಕೊಂಡರೆನ್ನಲಾಗಿದೆ. ಈಚೆಗೆ ವಿವಿಧ ಉದ್ಯೋಗಗಳಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೊದಲಿಯಾರರಲ್ಲಿ ಅಗಮುಡಿ, ವೇಳಾಲರ್ ಹಾಗೂ ಪಿಳ್ಳೆ ಮೊದಲಿಯಾರ್ ಮೊದಲಾದ ಉಪಪಂಗಡಗಳಿವೆ. ಶಿವ, ಕಾಳಿಂಗರಾಯ, ವಿಷ್ಣು ಮೊದಲಾದವು ಇವರ ಕೆಲವು ಗೋತ್ರಗಳಾಗಿವೆ. ಮಗು ಜನಿಸಿದ ೧೧ನೇ ದಿನ ಸ್ನಾನ ಶುದ್ಧಿ ಮಾಡಿ, ಮೂರು ತಿಂಗಳ ಒಳಗಾಗಿ ನಾಮಕರಣ ಮಾಡುವ ಸಂಪ್ರದಾಯ ಮೊದಲಿಯಾರರಲ್ಲಿದೆ. ಋತುಮತಿಯಾದ ಹುಡುಗಿಗೆ ೧೩ ದಿನಗಳವರೆಗೆ ಆರತಿ, ಒಸಗೆ ಮಾಡಿ, ಕೊನೆಯ ದಿನ ಬಂಧುಬಳಗಕ್ಕೆ ಔತಣ ಮಾಡುತ್ತಾರೆ. ಹೆಣ್ಣಿನ ಮನೆಯಲ್ಲಿಯೇ ವಿವಾಹ ನಡೆಯುವುದು ಹಿಂದಿನ ಸಾಮಾನ್ಯ ನಡವಳಿಕೆಯಾಗಿದ್ದಿತು. ವೈದಿಕ ಪುರೋಹಿತರು ವಿವಾಹ ಕಾರ್ಯ ನಡೆಸಿಕೊಡುತ್ತಾರೆ. ಇವರಲ್ಲಿ ದತ್ತು ಸಂಪ್ರದಾಯವಿದೆ. ಆದರೆ, ಕೂಡಿಕೆ, ವಿಚ್ಛೇದನಗಳು ಸಾಂಪ್ರದಾಯಿಕ ಮನ್ನಣೆ ಪಡೆದಿರಲಿಲ್ಲ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವ ಇವರಿಗೆ ದೀಪಾವಳಿ ಹೆಚ್ಚಿನ ವಿಶೇಷವೆನಿಸಿದೆ. ಮೊದಲಿಯಾರರಲ್ಲಿ ಶವವನ್ನು ಸಾಮಾನ್ಯವಾಗಿ ಸುಡಲಾಗುತ್ತದೆ. ೧೧ ದಿನದ ಮೈಲಿಗೆ ಆಚರಿಸುತ್ತಾರೆ. ತಮಿಳು ಮಾತೃಭಾಷೆಯವರಾದ ಇವರು ಕನ್ನಡವನ್ನೂ ಬಲ್ಲರು. ಮಾಂಸಾಹಾರ ಸೇವನೆಯೂ ಉಂಟು. ಮುರುಗ, ಶಿವ, ಕಾಮಾಕ್ಷಿ ಮೊದಲಾದ ಶಕ್ತಿ ದೇವತೆಗಳನ್ನು ಪೂಜಿಸುವ ಇವರಿಗೆ ತಿಂತಿಣಿ ವಿಶೇಷವಾದ ಯಾತ್ರಾಸ್ಥಳವೆನಿಸಿದೆ.

**ಮೊಂಡ:** ಮುಂಡಲ, ಮೊಂಡಿಗ, ಬಂಡ ಮೊದಲಾದ ಹೆಸರುಗಳಿಂದ ಗುರುತಿಸಲಾಗುವ ಮೊಂಡರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಜಿಲ್ಲೆಯ ಚಿಂತಾಮಣಿ, ಶಿಡ್ಲಘಟ್ಟ, ಬಂಗಾರಪೇಟೆ, ಬಾಗೇಪಲ್ಲಿ, ಮುಳಬಾಗಿಲು, ಶ್ರೀನಿವಾಸಪುರ ತಾಲೂಕುಗಳಲ್ಲಿ ವಿಶೇಷವಾಗಿ ಕಂಡುಬರುವ ಇವರು ಮೂಲತಃ ಆಂಧ್ರಭಾಗದಿಂದ ಬಂದವರೆನ್ನಲಾಗಿದೆ. ತೆಲುಗು ಇವರ ಮಾತೃಭಾಷೆಯಾದರೂ ಕನ್ನಡವನ್ನೂ ಬಲ್ಲವರಾಗಿದ್ದಾರೆ. ಇವರು ಪೂರ್ವದಲ್ಲಿ ಭಿಕ್ಷೆ ಬೇಡಿ ಜೀವಿಸುವ ಅಲೆಮಾರಿಗಳಾಗಿದ್ದರೂ ಈಚೆಗೆ ಒಂದೆಡೆ ನೆಲೆನಿಂತು ಕೃಷಿ, ವ್ಯಾಪಾರ, ಕೂಲಿ, ನೌಕರಿ ಇತ್ಯಾದಿಗಳಲ್ಲಿ ತೊಡಗಿದ್ದಾರೆ. ಹಿಂದೆ ಇವರಲ್ಲಿ ಹೆಚ್ಚಾಗಿದ್ದ ಅವಿಭಕ್ತ ಕುಟುಂಬಗಳು ಈಗ ವಿಭಕ್ತ ಕುಟುಂಬಗಳಾಗುತ್ತಿವೆ. ಇವರಲ್ಲಿ ಜಾತಿ ಆಡಳಿತ ಪದ್ಧತಿ ಇದ್ದು ಕುಲಾಚಾರಗಳು ಕುಲಗುರುವಿನ ನಿರ್ದೇಶನದಂತೆ ನಡೆಯುತ್ತವೆ. ಇವರಿಗೆ ಸಹಾಯಕರಾಗಿ ಬುದವಂತ, ಗುರಿಕಾರರಿರುತ್ತಾರೆ. ಇವರು ಎಲ್ಲಮ್ಮ ಮೊದಲಾದ ದೇವತೆಗಳಿಗೆ ನಡೆದುಕೊಳ್ಳುತ್ತಾರೆ.

**ಯಾನಾದಿಗ:** ಯಾನಾದಿ ಎಂಬುದಕ್ಕೆ ತೆಲುಗಿನಲ್ಲಿ ಸಮುದ್ರದ ದಡ ಎಂಬರ್ಥವಿದೆ. ಯಾನಾದಿಗರೆಂದರೆ, ಸಮುದ್ರದ ನಡುಗಡ್ಡೆಗಳಿಂದ ಹೊರಗೆ ಬಂದವರೆಂಬ ಅರ್ಥವಾಗಬಹುದು. ಹಾಗೆಯೇ ಯಾನಮು ಅಂದರೆ ಹಾರೆಯನ್ನು ಹೆಗಲ ಮೇಲಿಟ್ಟುಕೊಂಡು ತಿರುಗುತ್ತಾ ಹಾವು, ಇಲಿ ಮೊದಲಾದವುಗಳ ಬೇಟೆ ಯಾಡುತ್ತಿದ್ದುದರಿಂದಲೂ ಇವರಿಗೆ ಈ ಹೆಸರು ಬಂದಿರಬಹುದೆನ್ನಲಾಗಿದೆ. ಒಟ್ಟಿನಲ್ಲಿ ಯಾನಾದಿಗರು ಗುಡ್ಡಗಾಡಿನಲ್ಲಿ ಬೇಟೆ ಆಡಿ ಜೀವಿಸುತ್ತಿದ್ದ ಬುಡಕಟ್ಟು ಜನವರ್ಗ. ಆಂಧ್ರ ಭಾಗದಿಂದ ಅಲೆಮಾರಿಗಳಾಗಿ ಅರ್ಧಶತಮಾನದ ಹಿಂದೆ ಕರ್ನಾಟಕಕ್ಕೆ ಬಂದವರಾಗಿದ್ದಾರೆ. ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ, ಮುಳಬಾಗಿಲು, ಗೌರಿಬಿದನೂರು ಮೊದಲಾದ ತಾಲೂಕುಗಳಲ್ಲಿ ಅಲ್ಪಸಂಖ್ಯೆಯಲ್ಲಿ ಕಂಡುಬರುತ್ತಾರೆ. ತಮಿಳು, ತೆಲುಗು ಮಿಶ್ರಿತ ಭಾಷೆಯನ್ನಾಡುವ ಇವರು ಸ್ಥಳೀಯ ಪ್ರಭಾವದಿಂದ ಕನ್ನಡವನ್ನು ಕಲಿತಿದ್ದಾರೆ. ಯಾನಾದಿಗರಲ್ಲಿ ಮಂಚಿಯಾನಾದಿ, ಚಲಯಾನಾದಿ, ಅಡವಿಯಾನಾದಿ ಎಂಬ ಒಳಗುಂಪುಗಳಿವೆ. ಅವರಲ್ಲಿ ಸಾಟಮ್ಮ, ಧರ್ಮರಾಜು, ಪೆರುಮಾಲ್, ನರಸಿಂಹಸ್ವಾಮಿ ಮೊದಲಾದ ಗೋತ್ರಗಳಿವೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಗುಂಪಿನ ಮುಖ್ಯಸ್ಥನು ಸಾಮಾನ್ಯವಾಗಿ ಪೂಜಾರಿಯೂ, ವೈದ್ಯ ಬಲ್ಲವನೂ ಆಗಿರುತ್ತಾನೆ. ಇವರಲ್ಲಿ ಸಗೋತ್ರ ವಿವಾಹ ನಿಷಿದ್ಧವೆನಿಸುತ್ತದೆ. ಇವರ ವಿವಾಹ ಆಚರಣೆಗಳು ಅತಿ ಸರಳವಾಗಿರುತ್ತವೆ. ಗುಂಪಿನ ಮುಖ್ಯಸ್ಥನ ಅನುಮತಿಯೊಂದಿಗೆ ವಿಚ್ಛೇದನ, ವಿಧವಾ ವಿವಾಹ ಆಗಬಹುದು.

**ರಾಜು ಕ್ಷತ್ರಿಯ:** ಕಾಶ್ಯಪ, ಭಾರದ್ವಾಜ ಮೊದಲಾದ ಗೋತ್ರಗಳಿರುವ ಈ ಜನಾಂಗದವರು ವ್ಯವಸಾಯ, ಶಿಕ್ಷಣ ಮೊದಲಾದ ನೌಕರಿಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಪುರೋಹಿತ ವರ್ಗವಿದ್ದು, ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಅವರೇ ನೆರವೇರಿಸಿಕೊಡುತ್ತಾರೆ. ಹುಟ್ಟು, ಸಾವು ಮೊದಲಾದವುಗಳಲ್ಲಿ ಮೈಲಿಗೆ ಆಚರಣೆ, ಶುದ್ಧಿ ಆಚರಣೆಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ. ವಿವಾಹವು ಹೆಣ್ಣಿನ ಮನೆಯಲ್ಲಿಯೇ ಆಗುವುದು ಸಂಪ್ರದಾಯ. ಶವವನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ. ಇವರಲ್ಲಿ ಉಪನಯನ ಮಾಡಿಸುವ ಸಂಪ್ರದಾಯವಿದೆ. ಕೂಡಿಕೆ, ವಿಚ್ಛೇದನ, ತೆರ ಪದ್ಧತಿಗಳು ಸಾಂಪ್ರದಾಯಿಕವಾಗಿ ಆಚರಣೆಯಲ್ಲಿ ಇಲ್ಲ. ಕೆಲವರು ಮಾಂಸಾಹಾರ ಸೇವನೆ ಮಾಡುತ್ತಾರೆ. ವೆಂಕಟರಮಣ, ಲಕ್ಷ್ಮಿ, ಮಂಜುನಾಥ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ತಿರುಪತಿ ಹಾಗೂ ಧರ್ಮಸ್ಥಳ ಇವರ ಕೆಲವು ಪ್ರಮುಖ ಯಾತ್ರಾಸ್ಥಳಗಳೆನಿಸಿವೆ. ಬೆಂಗಳೂರಿನ ವಯ್ಯಾಲಿಕಾವಲಿನಲ್ಲಿ ಈ ಸಮಾಜದ ಸಂಘವಿದೆ.

**ರೆಡ್ಡಿ:** ಇವರಲ್ಲಿ ಕೊಡತರೆಡ್ಡಿ, ಪಾಕನಾಟಿ ರೆಡ್ಡಿ, ಕಮ್ಮರೆಡ್ಡಿ, ಪೆನಕಂಟಿ ರೆಡ್ಡಿ ಮೊದಲಾದ ಪಂಗಡಗಳಿವೆ. ಈಚೆಗೆ ಇವರಲ್ಲಿ ಪರಸ್ಪರ ವಿವಾಹ ಸಂಬಂಧಗಳಾಗುತ್ತಿವೆ. ಇವರು ಮೂಲತಃ ಆಂಧ್ರ ಭಾಗದವರಾಗಿದ್ದು, ಈ ಜಿಲ್ಲೆಗೆ ವಲಸೆ ಬಂದವರು ಎನ್ನಲಾಗಿದೆ. ಇವರ ಮಾತೃಭಾಷೆ ತೆಲುಗು. ಒಕ್ಕಲುತನ ಇವರ ಸಾಂಪ್ರದಾಯಿಕ ಉದ್ಯೋಗ. ಈಚೆಗೆ ಇತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರ ಜಾತಿ ಪಂಚಾಯಿತಿಯ ಮುಖಂಡನನ್ನು ಗೌಡ ಎಂದು ಕರೆಯುತ್ತಾರೆ. ಅರಳಿಮರ, ರಾಗಿ, ಹೊಂಗೆ ಮೊದಲಾದುವು ಇವರಲ್ಲಿನ ಕೆಲ ಗೋತ್ರಗಳಾಗಿದ್ದು, ಸಗೋತ್ರ ವಿವಾಹ ನಿಷಿದ್ಧವಾಗಿದೆ. ರೆಡ್ಡಿಗಳಲ್ಲಿ ದತ್ತು ಪದ್ಧತಿ ಇದೆ. ಆದರೆ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಸಾಂಪ್ರದಾಯಿಕವಲ್ಲ. ಹುಟ್ಟು, ಸಾವು ಹಾಗೂ ಮೈನೆರೆದ ಸಂದರ್ಭಗಳಲ್ಲಿ ನಿರ್ದಿಷ್ಟ ದಿನಗಳವರೆಗೆ ಸೂತಕ ಆಚರಿಸುವ, ಕೊನೆಯಲ್ಲಿ ಶುದ್ಧಿಕಾರ್ಯ ನಡೆಸುವ ಸಂಪ್ರದಾಯಗಳು ಇವರಲ್ಲಿಯೂ ಇವೆ. ವಿವಾಹವು ವರನ ಮನೆಯಲ್ಲಿ ಆಗುತ್ತಿದ್ದುದು ಹಿಂದಿನ ನಡವಳಿಕೆಯಾಗಿದ್ದಿತು. ಬ್ರಾಹ್ಮಣ ಪುರೋಹಿತರು ಇವರ ಕೆಲವು ಶಾಸ್ತ್ರವಿಧಿಗಳನ್ನು ನಡೆಸಿಕೊಡುತ್ತಾರೆ. ತಿರುಪತಿ, ಧರ್ಮಸ್ಥಳ ಮೊದಲಾದುವು ಇವರ ಕೆಲವು ಯಾತ್ರಾಸ್ಥಳಗಳಾಗಿವೆ.

**ವಿಶ್ವಕರ್ಮ:** ಸಾಮಾನ್ಯವಾಗಿ ವಾಜರು ಅಥವಾ ಆಚಾರಿಗಳೆಂದು ಕರೆಯಲ್ಪಡುವ ವಿಶ್ವಕರ್ಮರಲ್ಲಿ ಸಾಂಪ್ರದಾಯಿಕವಾಗಿ ಚಿನ್ನ-ಬೆಳ್ಳಿ ಆಭರಣಗಳನ್ನು ತಯಾರಿಸುವ ಅಕ್ಕಸಾಲಿಗಳು, ರೈತರಿಗೆ ಉಪಯುಕ್ತವಾದ ಕಬ್ಬಿಣದ ಸಾಮಗ್ರಿಗಳನ್ನು ಸಿದ್ಧಪಡಿಸುವ ಕಮ್ಮಾರರು, ಮರದ ಕೆಲಸ ಮಾಡುವ ಬಡಗಿಗಳು, ಶಿಲೆ ಅಥವಾ ಲೋಹದಿಂದ ವಿಗ್ರಹ ರಚಿಸುವ ಶಿಲ್ಪಿಗಳು-ಹೀಗೆ ಬೇರೆಬೇರೆ ವರ್ಗದವರಿದ್ದಾರೆ. ಇವರೆಲ್ಲರೂ ಜನಿವಾರ ಧಾರಣೆ ಮಾಡುವವರಾದರೂ ಪರಸ್ಪರ ವಿವಾಹ ಸಂಬಂಧ ಮಾಡುವುದಿಲ್ಲ. ಇವರೆಲ್ಲರೂ ಕನ್ನಡ ಭಾಷಿಕರು. ಕೆಲವರು ತೆಲುಗು ಅಥವಾ ತಮಿಳು ಮಾತನಾಡುವುದೂ ಉಂಟು. ಇವರಲ್ಲಿ ಪುರೋಹಿತ ವರ್ಗವಿದೆ. ಹುಟ್ಟು, ಸಾವು ಮತ್ತಿತರ ಸಂದರ್ಭಗಳಲ್ಲಿ ನಿಯಮದಂತೆ ನಿರ್ದಿಷ್ಟ ಕಾಲ ಸೂತಕ ಆಚರಿಸುವ, ಕೊನೆಯಲ್ಲಿ ಶುದ್ಧಿಕ್ರಿಯೆ ನಡೆಸುವ ಸಂಪ್ರದಾಯಗಳಿವೆ. ಮೈನೆರೆದ ಹುಡುಗಿಯನ್ನು ಅವರವರ ರೂಢಿಗನುಗುಣವಾಗಿ ಒಂದು ವಾರದಿಂದ ೧೦ ದಿನಗಳವರೆಗೆ ಪ್ರತ್ಯೇಕ ಕುಳ್ಳಿರಿಸಿ ಆರತಿ ಬೆಳಗಿ ಕೊನೆಯ ದಿನದಂದು ಬಂಧುಮಿತ್ರರಿಗೆ ಔತಣ ಮಾಡುತ್ತಾರೆ. ವಿಶ್ವಕರ್ಮರಲ್ಲಿ ವಿವಾಹವಿಚ್ಛೇದನ, ಕೂಡಿಕೆ, ತೆರಪದ್ಧತಿಗಳು ಸಾಂಪ್ರಾದಾಯಕವಾಗಿ ಇರುವುದಿಲ್ಲ. ಇವರಲ್ಲಿ ಶವವನ್ನು ಹೂಳುವ ಪದ್ಧತಿ ಇದೆ. ಶಿವಾಚಾರಿಗಳು ಸಸ್ಯಾಹಾರಿಗಳೆಂದೂ, ಕುಲಾಚಾರರು ಮಾಂಸಾಹಾರ ಸೇವಿಸುವುದು ಉಂಟೆಂದೂ ತಿಳಿದುಬಂದಿದೆ. ಪ್ರತೀ ಅಮಾವಾಸ್ಯೆ ದಿನ ತಮ್ಮ ಆಯುಧಗಳನ್ನು ಪೂಜಿಸುವ, ನವರಾತ್ರಿಯಲ್ಲಿ ಹಾಗೂ ವಿವಾಹ ಸಂದರ್ಭದಲ್ಲಿ ಕುಲದೇವತೆ ಕಾಳಿಕಾ ದೇವಿಯನ್ನು ವಿಶೇಷವಾಗಿ ಪೂಜಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ಕಡಪ ಜಿಲ್ಲೆಯ ವೀರಬ್ರಹ್ಮೇಂದ್ರ ಸ್ವಾಮಿ ಮಠ, ಮೈಸೂರಿನ ಚಾಮುಂಡಿಬೆಟ್ಟ, ತಿರುಪತಿ ಮೊದಲಾದವು ಇವರ ಕೆಲವು ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ವೀರಶೈವ:** ಜಿಲ್ಲೆಯ ಗೌರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ, ಚಿಕ್ಕಬಳ್ಳಾಪುರ, ಬಂಗಾರಪೇಟೆ, ಶಿಡ್ಲಘಟ್ಟ, ಕೋಲಾರ ಹಾಗೂ ಮಾಲೂರು ತಾಲೂಕುಗಳಲ್ಲಿ ವೀರಶೈವ ಜನಾಂಗದವರು ಹೆಚ್ಚಾಗಿದ್ದಾರೆಂದು ತಿಳಿದುಬಂದಿದೆ. ಹಿಂದೆ, ವ್ಯವಸಾಯ ಹಾಗೂ ವ್ಯಾಪಾರವನ್ನು ಸಾಂಪ್ರದಾಯಿಕ ಉದ್ಯೋಗ ಮಾಡಿಕೊಂಡಿದ್ದವರು ಈಚೆಗೆ ಇತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಇವರು ಕನ್ನಡ ಮಾತನಾಡುವವರಾಗಿದ್ದು, ತೆಲುಗನ್ನೂ ಬಲ್ಲವರು. ಇವರಲ್ಲಿ ಜಾತಿ ಪಂಚಾಯಿತಿ, ಪುರೋಹಿತ ವರ್ಗ ಹಾಗೂ ದತ್ತು ಸಂಪ್ರದಾಯವಿದೆ. ಮಗು ಹುಟ್ಟಿದ ಒಂಭತ್ತು/೧೧ನೇ ದಿನಕ್ಕೆ ಮಗುವಿಗೆ ಲಿಂಗಧಾರಣೆ ಹಾಗೂ ಹೆಸರಿಡುವ ಸಂಪ್ರದಾಯ

ಇದೆ. ಹೆಣ್ಣು ದೊಡ್ಡವಳಾದಾಗ ಮೂರನೇ ದಿನಕ್ಕೆ ಒಸಗೆ ಹಾಕುತ್ತಾರೆ. ೧೧ನೇ ದಿನಕ್ಕೆ ಗುರುಗಳಿಂದ ಲಿಂಗಧಾರಣೆ, ಬೋಧನೆಗಳಾಗುತ್ತವೆ. ವಿವಾಹದಲ್ಲಿ ಸೋದರಮಾವನು ಹಾಲುಗಂಬ ತರುವುದು, ಕಾಲುಮೆಟ್ಟು (ಕಾಲುಂಗುರ) ಇಡುವುದೇ ಮೊದಲಾದ ಪ್ರಮುಖ ಶಾಸ್ತ್ರಗಳನ್ನು ನಿರ್ವಹಿಸುತ್ತಾನೆ. ಇವರಲ್ಲಿ ಶವವನ್ನು ಕುಳಿತ ರೀತಿಯಲ್ಲಿ ಇರಿಸಿ, ಸಮಾಧಿ ಮಾಡುತ್ತಾರೆ. ೧೧ ದಿನಕ್ಕೆ ಕೈಲಾಸ ಗಣಾರಾಧನೆ ಮಾಡುತ್ತಾರೆ. ವೀರಶೈವರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸಿದರೂ ಶಿವರಾತ್ರಿ, ಬಸವಜಯಂತಿ ಹಾಗೂ ಕಾರ್ತಿಕ ಮಾಸಗಳನ್ನು ಹೆಚ್ಚು ಆಸ್ಥೆಯಿಂದ ನಡೆಸುತ್ತಾರೆ. ಶಿವ, ಬಸವೇಶ್ವರ, ವೀರಭದ್ರ, ಗೌರಿ, ಗಣೇಶ ಮೊದಲಾದುವು ಇವರ ಕೆಲವು ಪ್ರಮುಖ ದೇವತೆಗಳು ಹಾಗೂ ತಲಕಾಡು, ನಂದಿ, ಶ್ರೀಶೈಲ, ನಂಜನಗೂಡು ಮೊದಲಾದವು ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ವೈಶ್ಯ:** ವ್ಯಾಪಾರವನ್ನು ಸಾಂಪ್ರದಾಯಿಕ ವೃತ್ತಿ ಮಾಡಿಕೊಂಡ ವೈಶ್ಯರು ಅಥವಾ ಕೋಮಟಿಗರು ಈಚೆಗೆ ಇತರ ನೌಕರಿಗಳನ್ನೂ ಅವಲಂಬಿಸಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಸಮಾಜದ ಮುಖಂಡ ಅವರ ವಿವಾದಗಳನ್ನು ಬಗೆಹರಿಸುವ ಪದ್ಧತಿ ಇದ್ದಿತು. ಇವರ ಮಾತೃಭಾಷೆ ತೆಲುಗು ಆದರೂ ಕನ್ನಡವನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ವೈಶ್ಯರಲ್ಲಿ ಋಷ್ಯಶೃಂಗ, ಇಕ್ಷ್ವ, ಮಿಥುನ, ಚಿನ್ನ ಶೆಟ್ಲು, ಆತ್ರೇಯ ಮೊದಲಾದ ನೂರಕ್ಕೂ ಹೆಚ್ಚು ಗೋತ್ರಗಳು ಹಾಗೂ ವಿವಿಧ ಗುಂಪುಗಳಿವೆ ಎನ್ನಲಾಗಿದೆ. ಇವರಲ್ಲಿ ದತ್ತು ಸಂಪ್ರದಾಯವೂ, ಅವಿಭಕ್ತ ಕುಟುಂಬಗಳೂ ಇವೆ. ಮಗು ಹುಟ್ಟಿದ ಸಂದರ್ಭದಲ್ಲಿ ೧೧ ದಿನದ ಮೈಲಿಗೆ ಆಚರಿಸಿ, ಮೂರು, ಐದು, ಏಳು ಅಥವಾ ಒಂಭತ್ತನೇ ತಿಂಗಳಲ್ಲಿ ನಾಮಕರಣ ಶಾಸ್ತ್ರ ಮಾಡುತ್ತಾರೆ. ಋತುಮತಿಯಾದ ಹುಡುಗಿಗೆ ಐದರಿಂದ ೧೦ ದಿನಗಳವರೆಗೆ ವಿವಿಧ ದೇವರ ಅಲಂಕಾರ ಮಾಡುವ, ಆರತಿ ಮಾಡುವ ನಡವಳಿಕೆ ಇದೆ. ವಿವಾಹವು ಹೆಣ್ಣಿನ ಮನೆಯಲ್ಲಿ ಆಗುವುದು ಸಂಪ್ರದಾಯ. ಈಚೆಗೆ ಇದನ್ನು ಅನುಕೂಲಕ್ಕೆ ತಕ್ಕಂತೆ ನಡೆಸುತ್ತಾರೆ. ವೈಶ್ಯರು ಜನಿವಾರ ಧರಿಸುತ್ತಾರೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಇವರಲ್ಲಿ ವಿಚ್ಛೇದನ, ಕೂಡಿಕೆ ಸಂಪ್ರದಾಯವಿಲ್ಲ. ಇವರಲ್ಲಿ ಶವಕ್ಕೆ ಅಗ್ನಿ ಸಂಸ್ಕಾರ ಮಾಡುತ್ತಾರೆ. ಸತ್ತ ೧೧ ದಿನಗಳವರೆಗೆ ಮೈಲಿಗೆ ಆಚರಿಸಿ, ೧೨ನೇ ದಿನ ಶುಭ ಸ್ವೀಕಾರ ಮಾಡಿ, ೧೬ನೇ ದಿನ ವೈಕುಂಠ ಸಮಾರಾಧನೆ ಮಾಡುತ್ತಾರೆ. ಸಸ್ಯಾಹಾರಿಗಳಾದ ಇವರು ಎಲ್ಲಾ ಹಿಂದೂ ದೇವರುಗಳನ್ನು ಪೂಜಿಸಿದರೂ ಕನ್ಯಕಾಪರಮೇಶ್ವರಿಯನ್ನು ತಮ್ಮ ಪ್ರಮುಖ ಆರಾಧ್ಯ ದೇವತೆಯೆಂದು ಒಪ್ಪಿಕೊಂಡಿದ್ದಾರೆ. ಅಂತೆಯೇ, ವಾಸವೀ ಜಯಂತಿಯನ್ನು ವಿಶೇಷ ರೀತಿಯಲ್ಲಿ ಆಚರಿಸುತ್ತಾರೆ. ಪ್ರೊದ್ದಟೂರಿನ (ಕಡಪ ಜಿಲ್ಲೆ) ಕನ್ಯಕಾಪರಮೇಶ್ವರಿ, ತಿರುಪತಿ, ಧರ್ಮಸ್ಥಳ, ನಂಜನಗೂಡು, ಕದಿರಿ ಮೊದಲಾದವು ಇವರ ಕೆಲವು ಯಾತ್ರಾಸ್ಥಳಗಳಾಗಿವೆ.

**ಶಿಳ್ಳೇಕ್ಯಾತ:** ಚಿತ್ತಾರಗೊಂಬೆ ಅಥವಾ ತೊಗಲುಗೊಂಬೆ ಆಟದ ಕಲಾವಿದರನ್ನು ಕೋಲಾರ ಭಾಗದಲ್ಲಿ ಶಿಳ್ಳೇಕ್ಯಾತರು ಅಥವಾ ಬೊಮ್ಮಲಾಟವೊಳ್ಳು ಎಂದು ಗುರುತಿಸಲಾಗುತ್ತಿದೆ. ಮರಾಠಿ ಮಾತೃಭಾಷೆಯ ಇವರು ವ್ಯಾವಹಾರಿಕವಾಗಿ ಕನ್ನಡ ಹಾಗೂ ತೆಲುಗು ಭಾಷೆಗಳನ್ನು ಆಡುವವರಾದರೂ ಗೊಂಬೆಯಾಟದ ಪ್ರದರ್ಶನದಲ್ಲಿ ತೆಲುಗನ್ನೇ ಬಳಸುತ್ತಾರೆ. ಆಂಧ್ರ ಗಡಿಭಾಗದಲ್ಲಿ ಸಾಮಾನ್ಯವಾಗಿ ಇರುವಂತೆ ಈ ಕಲಾವಿದರೂ ಆಳೆತ್ತರದ ತೊಗಲುಗೊಂಬೆಗಳನ್ನು ಪ್ರದರ್ಶಿಸುತ್ತಾರೆ. ಗೊಂಬೆ ಆಡಿಸುವುದೇ ಇವರ ಸಾಂಪ್ರದಾಯಿಕ ವೃತ್ತಿಯಾಗಿದ್ದಿತು. ಈಚೆಗೆ ಕೃಷಿ, ನೌಕರಿಯಂತಹ ಇತರ ಉದ್ಯೋಗಗಳಲ್ಲಿಯೂ ತೊಡಗಿದ್ದಾರೆ. ಶಿಳ್ಳೇಕ್ಯಾತರಲ್ಲಿ ಆವೇಟ, ಸಿಂಧೆ, ರೇಖಿಂದ್ರ, ವನಾರ್ಚ ಮೊದಲಾದ ಗೋತ್ರಗಳಿವೆ. ಇವರಲ್ಲಿ ಸಗೋತ್ರ ವಿವಾಹ ನಿಷಿದ್ಧವೆನಿಸಿದೆ. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಕುಲದ ಹಿರಿಯರು ವಿವಾಹ ಶಾಸ್ತ್ರ ಮೊದಲಾದವುಗಳ ನೇತೃತ್ವ ವಹಿಸುತ್ತಾರೆ. ಋತುಮತಿಯಾದ ಹುಡುಗಿಯನ್ನು ಐದು ದಿನ ಪ್ರತ್ಯೇಕ ಇರಿಸಿ, ಆರತಿ ಮಾಡುವ ಸಂಪ್ರದಾಯವಿದೆ. ಮಗು ಹುಟ್ಟಿದ ಒಂದು ವರ್ಷದೊಳಗಾಗಿ ನಾಮಕರಣ ಶಾಸ್ತ್ರ ಮುಗಿಸಬೇಕು ಎನ್ನುತ್ತಾರೆ. ಶವವನ್ನು ಹೂಳುತ್ತಾರೆ ಮತ್ತು ೧೧ ದಿನಕ್ಕೆ ಕಾರ್ಯಗಳನ್ನು ಮುಗಿಸುತ್ತಾರೆ. ಜನನ, ಮರಣ ಮತ್ತು ನಿಶ್ಚಿತಾರ್ಥಗಳಂತಹ ಕೆಲವು ವಿಶೇಷ ಸಂದರ್ಭಗಳಲ್ಲಿ ಕುರಿ/ಕೋಳಿಯ ಬಲಿ ಕೊಟ್ಟು ಅದರ ರಕ್ತ ಇಟ್ಟುಕೊಳ್ಳುವುದು ಇವರ ವಿಶೇಷ ಎನ್ನುತ್ತಾರೆ. ಶಿಳ್ಳೇಕ್ಯಾತರು ವೆಂಕಟರಮಣ, ಆಂಜನೇಯ, ಶ್ರೀರಾಮ ಮೊದಲಾದ ದೇವರುಗಳನ್ನು ವಿಶೇಷವಾಗಿ ಪೂಜಿಸುತ್ತಾರೆ.

**ಸಿಂದ್ ಮಾದಿಗ:** ಮಾಲೂರು, ಚಿಂತಾಮಣಿ, ಕೋಲಾರ ತಾಲೂಕುಗಳ ಕೆಲ ಹಳ್ಳಿಗಳಲ್ಲಿ ನೆಲೆಸಿರುವ ಸಿಂದ್/ಚಿಂದ್ ಮಾದಿಗರು ಆಂಧ್ರದ ತೆಲಂಗಾಣ ಪ್ರದೇಶದಿಂದ ಈ ಕಡೆ ವಲಸೆ ಬಂದವರಾಗಿದ್ದಾರೆ. ಮಾದಿಗರ ಒಂದು ಉಪ ಪಂಗಡವಾದ

ಇವರಿಗೆ ಚಿನ್ನ ಮಾದಿಗೋಳ್ಳು, ಸಿಂದುವಾಳ್ಳು ಮೊದಲಾದ ಪರ್ಯಾಯ ಹೆಸರುಗಳೂ ಇವೆ. ತೆಲುಗು ಆಡುಭಾಷೆ ಇವರ ಮನೆ ಮಾತಾಗಿದ್ದು, ಚಿಂದು ಭಾಗವತರೆಂಬ ಹೆಸರಲ್ಲಿ ನಾಟಕಾಭಿನಯ ಮಾಡುವುದನ್ನು ಕುಲ ಕಸುಬಾಗಿ ಹೊಂದಿದ್ದರು. ಈಚೆಗೆ ಕೃಷಿ, ಕೂಲಿ ಮತ್ತಿತರ ವೃತ್ತಿಗಳನ್ನವಲಂಬಿಸಿದ್ದಾರೆ. ಇವರಲ್ಲಿ ಒಳಾಡಳಿತ ವ್ಯವಸ್ಥೆ ಇದ್ದು, ಕುಲದ ಮುಖ್ಯಸ್ಥನನ್ನು ಮಣೆಗಾರ ಎಂದು ಕರೆಯುತ್ತಾರೆ. ಇವರ ಮದುವೆ ಮತ್ತು ಸಾವಿನ ವಿಧಿಗಳನ್ನು ವಷ್ಟುಯೋಳ್ಳು (ಓಷ್ಟುಮಯ್ಯ) ಎಂಬ ಪುರೋಹಿತ ನಡೆಸಿಕೊಡುತ್ತಾನೆ. ವಿವಾಹ ಸಂದರ್ಭದಲ್ಲಿ ಈ ಪುರೋಹಿತನು ವರನಿಗೆ ಗಾಯತ್ರಿ ಮಂತ್ರ ಉಪದೇಶಿಸಿ, ಯಜ್ಞೋಪವೀತಧಾರಣೆ ಮಾಡುತ್ತಾನೆ (ಸಿಂದ್ ಮಾದಿಗರ ಸಂಸ್ಕೃತಿ ಪು.೨೧೭). ಶವದ ಬಟ್ಟೆ ತೆಗೆದು, ಬೋರಲು ಮಲಗಿಸಿ ಮಣ್ಣು ಮಾಡುವುದೂ ಇವರ ವಿಶೇಷ ಸಂಪ್ರದಾಯವಾಗಿದೆ. ಇವರು ಎಲ್ಲಮ್ಮನ ಭಕ್ತರು.

**ಸೋಲಿಗ:** ಕೋಲಾರ, ಬಂಗಾರಪೇಟೆ, ಮುಳಬಾಗಿಲು, ಮಾಲೂರು, ಗುಡಿಬಂಡೆ, ಬಾಗೇಪಲ್ಲಿ ಮೊದಲಾದ ತಾಲೂಕುಗಳಲ್ಲಿ ಇವರು ಕಂಡುಬರುತ್ತಾರೆ. ಒಂದೆರಡು ತಲೆಮಾರಿನ ಹಿಂದೆ ತಮ್ಮವರು ಮೈಸೂರು ಜಿಲ್ಲೆಯಿಂದ ಈ ಭಾಗಕ್ಕೆ ವಲಸೆ ಬಂದರೆಂದೂ, ತಾವು ಊರು ಸೋಲಿಗರಾಗಿದ್ದು, ಅಡವಿ ಸೋಲಿಗರೊಂದಿಗೆ ತಮಗೆ ಸಂಬಂಧ ಇಲ್ಲ ಎಂದೂ ಹೇಳುತ್ತಾರೆ. ಮೈಸೂರು ಭಾಗದಲ್ಲಿ ತಮ್ಮನ್ನು ಸೋಲಿಗರೆಂದು ಗುರುತಿಸಿದರೂ ಕೋಲಾರ ಭಾಗದಲ್ಲಿ ಇತರರು ತಮ್ಮನ್ನು ಪೂಸಲವರು ಎಂದು ಕರೆಯುತ್ತಾರೆ ಎಂದೂ ಹೇಳುತ್ತಾರೆ. ತೆಲುಗಿನಲ್ಲಿ ಪೂಸಲು ಎಂದರೆ ಮಣಿಗಳು ಎಂದರ್ಥ. ಸಂಚಾರಿ ವ್ಯಾಪಾರಿಗಳಾಗಿರುವ ಇವರು ಅರಿಸಿನ, ಕುಂಕುಮ, ಮಣಿಸರ, ಬಳೆ, ದಾರ, ಸಾಂಬ್ರಾಣಿ, ಪಾತ್ರೆ ಮೊದಲಾದುವನ್ನು ಊರುಗಳಲ್ಲಿ ಮಾರಾಟ ಮಾಡುತ್ತಾರೆ. ಸರಕಾರದಿಂದ ಜಮೀನು ಪಡೆದವರು ಕೃಷಿಕರಾಗಿರುವುದೂ ಉಂಟು. ಪ್ರಸ್ತುತ ಇವರು ಕನ್ನಡ ಹಾಗೂ ತೆಲುಗನ್ನು ತಮ್ಮ ವ್ಯವಹಾರ ಭಾಷೆ ಮಾಡಿಕೊಂಡಿದ್ದಾರೆ. ಕಾಶಿ, ಈಚಲ, ಗನ್ನೇರು, ಪಕ್ಷಿ, ಜೋಗಾಂಬ, ಮಲ್ಲೆ, ಪುಷ್ಪ ಮೊದಲಾದ ಗೋತ್ರಗಳು ಇವರಲ್ಲಿದ್ದು, ಸಗೋತ್ರ ವಿವಾಹ ನಿಷಿದ್ಧವೆನ್ನಲಾಗಿದೆ. ಜಾತಿ ಪಂಚಾಯ್ತಿ ಇದೆ. ವಿವಾಹ ಶಾಸ್ತ್ರಕ್ಕೆ ಈಗ ಬ್ರಾಹ್ಮಣ ಪುರೋಹಿತರು ಬರುತ್ತಾರೆ. ಹುಟ್ಟು, ಸಾವು ಹಾಗೂ ಮೈನೆರೆದ ದಿನಗಳಲ್ಲಿ ನಿರ್ದಿಷ್ಟ ದಿನ ಸೂತಕ ಆಚರಿಸುತ್ತಾರೆ. ಮುನೇಶ್ವರ, ಗಂಗಮ್ಮ, ಆಂಜನೇಯ, ನರಸಿಂಹ, ಮಾರಿ ಮೊದಲಾದ ಸ್ಥಳೀಯ ದೇವತೆಗಳಿಗೆ ನಡೆದುಕೊಳ್ಳುವ ಇವರು ವರ್ಷಕ್ಕೊಮ್ಮೆ ಊರ ಹೊರಗೆ, ಹೊಂಗೆ ಮರದ ಕೆಳಗೆ ಚಪ್ಪರ ಹಾಕಿ, ಪೂಜೆ, ಬಲಿಗಳೊಂದಿಗೆ ಏಡುಗರಕ್ಕೆಯಿಗಾರರು (ಏಳು ಜನ ಅಕ್ಕ ತಂಗೇರು) ಎಂಬ ದೇವರನ್ನು ಪೂಜಿಸುತ್ತಾರೆ. ಯುಗಾದಿ, ದೀಪಾವಳಿ, ಗೌರಿ ಹಬ್ಬಗಳನ್ನು ಆಚರಿಸುತ್ತಾರೆ.

**ಹಕ್ಕಿಪಿಕ್ಕಿ:** ಹಕ್ಕಿಪಕ್ಷಿಗಳ ಬೇಟೆಯಾಡಿ ಬದುಕುತ್ತಿದ್ದ ಈ ಅಲೆಮಾರಿ ಜನ ವರ್ಗದವರು ವನ್ಯಜೀವಿಗಳ ಬೇಟೆ ಕಾನೂನು ಪ್ರಕಾರ ನಿಷೇಧಿತವಾಗಿರುವುದರಿಂದ, ಈಚೆಗೆ ಸರ್ಕಾರದ ಸವಲತ್ತುಗಳನ್ನು ಪಡೆದು ಒಂದೆಡೆ ನಿಲ್ಲುವ, ವ್ಯವಸಾಯ, ಸಣ್ಣಪುಟ್ಟ ವ್ಯಾಪಾರ, ಇತ್ಯಾದಿಗಳಲ್ಲಿ ತೊಡಗುವ ಪ್ರವೃತ್ತಿ ತೋರಿದ್ದಾರೆ. ಮರಾಠಿ ಮಿಶ್ರಿತ ಭಾಷೆ ಮಾತನಾಡುವ ಇವರು ಮಹಾರಾಷ್ಟ್ರ ಭಾಗದಿಂದ ಬಂದವರು. ಇವರಲ್ಲಿ ಕಟ್ಟುನಿಟ್ಟಾದ ಜಾತಿ ಪಂಚಾಯಿತಿ ಇದೆ. ಬಹುಬೇಗ ಮದುವೆ ಮಾಡಿಕೊಳ್ಳುವ ಗಂಡುಮಕ್ಕಳು ಕೂಡಲೇ ಸ್ವತಂತ್ರ ಜೀವನವನ್ನು ಆರಂಭಿಸುವುದರಿಂದ ಇವರಲ್ಲಿ ಅವಿಭಕ್ತ ಕುಟುಂಬಗಳು ವಿಶೇಷವಾಗಿ ಕಂಡುಬರುತ್ತವೆ. ದತ್ತು ಸಂಪ್ರದಾಯ, ವಿಚ್ಛೇದನ, ವಿಧವಾ ವಿವಾಹಗಳು ಇವರಲ್ಲಿದ್ದು, ಧಾರ್ಮಿಕ ಕಾರ್ಯಗಳು ಕುಲದ ಮುಖಂಡನ ನೇತೃತ್ವದಲ್ಲಿ ನಡೆಯುತ್ತವೆ. ಇವರು ಶವವನ್ನು ಹೂಳುತ್ತಾರೆ. ಹುಟ್ಟು, ಸಾವು ಹಾಗೂ ಹುಡುಗಿ ಮೈನೆರೆದಾಗ ಸೂತಕ–ಕಟ್ಟಳೆಗಳನ್ನು ಆಚರಿಸುತ್ತಾರೆ. ಯುಗಾದಿ, ದೀಪಾವಳಿಗಳನ್ನು ಆಚರಿಸುವ ಇವರು ಗಂಗಮ್ಮ, ದುರ್ಗಿ, ಚಾಮುಂಡಿ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಸೌದತ್ತಿ, ಮೈಸೂರು, ತಿರುಪತಿ ಮೊದಲಾದುವು ಇವರ ಕೆಲ ಯಾತ್ರಾಸ್ಥಳಗಳಾಗಿವೆ.

**ಹೆಳವ:** ಹೆಳವೊಕ್ಕಲಿಗರು ಎಂದೂ ಕರೆಯಲಾಗುವ ಇವರನ್ನು ತೆಲುಗಿನಲ್ಲಿ ಪಿಚ್ಚುಕುಂಟರೆನ್ನಲಾಗುತ್ತದೆ. ಒಕ್ಕಲಿಗರ ಕುಲ–ಗೋತ್ರ, ವಂಶಪುರಾಣ ಹೇಳುವುದು ಇವರ ಸಾಂಪ್ರದಾಯಿಕ ವೃತ್ತಿಯಾಗಿದೆ. ಈಚೆಗೆ ಇತರ ನೌಕರಿಗಳಲ್ಲಿಯೂ ತೊಡಗಿದ್ದಾರೆ. ತಮ್ಮಲ್ಲಿ ಕಾಡು ಪಿಚ್ಚುಕುಂಟ ಎಂಬ ಇನ್ನೊಂದು ಪಂಗಡ ಉಂಟು; ಅವರು ಊರೊಳಗೆ ಬರುವುದಿಲ್ಲ, ತಿತ್ತಿಪುಂಗಿ ಊದುತ್ತಾ ಕತೆ ಹೇಳುತ್ತಾರೆ. ನಾವು ಗಂಟೆ ಬಾರಿಸುತ್ತಾ ಕತೆ ಹೇಳುತ್ತೇವೆ–ಎನ್ನುತ್ತಾರೆ. ಪಿಚ್ಚುಕುಂಟರಲ್ಲಿ ಹಿಮ್ಮಡಿ, ಬಂಗನಿಮ್ಮ, ಸಿಂಗರಾಜ ಮೊದಲಾದ ಗೋತ್ರಗಳಿವೆ. ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರಲ್ಲಿ ಹುಡುಗಿ ಮೈನೆರೆದಾಗ ಮೂರು ದಿನ ಹಸಿರು

ಗುಡಿಸಿಲಿನಲ್ಲಿ ಪ್ರತ್ಯೇಕ ಇರಿಸುತ್ತಾರೆ. ಮಗು ಹುಟ್ಟಿದ ಎಂಟು ದಿನಕ್ಕೆ ಸೂತಕ ಕಳೆದುಕೊಳ್ಳುತ್ತಾರೆ. ಮಾವ ಅಥವಾ ಅತ್ತಿಗೆ ಮಗುವಿಗೆ ಹೆಸರಿಡಬೇಕಾಗುತ್ತದೆ. ಇವರ ಮದುವೆಯಲ್ಲಿ ಅರಿಸಿನ ಇಡುವುದು, ಚಪ್ಪರದ ದೊಡ್ಡಿಯಲ್ಲಿ ಭತ್ತ ಕುಟ್ಟುವುದು, ಕಾಲುಗುರು ತೆಗೆಯುವುದು, ಧಾರೆಯಾದ ಬಳಿಕ ಅನ್ನದ ಭಾಷೆ ತೆಗೆದುಕೊಳ್ಳುವುದು ಮೊದಲಾದ ಶಾಸ್ತ್ರ ಸಂಪ್ರದಾಯಗಳಿವೆ. ಇವರಲ್ಲಿ ಹಿಂದೆ ಶವವನ್ನು ಕೈಗಳಲ್ಲಿಯೇ ಎತ್ತಿಕೊಂಡು ಹೋಗುವ (ತುಲಿ) ಪದ್ಧತಿ ಇದ್ದಿತು. ಈಗ ಪಾಡಿ (ಚಟ್ಟ) ಬಳಸುತ್ತಾರೆ. ಹಿಂದೆ, ಧಾರ್ಮಿಕ ವಿಧಿಗಳು ಕುಲದ ಯಜಮಾನನ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದವು.

**ಹೊಲೆಯ:** ತಮಟೆ ಬಾರಿಸುವುದು, ಊರ ತೋಟಿ ಕೆಲಸ ಮಾಡುವುದು ಮೊದಲಾದ ಸಾಂಪ್ರದಾಯಿಕ ವೃತ್ತಿಗಳನ್ನು ನಿರ್ವಹಿಸುತ್ತಿದ್ದ ಹೊಲೆಯರು ಈಚೆಗೆ ಕೃಷಿಕೂಲಿ, ವ್ಯವಸಾಯ, ನೌಕರಿ ಮೊದಲಾದ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಕನ್ನಡ ಹಾಗೂ ತೆಲುಗನ್ನು ಮಾತನಾಡುವ ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಕುಲಮುಖ್ಯನ ಸಮ್ಮುಖದಲ್ಲಿ ನ್ಯಾಯ ತೀರ್ಮಾನಗಳಾಗುತ್ತಿದ್ದವು. ಕಣ್ಣಿಗ, ಮಲ್ಲಿಗ, ವಲ್ಲಿಗ, ಮಂಡಲ ಮೊದಲಾದುವು ಹೊಲೆಯರ ಬೆಡಗುಗಳಾಗಿವೆ. ಜನನ, ಮರಣ ಹಾಗೂ ಹುಡುಗಿ ಮೈನೆರೆದ ಸಂದರ್ಭಗಳಲ್ಲಿ ನಿಯಮದಂತೆ ಮೈಲಿಗೆ ಆಚರಿಸುತ್ತಾರೆ. ಇವರಲ್ಲಿ ಶವವನ್ನು ಹೂಳುತ್ತಾರೆ. ವೆಂಕಟರಮಣ, ಆಂಜನೇಯ, ಗಂಗಮ್ಮ, ಚೌಡೇಶ್ವರಿ ಮೊದಲಾದ ದೇವತೆಗಳನ್ನು ಪೂಜಿಸುವ ಇವರಲ್ಲಿ ಕೆಲವರು ಯುಗಾದಿ ಸಮಯದಲ್ಲಿ ಗಂಗಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸಾಮಾಜಿಕ ಜೀವನ

ಒಂದು ಪ್ರದೇಶದ ಕೌಟುಂಬಿಕ ಅಥವಾ ಸಾಮಾಜಿಕ ಬದುಕು ಅಲ್ಲಿನ ಧರ್ಮ, ರಾಜಕೀಯ, ಸಂಸ್ಕೃತಿ ಮತ್ತಿತರ ಅಂಶಗಳಿಂದ ಪ್ರೇರಿತವಾಗಿರುತ್ತದೆ. ಕರ್ನಾಟಕದ ಸಂದರ್ಭದಲ್ಲಿ, ಜಿಲ್ಲೆಯಿಂದ ಜಿಲ್ಲೆಗೆ ಸಾಮಾಜಿಕ ಬದುಕು ತೀರಾ ಭಿನ್ನವಾಗಿ ಕಾಣುವ ಸಂಭವವಿಲ್ಲವಾದರೂ ಉದ್ದೇಶಿತ ಜಿಲ್ಲೆಯ ಸಮಗ್ರ ನೋಟದ ಹಿನ್ನೆಲೆಯಲ್ಲಿ ಅಲ್ಲಿನ ಸಾಮಾಜಿಕ ಬದುಕಿನ ವಿವಿಧ ಮುಖಗಳ ಸ್ಥೂಲ ಪರಿಚಯವೂ ಅಗತ್ಯವಾಗುತ್ತದೆ. ಈ ಉದ್ದೇಶದಿಂದ ಕೋಲಾರ ಜಿಲ್ಲೆಯಲ್ಲಿನ ವಿವಿಧ ಜನವರ್ಗಗಳ ಕೌಟುಂಬಿಕ ವ್ಯವಸ್ಥೆ, ಜೀವನಾವರ್ತದ ಸಂಪ್ರದಾಯಗಳು, ಹಬ್ಬ–ದೇವರು, ಆಹಾರ ಪದ್ಧತಿ ಮೊದಲಾದ ಅಂಶಗಳಿಗೆ ಸಂಬಂಧಿಸಿ ಇಲ್ಲಿ ಸ್ಥೂಲವಾಗಿ ಪರಿಚಯಿಸಲಾಗಿದೆ.

**ಕುಟುಂಬ ಪದ್ಧತಿ:** ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬವೇ ಕೇಂದ್ರ. ವ್ಯಕ್ತಿಯು ಮೊದಲು ಕೌಟುಂಬಿಕ; ಆ ಬಳಿಕ ಸಾಮಾಜಿಕ. ಆದ್ದರಿಂದ, ಕುಟುಂಬದ ಮೂಲಕ ಸಾಮಾಜಿಕ ರೀತಿ ನೀತಿಗಳನ್ನು ಮೈಗೂಡಿಸಿಕೊಂಡು ಆತ ಬೆಳೆಯುತ್ತಾನೆ. ಭಾರತೀಯ ಸಾಂಪ್ರದಾಯಿಕ ಕುಟುಂಬ ಪದ್ಧತಿಯಲ್ಲಿ ಹಿಂದೆ ಅವಿಭಕ್ತ ಕುಟುಂಬಗಳೇ ವಿಶೇಷವಾಗಿ ಕಾಣಬರುತ್ತಿದ್ದವು. ಅದರಲ್ಲೂ ಗ್ರಾಮೀಣ ಬದುಕಿನಲ್ಲಿ ಅವಿಭಕ್ತ ಕುಟುಂಬಗಳು ಅನಿವಾರ್ಯವಾಗಿದ್ದವು. ಆದರೆ ಈಚಿನ ಒಂದೆರಡು ದಶಕಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಸಹ ಅವಿಭಕ್ತ ಕುಟುಂಬಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಸ್ವಂತ ದುಡಿಮೆ, ಸ್ವಂತ ಆಸ್ತಿಯ ಅಭಿವೃದ್ಧಿ, ಚಿಕ್ಕ ಸಂಸಾರದ ಆಕರ್ಷಣೆ ಮೊದಲಾದ ಭಾವನೆಗಳು ವ್ಯಕ್ತಿಗಳಲ್ಲಿ ಹೆಚ್ಚಿದ್ದು ಇದಕ್ಕೆ ಕಾರಣವೆನ್ನಬಹುದು. ಶೈಕ್ಷಣಿಕ ಬೆಳವಣಿಗೆ, ಕೈಗಾರಿಕೆಗಳ ವ್ಯಾಪಕತೆ, ಸಾರಿಗೆ ಸಂಪರ್ಕಗಳ ಸುಲಭೀಕರಣ ಮೊದಲಾದವುಗಳಿಂದ ನಗರೀಕರಣ ತೀವ್ರವಾದದ್ದು, ಗ್ರಾಮೀಣರೂ ನಗರಕ್ಕೆ ಬಂದು ನೆಲೆ ನಿಲ್ಲುವುದರ ಪ್ರಮಾಣ ಹೆಚ್ಚಾದದ್ದು ಸಾಂಪ್ರದಾಯಿಕ ಅವಿಭಕ್ತ ಕುಟುಂಬಗಳ ಸಂಖ್ಯೆ ಕ್ಷೀಣಿಸಲು ಕಾರಣವಾಗಿದೆ.

**ಗರ್ಭಾವಸ್ಥೆ ಮತ್ತು ಜನನ:** ದಾಂಪತ್ಯದ ಪ್ರಮುಖ ಉದ್ದೇಶಗಳಲ್ಲಿ ಸಂತಾನಾಪೇಕ್ಷೆಯೂ ಒಂದಾಗಿದೆ. ವಿವಾಹಿತೆಯು ಸಕಾಲದಲ್ಲಿ ಗರ್ಭಿಣಿಯಾದರೆ ಅದು ಆ ಕುಟುಂಬಕ್ಕೂ ಬಂಧುಗಳಿಗೂ ಅತ್ಯಂತ ಸಂತಸದ ಸುದ್ದಿಯಾಗುತ್ತದೆ. ಈ ಗರ್ಭಾವಸ್ಥೆಯ ಅವಧಿಯಲ್ಲಿ ಆಕೆಗೆ ಯಾವ ಆತಂಕಗಳೂ ಇಲ್ಲದಂತಾಗಲಿ, ಗರ್ಭಸ್ಥ ಶಿಶು ಆರೋಗ್ಯಪೂರ್ಣವಾಗಿ ಬೆಳೆಯಲಿ, ಸುಗಮ ಜನನವೂ ಆಗಲಿ ಎಂಬಿತ್ಯಾದಿ ಆಶಯಗಳಿಂದ ಗರ್ಭಧಾರಣೆಯು ಖಚಿತವಾದಾಗಿನಿಂದ ಶಿಶು ಜನನದವರೆಗೆ ಕೆಲವು ಸಂಪ್ರದಾಯಗಳನ್ನು ನೆರವೇರಿಸುವುದು ಎಲ್ಲಾ ವರ್ಗದವರಲ್ಲಿಯೂ ಸಾಮಾನ್ಯವಾಗಿದೆ. ಹಿಂದೆ, ಕೇಡು ಆದೀತೆಂಬ ಭಯದಿಂದ ಗ್ರಹಣ ಕಾಲದಲ್ಲಿ ಗರ್ಭಿಣಿಯರು ಮನೆಯಿಂದ ಹೊರಗೆ ಓಡಾಡುತ್ತಿರಲಿಲ್ಲ. ಈಗ ಅಂತಹ ಭಯವಿಲ್ಲವಾದರೂ ಆ ನಂಬಿಕೆ ಮಾತ್ರ ಪೂರ್ಣ ಹೋಗಿಲ್ಲ. ಗರ್ಭಿಣಿಯ ಬಯಕೆಗಳನ್ನು ತೃಪ್ತೊಳಿಸಬೇಕೆಂಬ ಆಶಯದಿಂದ ಆಕೆ ಅಪೇಕ್ಷಿಸುವ ತಿಂಡಿತೀರ್ಥಗಳನ್ನು

ಉಣಬಡಿಸುವುದು, ಅನುಕೂಲಕ್ಕೆ ತಕ್ಕಂತೆ ಹೊಸ ವಸ್ತ್ರ ಒಡವೆಗಳನ್ನು ಆಕೆಗೆ ನೀಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಮೊದಲ ಹೆರಿಗೆಗಾಗಿ ಗರ್ಭಿಣಿಯನ್ನು ತೌರುಮನೆಗೇ ಕಳುಹಿಸಿಕೊಡುವ ಪದ್ಧತಿ ಸಾಮಾನ್ಯವಾಗಿ ಎಲ್ಲಾ ಜಾತಿಗಳಲ್ಲಿ ಕಂಡುಬರುತ್ತದೆ. ಹಾಗೆ ಕಳುಹಿಸುವ ಸಂದರ್ಭದಲ್ಲಿ ಆಕೆಗೆ ಶುಭ ಹಾರೈಸಿ ಸೀಮಂತ ಶಾಸ್ತ್ರ ಮಾಡಲಾಗುತ್ತದೆ. ಹಿಂದಿನ ಕಾಲದಲ್ಲಿ ಸ್ಥಳೀಯ ಅನುಭವಸ್ಥ ಸೂಲಗಿತ್ತಿಯರೇ ಹೆರಿಗೆ ಕಾರ್ಯ ನಡೆಸುತ್ತಿದ್ದರು. ಈಚೆಗೆ ಆಸ್ಪತ್ರೆಗಳಿಗೆ ಹೋಗುತ್ತಾರೆ. ಮಗು ಜನನವಾದಾಗಿನಿಂದ ಸಾಮಾನ್ಯವಾಗಿ ೧೦ ದಿನಗಳವರೆಗೆ ಮೈಲಿಗೆ ದಿನಗಳೆಂದು ಪರಿಗಣಿಸಲಾಗುತ್ತದೆ. ಅವರವರ ಸಂಪ್ರದಾಯ ಹಾಗೂ ಅನುಕೂಲಕ್ಕೆ ತಕ್ಕಂತೆ, ಮೂರು ದಿನದಿಂದ ೧೧ ದಿನಗಳವರೆಗೆ ಯಾವುದಾದರೊಂದು ದಿನ ಈ ಜನನ ಸೂತಕ ಕಳೆದುಕೊಳ್ಳುವ ಶಾಸ್ತ್ರ ಮಾಡುತ್ತಾರೆ. ಅಂದು ನೆಲ–ಮನೆ ಸಾರಿಸಿ, ಸ್ನಾನ–ಮಡಿ ಮಾಡುತ್ತಾರೆ. ನಿಂಬೆ, ಬೇವು, ತುಂಬೆ, ಹೊಂಗೆ ಇತ್ಯಾದಿ ಹಲವು ಬಗೆಯ ಗಿಡಗಳ ಎಲೆಗಳನ್ನು ಹಾಕಿ ಕಾಯಿಸಿದ ನೀರಿನಲ್ಲಿ ಬಾಣಂತಿ ಹಾಗೂ ಮಗುವಿಗೆ ಸ್ನಾನ ಮಾಡಿಸುತ್ತಾರೆ. ತಮ್ಮ ಜಾತಿ ಪದ್ಧತಿಗೆ ತಕ್ಕಂತೆ ದಾಸಪ್ಪ, ಜಂಗಮ ಅಥವಾ ಪುರೋಹಿತನಿಂದ ಮನೆಯಲ್ಲಿ ಪೂಜೆ ಮಾಡಿಸಿ, ತೀರ್ಥ ಹಾಕಿಸಿ ಮೈಲಿಗೆ ಕಳೆದುಕೊಳ್ಳುತ್ತಾರೆ. ಅಂದು ಸಿಹಿ ಅಡುಗೆ ಮಾಡಿ ಬಂಧು–ಬಳಗಕ್ಕೆ ಊಟ ಹಾಕುತ್ತಾರೆ. ಈ ಸಂದರ್ಭದಲ್ಲಿ ಮುತ್ತೈದೆಯರು ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಕೆಲವರಲ್ಲಿ ಸೋದರ ಮಾವನು ಮಗುವಿನ ಕಿವಿಯಲ್ಲಿ ಅದರ ಹೆಸರು ಹೇಳಿ ನಾಮಕರಣದ ಶಾಸ್ತ್ರ ಮಾಡಿದರೆ ಇನ್ನು ಕೆಲವರಲ್ಲಿ ದಾಸಪ್ಪ ಅಥವಾ ಪುರೋಹಿತ ನಾಮಕರಣ ಶಾಸ್ತ್ರ ಮಾಡುತ್ತಾರೆ. ಮಗು ಹುಟ್ಟಿದ ದಿನವೇ ಅದರ ಬಾಯಿಗೆ ಚಿನ್ನದ ತಾಳಿಯ ಬೊಟ್ಟನ್ನು ಇಟ್ಟು, ಅದರ ಮೂಲಕ ಎರಡು, ಮೂರು ಹನಿ ಹರಳೆಣ್ಣೆಯನ್ನು ಕುಡಿಸುವ ಒಂದು ಸಂಪ್ರದಾಯವೂ ಕೆಲವರಲ್ಲಿ ಇದೆ. ಹೀಗೆ ಎಣ್ಣೆ ಕುಡಿಸಿದವರ ಸ್ವಭಾವಗಳು ಮಗುವಿಗೂ ಬಂದುಬಿಡುತ್ತವೆ ಎಂಬ ಪ್ರಬಲ ನಂಬಿಕೆಯಿಂದ ಯೋಗ್ಯರೆಂದು ಭಾವಿಸಿದವರ ಹಸ್ತದಿಂದಲೇ ಈ ಶಾಸ್ತ್ರ ಮಾಡಿಸುತ್ತಾರೆ.

ಮುಸ್ಲಿಮರಲ್ಲಿ ಮಗು ಹುಟ್ಟಿದಾಗ ಮಸೀದಿಯ ವ್ಯಕ್ತಿ ಬಂದು ಮನೆಬಾಗಿಲಲ್ಲಿ ನಿಂತು 'ಅಲ್ಲಾ' ಕೂಗುತ್ತಾನೆ. ಆಗ ಮಗುವಿಗೆ ಸ್ನಾನ ಮಾಡಿಸುತ್ತಾರೆ. ಬಳಿಕ ಆತ ಮಗುವಿನ ಕಿವಿಯಲ್ಲಿ ಅಜಾನ್ ಹೇಳಿ, ಉಫ್‌ಉಫ್ ಎಂದು ಊದುತ್ತಾನೆ. ಆಮೇಲೆ ಖರ್ಜೂರವನ್ನು ಎದೆಹಾಲಿನಲ್ಲಿ ತೇಯ್ದು ಮಗುವಿನ ಬಾಯಿಗೆ ಸೋಕಿಸುತ್ತಾರೆ. ತಾಯಿಗೆ ಆ ದಿನ ಹಾಗೂ ಮುಂದೆ ಒಂಭತ್ತು, ೨೦, ೩೦ ಹಾಗೂ ೪೦ನೇ ದಿನಗಳಲ್ಲಿ (ಒಟ್ಟು ಐದು) ಮಂತ್ರ ಹೇಳಿ ನೀರು ಹಾಕುತ್ತಾರೆ. ಅಲ್ಲಿಗೆ ಸೂತಕ ಮುಗಿಯುತ್ತದೆ ಎಂದು ಭಾವಿಸುತ್ತಾರೆ. ಕ್ರೈಸ್ತರಲ್ಲಿ ಮಗು ಹುಟ್ಟಿದ ಒಂದು ತಿಂಗಳಿನ ಒಳಗೆ ಚರ್ಚಿನಲ್ಲಿ ನಾಮಕರಣ ಸಮಾರಂಭ ನಡೆಸುತ್ತಾರೆ.

**ಋತುಮತಿ ಆಚರಣೆ:** ಹುಡುಗಿಯು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬರುವುದನ್ನು ಋತುಮತಿಯಾಗುವುದು, ಮೈನೆರೆಯುವುದು, ದೊಡ್ಡವಳಾಗುವುದು ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತದೆ. ಜನನ, ಮರಣಗಳ ಸಂದರ್ಭದಂತೆ ಋತುಮತಿಯಾದ ಸಂದರ್ಭವನ್ನೂ ಮೈಲಿಗೆಯ ದಿನಗಳೆಂದು ಪರಿಗಣಿಸಲಾಗುತ್ತದೆ. ಮೈನೆರೆದಾಕೆಯ ಆರೋಗ್ಯದ ರಕ್ಷಣೆ ಮತ್ತು ಮೈಲಿಗೆಯ ನಿವಾರಣೆಯ ಉದ್ದೇಶದಿಂದ ಕೆಲವೊಂದು ಶಾಸ್ತ್ರ–ಸಂಪ್ರದಾಯಗಳನ್ನು ಎಲ್ಲಾ ಜಾತಿಯವರೂ ತಪ್ಪದೇ ಆಚರಿಸುತ್ತಾರೆ. ಅವುಗಳಲ್ಲಿ ಮುಖ್ಯವಾಗಿ ಆ ಹುಡುಗಿಯನ್ನು ಹಸಿರು ಗುಡಿಸಲಿನಲ್ಲಿ ಪ್ರತ್ಯೇಕ ಇರಿಸುವುದು, ದೈಹಿಕ ಬೆಳವಣಿಗೆಗೆ ಪೂರಕವಾಗುವ ವಿಶೇಷ ತಿಂಡಿ, ಊಟಗಳನ್ನು ಆಕೆಗೆ ನೀಡುವುದು, ಕೊನೆಯಲ್ಲಿ ಒಸಗೆ ಹಾಕಿ ಮೈಲಿಗೆ ಕಳೆದುಕೊಳ್ಳುವ ವಿಧಿಗಳನ್ನು ನಡೆಸುವುದು ಸೇರಿವೆ.

ಹಿಂದುಳಿದ ವರ್ಗದವರಲ್ಲಿ ಹುಡುಗಿಯ ಸೋದರ ಮಾವನು ವಾವಲೆ ಸೊಪ್ಪು, ಹೊಂಗೆ ಸೊಪ್ಪು, ನೇರಳೆ, ವಾಯಿಲಾಕು(ಲಕ್ಕಿಸೊಪ್ಪು) ಮೊದಲಾದ ಯಾವುದಾದರೂ ಒಂದು ಅಥವಾ ಬೇರೆ ಬೇರೆ ಜಾತಿಯ ಸೊಪ್ಪು ತಂದು, ಮನೆಯ ಒಂದು ಪಕ್ಕದಲ್ಲಿ ಹಸಿರು ಗುಡಿಸಲು ನಿರ್ಮಿಸುತ್ತಾನೆ. ಅದರಲ್ಲಿ ಮೊದಲು ಆತನನ್ನು ಕುಳ್ಳಿರಿಸಿ ಕೊಬ್ಬರಿ, ತಂಬಿಟ್ಟು, ಬಾಳೆಹಣ್ಣು ಮೊದಲಾದುವನ್ನು ಆತನಿಗೆ ಮಡಿಲುದುಂಬುತ್ತಾರೆ. ಕೆಲವರಲ್ಲಿ ಬಳಿಕ ಹುಡುಗಿಯ ಬಟ್ಟೆಗಳನ್ನು ಮಡಿ ಮಾಡಿಕೊಡುವ ಮಡಿವಾಳಿಗೂ ಆ ಬಳಿಕ ಹೀಗೇ ಮಡಿಲುದುಂಬುವುದುಂಟು. ಕೊನೆಗೆ, ಮೈನೆರೆದ ಹುಡುಗಿಯನ್ನು ಕೂರಿಸಿ ಚಿಗಳಿ, ಕೊಬ್ಬರಿ ಮೊದಲಾದುವನ್ನು ಇಟ್ಟು ಒಸಗೆ ಹಾಕುತ್ತಾರೆ. ಹೀಗೆ ಹುಡುಗಿಯನ್ನು ಆ ಗುಡಿಸಲಲ್ಲಿ ಕುಳ್ಳಿರಿಸಿ ಆಯಾ ಜಾತಿಯವರ ಪದ್ಧತಿ ಹಾಗೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಮೂರರಿಂದ ಹನ್ನೊಂದು ದಿನಗಳವರೆಗೆ ಒಸಗೆ ಹಾಕುವುದುಂಟು. ಕೊನೆಯ ದಿನದ

ಹಿಂದಿನ ಬೆಳಗಿನ ಜಾವವೇ ಆ ಸೊಪ್ಪನ್ನು ಸೋದರಮಾವನೇ ತೆಗೆದುಕೊಂಡು ಹೋಗಿ, ತಿಪ್ಪೆಗೆ ಹಾಕಿ ಸುಡುತ್ತಾನೆ. ಅಂದು ನೆಲ–ಮನೆ ಸಾರಿಸಿ ಎಲ್ಲರೂ ಸ್ನಾನ ಮಡಿ ಮಾಡುತ್ತಾರೆ. ಹುಡುಗಿಗೆ ಮುತ್ತೈದೆಯರು ವಿವಿಧ ಸೊಪ್ಪುಗಳನ್ನು ಹಾಕಿ ಕಾಯಿಸಿದ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ಒಸಗೆ ಹಾಕಿ ಮಡಿಲುದುಂಬುತ್ತಾರೆ. ಅವರ ಪದ್ಧತಿಯಂತೆ ದಾಸಪ್ಪ ಜಂಗಮ ಅಥವಾ ಪುರೋಹಿತ ಆ ಮನೆಗೆ ಹೋಗಿ, ದೇವರನ್ನು ಪೂಜಿಸಿ, ತೀರ್ಥ ನೀಡುತ್ತಾನೆ. ಅಂದು ಬಂಧುಗಳಿಗೆ ಸಿಹಿ ಊಟ ಹಾಕುವುದುಂಟು. ಮೈನೆರೆದಾಕೆಗೆ ಗುಡ್ಲೊಸಗೆ ಹಾಕದಿದ್ದರೆ ಕೇಡು; ಅಕಸ್ಮಾತ್ ಆಕೆ ಸತ್ತರೆ, ಆಗ ಆಕೆಯ ಸಮಾಧಿ ಮೇಲೆ ಆದರೂ ಆ ಒಸಗೆ ಸಾಮಾನು ಹಾಕಲೇಬೇಕೆಂಬ ನಂಬಿಕೆ ಜಿಲ್ಲೆಯ ಕೆಲ ಬೋವಿ ಜನರಲ್ಲಿದೆ. ಋತುಮತಿಯಾದ ಹುಡುಗಿಯನ್ನು ವಿಶೇಷವಾಗಿ ಅಲಂಕರಿಸಿ, ಅಲಂಕೃತ ಮಂಟಪದಲ್ಲಿ ಕುಳ್ಳಿರಿಸಿ, ವಿಜೃಂಭಣೆಯಿಂದ ಒಸಗೆ ಹಾಕಿ ಮನೆಯೊಳಗೆ ಕರೆದುಕೊಳ್ಳುವ ದಿನದಂದು ಸುತ್ತಮುತ್ತಿನ ಗ್ರಾಮಗಳ ಶ್ರೀಮಂತರು, ಜಮೀನುದಾರರು ಮೊದಲಾದವರನ್ನು ಆಹ್ವಾನಿಸುವ ಪದ್ಧತಿ ಹಿಂದೆ ನಟುವರಲ್ಲಿ ಇದ್ದಿತು. ಆಕೆಯ ಮುಂದಿನ ಕೌಟುಂಬಿಕ ಭವಿಷ್ಯ ಬಹುಮಟ್ಟಿಗೆ ಅಂದೇ ತೀರ್ಮಾನವಾಗುತ್ತಿದ್ದುದೂ ಉಂಟು. ಮುಸ್ಲಿಮರಲ್ಲಿ ಮೈನೆರೆದ ಹುಡುಗಿಯನ್ನು ೨೧ ದಿನಗಳವರೆಗೆ ಪರದೆಯಲ್ಲಿರಿಸುತ್ತಾರೆ. ಆ ದಿನಗಳಲ್ಲಿ ಒಂಭತ್ತು, ೧೨, ೨೦ ಹಾಗೂ ೨೧ನೇ ದಿನ ಅನುಭವಸ್ಥ ಹೆಂಗಸರು ನೀರು 'ಮಂತ್ರಿಸಿ' ಆಕೆಯ ತಲೆ ಮೇಲೆ ಹಾಕಿ ಸ್ನಾನ ಮಾಡಿಸುತ್ತಾರೆ. ಅಲ್ಲಿಗೆ ಸೂತಕ ಕಳೆಯುತ್ತದೆ.

**ವಿವಾಹ ಸಂಪ್ರದಾಯಗಳು**

ಹಿಂದೂಗಳಲ್ಲಿ ಅನೇಕ ಜಾತಿ, ಒಳಪಂಗಡಗಳಿದ್ದು, ಅವು ಪ್ರತಿಯೊಂದೂ ವಿವಾಹವನ್ನು ಬದುಕಿನ ಪ್ರಮುಖ ಘಟ್ಟವೆಂದು ಭಾವಿಸಿವೆ. ವ್ಯಕ್ತಿಯ ವೈವಾಹಿಕ ಬದುಕು ಸುಭದ್ರವಾಗಲಿ ಹಾಗೂ ಸಾಮಾಜಿಕ ಬದ್ಧತೆಯನ್ನು ಪಡೆದುಕೊಳ್ಳಲಿ ಎಂಬ ಆಶಯದಿಂದ ವಿವಾಹ ಕಾರ್ಯವನ್ನು ಅನೇಕ ಶಾಸ್ತ್ರ–ವಿಧಿಗಳೊಂದಿಗೆ ನಡೆಸುವ ಪದ್ಧತಿ ಇದೆ. ಈ ಶಾಸ್ತ್ರ ಸಂಪ್ರದಾಯಗಳು ಆಯಾ ಜಾತಿ, ಪ್ರದೇಶದ ಹಿನ್ನೆಲೆಯಲ್ಲಿ ವಿಭಿನ್ನವಾಗಿರುತ್ತವೆ. ಆದ್ದರಿಂದ, ಒಂದು ಪ್ರದೇಶದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅರಿವಿನ ಭಾಗವಾಗಿ ಅಲ್ಲಿನ ವಿವಿಧ ಜನ ವರ್ಗಗಳಲ್ಲಿ ಪ್ರಚಲಿತವಿರುವ ವಿವಾಹ ಸಂಪ್ರದಾಯಗಳ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿದೆ. ಅಂತೆಯೇ ಕೋಲಾರ ಜಿಲ್ಲೆಯಲ್ಲಿ ಕಂಡುಬರುವ ವಿವಾಹ ಸಂಪ್ರದಾಯಗಳ ಬಗ್ಗೆ ಸ್ಥೂಲವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ.

ಹಿಂದೂಗಳಲ್ಲಿ ವಿವಾಹ ಕಾರ್ಯ ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿಯೇ ಜರುಗುವುದು ಹಿಂದಿನ ಪದ್ಧತಿಯಾಗಿದ್ದಿತು. ಕೆಲವರಲ್ಲಿ ಗಂಡಿನ ಮನೆಯಲ್ಲಿ ಇಲ್ಲವೇ ದೇವಾಲಯ ಅಥವಾ ಅಶ್ವತ್ಥ ಜಗಲಿಗಳಲ್ಲಿ ಧಾರೆ ಮುಹೂರ್ತ ನಡೆಯುತ್ತಿದ್ದುದೂ ಉಂಟು. ಈಚೆಗೆ ಬಹುಪಾಲು ವಿವಾಹಗಳು ಪಟ್ಟಣದ ಕಲ್ಯಾಣಮಂಟಪಗಳಲ್ಲಿಯೇ ನೆರವೇರುತ್ತವೆ. ಈ ಬದಲಾವಣೆಗೆ ಅವರವರ ಅನುಕೂಲಗಳು ಹಾಗೂ ಪ್ರತಿಷ್ಠೆಯ ಅಂಶಗಳು ಕಾರಣವಾಗಿವೆ. ಆ ಪರಿಣಾಮವಾಗಿ ಸಾಂಪ್ರದಾಯಿಕ ಊಟೋಪಚಾರದಲ್ಲಿಯೂ ತೀವ್ರ ಬದಲಾವಣೆ ಆಗಿದೆ. ಹಿಂದೂಗಳಲ್ಲಿ ಸಗೋತ್ರ ವಿವಾಹ ನಿಷಿದ್ಧ. ಹಿಂದೆ ಒಳಪಂಗಡಗಳಲ್ಲಿ ಪರಸ್ಪರ ವಿವಾಹ ಸಂಬಂಧ ನಿಷಿದ್ಧವಾಗಿದ್ದರೂ ಈಗ ಆ ನಿರ್ಬಂಧ ಸಡಿಲವಾಗಿದೆ. ಹಿಂದೂಗಳಲ್ಲಿ ಒಂದೇ ರಕ್ತ ಸಂಬಂಧದಲ್ಲಿ ವಿವಾಹ ಆಗುವ ಹೆಣ್ಣು–ಗಂಡು ಪರಸ್ಪರ ಸೋದರಿ–ಸೋದರ ವರಸೆಯವರು ಆಗಿರಬಾರದೆಂಬ ನಿರ್ಬಂಧ ಪ್ರಮುಖವಾಗಿ ಪಾಲನೆಯಾಗುತ್ತದೆ. ಒಂದೇ ಮನೆ ದೇವರ ಒಕ್ಕಲಿನವರು ಪರಸ್ಪರ ಅಣ್ಣ–ತಮ್ಮರೆಂದು ಪರಿಗಣಿತರಾಗುವುದರಿಂದ, ಅವರಲ್ಲಿ ಹೆಣ್ಣು ಕೊಟ್ಟು ತೆಗೆದುಕೊಳ್ಳುವುದು ನಿಷಿದ್ಧವೆಂಬ ಭಾವನೆ ಕೆಲ ಹಿಂದುಳಿದ ವರ್ಗದವರಲ್ಲಿದೆ. ಬ್ರಾಹ್ಮಣರು, ವೈಶ್ಯರು ಮೊದಲಾದ ವೈದಿಕ ಸಂಪ್ರದಾಯದವರ ವಿವಾಹ ವಿಧಿಗಳು ಪುರೋಹಿತರ ಮಾರ್ಗದರ್ಶನದಲ್ಲಿ ನಡೆಯುತ್ತವೆ. ಲಿಂಗಾಯಿತರು ತಮ್ಮದೇ ಪದ್ಧತಿಗಳನ್ನು ಅನುಸರಿಸುತ್ತಾರೆ. ಆದರೆ ಹಿಂದುಳಿದ ವರ್ಗದವರ ವಿವಾಹ ಶಾಸ್ತ್ರಗಳ ಬಹುಭಾಗ ಆಯಾ ಕುಲದ ಮುಖಂಡರ, ಅನುಭವಿಕ ಸ್ತ್ರೀ/ಪುರುಷರ ಮಾರ್ಗದರ್ಶನದಲ್ಲಿ ಆಯಾ ಜಾತಿ ಕಟ್ಟುಪಾಡಿನಂತೆಯೇ ನಡೆದರೂ ಧಾರೆ ಮುಹೂರ್ತದ ಕೆಲ ವಿಧಿಗಳಲ್ಲಿ ಮಾತ್ರ ಬ್ರಾಹ್ಮಣ ಪುರೋಹಿತ ಭಾಗವಹಿಸುತ್ತಾನೆ. ಹಿಂದುಳಿದ ವರ್ಗದವರ ವಿವಾಹ ಕಾರ್ಯಗಳಲ್ಲಿ ಬ್ರಾಹ್ಮಣ ಪುರೋಹಿತ ಭಾಗವಹಿಸುವ ಬಗ್ಗೆ ಹಿಂದೆ ಇದ್ದ ಕೆಲ ನಿರ್ಬಂಧಗಳು ಈಚೆಗೆ ಸಡಿಲವಾಗುತ್ತಿವೆ. ಇಂಥಾ ಭಾಗವಹಿಸುವಿಕೆಯಿಂದಾಗಿ ಬಹುಮಟ್ಟಿಗೆ ಹಿಂದುಳಿದ ವರ್ಗದವರ ಪದ್ಧತಿಗಳಲ್ಲದ ಕಾಶೀಯಾತ್ರೆ, ವರಪೂಜೆ, ಅಂತರಪಟ, ಸಪ್ತಪದಿ, ಅರುಂಧತಿ ನಕ್ಷತ್ರ ತೋರಿಸುವುದು ಮೊದಲಾದ ವೈದಿಕ ವಿಧಿಗಳು ಹಿಂದುಳಿದ ವರ್ಗದವರಲ್ಲಿಯೂ ಸೇರುವಂತಾಗಿವೆ. ಅವರವರ ಜಾತಿ–ಸಂಪ್ರದಾಯಕ್ಕೆ ಹಾಗೂ ಸ್ಥಳೀಯ

ಪ್ರಭಾವಕ್ಕೆ ಅನುಗುಣವಾಗಿ ಕೆಲವೊಂದು ಶಾಸ್ತ್ರ-ಆಚಾರಗಳು ವ್ಯತ್ಯಾಸ ಆಗಬಹುದಾದರೂ ಒಟ್ಟಾರೆ, ಕೆಲವೊಂದು ಪ್ರಮುಖ ಶಾಸ್ತ್ರಗಳು ಎಲ್ಲಾ ಜಾತಿಗಳಲ್ಲಿಯೂ ಸಾಮಾನ್ಯವಾಗಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಅವುಗಳಲ್ಲಿ ಮನೆ ನೋಡುವುದು, ಅರಿಸಿನ-ಕುಂಕುಮ ಕೊಡುವುದು (ನಿಶ್ಚಿತಾರ್ಥ), ಕಳಸ ಪೂಜುವುದು, ಗಂಗೆ ತರುವುದು, ಬೀಗರನ್ನು ಎದುರುಗೊಳ್ಳುವುದು, ಭತ್ತ ಕುಟ್ಟುವುದು, ಅರಿಸಿನ ಹಚ್ಚುವುದು, ಕಾಲುಉಗುರು ತೆಗೆಯುವುದು, ಮಿಂಚು, ಕಾಲುಂಗುರ ಇಡುವುದು, ಕಂಕಣದಾರ ಕಟ್ಟುವುದು, ಮಲ್ನೀರು ಮೇಯುವುದು, ಉಡಿಕೆ ನಡೆಯುವುದು, ಎದುರು ನೆಲ್ಲು ಎರಚುವುದು, ತಾಳಿ ಕಟ್ಟುವುದು, ಧಾರೆ, ಶಿವಾಸನ, ಧೂಳು ಮೆರವಣಿಗೆ, ಮನೆ ತುಂಬಿಸಿಕೊಳ್ಳುವುದು, ಮರವಳಿ (ಮರೂಲಿ) ಹಾಗೂ ಪ್ರಸ್ಥದ ಶಾಸ್ತ್ರ- ಸಂಪ್ರದಾಯಗಳು ಮುಖ್ಯವಾಗಿವೆ. ಹಿಂದುಳಿದ ವರ್ಗದವರಲ್ಲಿ ವಧುವಿಗೆ ತೆರ (ಓಲಿ) ಕೊಡುವ ಸಂಪ್ರದಾಯವೂ ಇದೆ.

ಹಿಂದಿನ ಸಂಪ್ರದಾಯದಂತೆ ಧಾರೆಶಾಸ್ತ್ರದಲ್ಲಿ ಅಂತರಪಟವನ್ನು ಸರಿಸುವವರೆಗೆ ವಧೂವರರು ಪರಸ್ಪರ ಮುಖ ನೋಡಬಾರದೆಂಬ ಪದ್ಧತಿ ಇದ್ದಿತು. ಹಿಂದೆ ಮೂರು ದಿನ, ಐದು ದಿನಗಳವರೆಗೆ ವಿವಾಹ ಶಾಸ್ತ್ರಗಳು ನಡೆಯುತ್ತಿದ್ದವು. ಈಚೆಗೆ ಬಹಳಷ್ಟು ಆಚಾರಗಳು ತಪ್ಪಿಹೋಗಿವೆ ಅಥವಾ ಬದಲಾಗಿವೆ. ಹರಿಣೆ (ಅರವೇಣಿ) ಪೂಜುವುದು, ಓಕುಳಿ ಆಡುವುದು ಮೊದಲಾದುವು ಬಿಟ್ಟುಹೋದ ಕೆಲ ಉದಾಹರಣೆಗಳಾದರೆ, ಆರತಕ್ಷತೆ ಮೊದಲಾದುವು ಅನ್ಯ ಪ್ರಭಾವಗಳಿಂದ ಬಂದು ಸೇರಿದ ಈಚಿನ ಸಂಪ್ರದಾಯಗಳಾಗಿವೆ. ಕಳಸ ಪೂಜುವುದು ಹಿಂದುಳಿದ ವರ್ಗದವರ ವಿವಾಹಗಳಲ್ಲಿ ಒಂದು ಪ್ರಧಾನ ವಿಧಿ. ಕಳಸದಲ್ಲಿ ಹೊಸ ನೀರು ತುಂಬಿ, ಅದರ ಬಾಯಿಗೆ ಅಡಕೆ ಹೊಂಬಾಳೆ ಇಟ್ಟು ಅಲಂಕರಿಸಲಾಗುತ್ತದೆ. ಕಳಸದೊಂದಿಗೆ ಕನ್ನಡಿ, ಬಿಚ್ಚೋಲೆ, ಬಾಚಣಿಗೆ ಇತ್ಯಾದಿ ಸಾಮಗ್ರಿಗಳನ್ನು ಇರಿಸಲಾಗಿರುತ್ತದೆ. ಕಳಸ ಫಲವಂತಿಕೆಯ ಸಂಕೇತವಾಗುತ್ತದೆ. ಹಾಗೆಯೇ ಅದನ್ನು ಮನೆದೇವರ ಪ್ರತೀಕವೆಂದೂ ಭಾವಿಸಲಾಗುತ್ತದೆ. ವಿವಾಹದ ಎಲ್ಲಾ ವಿಧಿಗಳೂ ಈ ಕಳಸದ ಸಮಕ್ಷಮದಲ್ಲಿಯೇ ನೆರವೇರಬೇಕೆಂಬ ಪದ್ಧತಿ ಇದೆ. ಇವರ ವಿವಾಹ ಕಾರ್ಯದಲ್ಲಿ ಸೋಬಾನೆ ಹಾಡುಗಳಿಗೂ ವಿಶೇಷ ಪ್ರಾಶಸ್ತ್ಯವಿದೆ. ಧಾರೆ ಮುಹೂರ್ತ ಮಾಡುವಾಗ ಕುಲದ ಹಿರಿಯನು ಸೋಬಕ್ಕಿ ಸೋಬಾನೆ... ಎಂದು ಹರಕೆ ನುಡಿಗಳ ಮುದ್ರಿಕೆ ಹೇಳುವುದು ಪದ್ಧತಿಯಾಗಿದ್ದಿತು. ಬ್ರಾಹ್ಮಣರಲ್ಲಿ ಸಾಲಂಕೃತ ಕನ್ಯಾದಾನದ ಸಂಪ್ರದಾಯವಿದೆ. ಇವರಲ್ಲಿ ವರಪೂಜೆ, ನಾಂದಿ, ಕಾಶೀಯಾತ್ರೆ, ಧಾರೆ ಎರೆಯುವುದು, ಸಪ್ತಪದಿ, ಲಾಜಹೋಮ, ಭೂಮ, ಮನೆತುಂಬಿಸಿಕೊಳ್ಳುವುದು ಮೊದಲಾದವು ವಿವಾಹದ ಪ್ರಮುಖ ಶಾಸ್ತ್ರಗಳಾಗಿರುತ್ತವೆ. ಲಿಂಗಾಯಿತರಲ್ಲಿ ಪಂಚಕಲಶ ಸ್ಥಾಪನೆ, ಸುರಿಗೆ ಸುತ್ತುವುದು, ಅರಿಸಿನ ಹಚ್ಚುವುದು ಮೊದಲಾದ ಶಾಸ್ತ್ರಗಳೊಂದಿಗೆ ವೀರಭದ್ರನ ಆರಾಧಕರಲ್ಲಿ ಗುಗ್ಗುಳ ಸೇವೆ ವಿಶೇಷವಾಗಿರುತ್ತದೆ. ತಾಳಿ ಕಟ್ಟುವಾಗ ವರನು ತನ್ನ ಬಲಗಾಲಿನ ಹೆಬ್ಬೆರಳಿನಿಂದ ವಧುವಿನ ಎಡಗಾಲ ಹೆಬ್ಬೆರಳನ್ನು ಮೆಟ್ಟಿಕೊಂಡು ತಾಳಿಕಟ್ಟುವ ಕ್ರಮ ಸಾಮಾನ್ಯವಾಗಿ ಪಿಚ್ಚುಕುಂಟ (ಹೆಳವ) ಮೊದಲಾದವರಲ್ಲಿ ರೂಢಿಯಲ್ಲಿದೆ. ಧಾರೆ ಆದ ಬಳಿಕ ಶಿವಾಸನ ಶಾಸ್ತ್ರದಲ್ಲಿ ತೆಂಡೆ ಯಜಮಾನರು ಕರಿ ಕಂಬಳಿ ಗದ್ದುಗೆ ಹೂಡಿ ಅದರ ಮೇಲೆ ವೀಳ್ಯದೆಲೆ ಹಾಗೂ ಅಡಕೆ ಇಟ್ಟು ಪೂಜೆ ಮಾಡಿ, ತಮ್ಮ ಬೆಡಗುಗಳನ್ನು ಗುರುತಿಸಿಕೊಳ್ಳುವ, ಓಲಿ ಕೊಡುವುದರಲ್ಲಿ ಏನಾದರೂ ಸಮಸ್ಯೆಗಳಿದ್ದರೆ ಪರಿಹರಿಸಿಕೊಳ್ಳುವ ಪದ್ಧತಿ ಇದೆ. ಕೊನೆಗೆ, ಮನೆದೇವರು, ಕುಲದ ಹಿರಿಯರು ಮೊದಲಾದವರಿಗೆ ವೀಳ್ಯ ಹಂಚಲಾಗುತ್ತದೆ. ಸಂಜೆ, ಊರಿನಲ್ಲಿ ವಧೂವರರ ಮೆರವಣಿಗೆ ಆಗಿ, ಮನೆ ತುಂಬಿಸಿಕೊಳ್ಳುವ ಸಂದರ್ಭದಲ್ಲಿ ಬಾಗಿಲು ತಡೆವ ಶಾಸ್ತ್ರ ಮಾಡುತ್ತಾರೆ. ಅಲ್ಲಿ ವಧುವು ಮುಂಬಾಗಿಲಲ್ಲಿ ನಿಂತು, ವೀಳ್ಯದಲ್ಲಿ ಇಟ್ಟ ಕಾಲುಂಗುರವನ್ನು ಎದುರಿಗೆ ಇರಿಸಿದ ತಣಿಗೆಗೆ ತಾಗುವಂತೆ ಎಸೆಯಬೇಕು. ಆಗ ನಮ್ಮತ್ತೆ ಮಾವನ ಮನೆ ಹಾಲುಕ್ಕಿದಂಗೆ ಉಕ್ಕಲಿ ಎಂದು ಹೇಳಿಸುವ ಪದ್ಧತಿ ಇದೆ. ವರನೂ ಹೀಗೇ ಮಾಡಬೇಕು. ಬಳಿಕ ಗಂಡಿನ ಭಾವಮೈದುನ (ಕೆಲವರಲ್ಲಿ ಆತನ ಸೋದರಿ) ಮುಂದೆ ಅವರಿಗೆ ಹುಟ್ಟುವ ಮಗಳನ್ನು ತಮ್ಮ ಮನೆಗೆ ಕೊಟ್ಟು ಸಂಬಂಧ ಬೆಳೆಸಬೇಕೆಂದು ಕೋರುವ ನಡವಳಿಕೆಯೂ ಇದೆ. ಧಾರೆ ಬಳಿಕ ನವದಂಪತಿಗಳು ಮನೆಯೊಳಗೆ ಬಂದಮೇಲೆ, ಸೂರ್ಯ ಚಂದ್ರರ ಆಣೆಯಾಗಿ ಮಾತಿಗೆ ತಪ್ಪಲ್ಲ ಎಂದು ಹೇಳಿ, ಬೆಣ್ಣೆಯಲ್ಲಿ ಕಲೆಸಿದ ಅನ್ನದ ತುತ್ತನ್ನು ಇಬ್ಬರೂ ಪರಸ್ಪರ ತಿನ್ನಿಸಿ ಅನ್ನದ ಭಾಷೆ ತೆಗೆದುಕೊಳ್ಳುವ ಸಂಪ್ರದಾಯವೂ ಹೆಳವರಲ್ಲಿದೆ.

ಹೀಗೆ, ಕೆಲವೊಂದು ಶಾಸ್ತ್ರಗಳು ಸಾಮಾನ್ಯವಾಗಿದ್ದರೂ, ಕೆಲವರಲ್ಲಿ ವಿಶಿಷ್ಟವೆನ್ನಬಹುದಾದ ಆಚರಣೆಗಳೂ ರೂಢಿಯಲ್ಲಿವೆ. ಕೋಲಾರ ತಾಲೂಕಿನ ತೊಂಡಾಲ ಹಾಗೂ ನಾಯಕರ ಹಳ್ಳಿಯಲ್ಲಿನ ಮುಸುಕು ಒಕ್ಕಲಿಗರ ಮದುವೆಯ ಒಂದು ವಿಶಿಷ್ಟ ಶಾಸ್ತ್ರ ಇಲ್ಲಿ ಉಲ್ಲೇಖನೀಯವಾಗಿದೆ: ಚಪ್ಪರದ ದಿನ ಮದುವೆ ಗಂಡು ಸಂಜೆಯವರೆಗೆ ಉಪವಾಸ ಇದ್ದು, ಆನಂತರ ಹುಲಿವೇಷ

ಹಾಕಿಕೊಂಡು ವೀರಗಾರರ ಗುಡಿಗೆ ಪೂಜೆಗೆ ಹೋಗಬೇಕು. ಅಂದರೆ, ಸಂಜೆ ಸ್ನಾನದ ಬಳಿಕ ಗಂಧ, ಅರಿಸಿನ, ಕುಂಕುಮಗಳಿಂದ ಆತನ ಮೈಮೇಲೆ ಹುಲಿಪಟ್ಟೆಗಳಂತೆ ಬರೆದು ಹುಲಿವೇಷ ಹಾಕಲಾಗುತ್ತದೆ. ಆತ ಲಂಗೋಟಿ, ನಡುಪಟ್ಟಿ, ತಲೆಗೆ ವಸ್ತ್ರ ಮಾತ್ರ ಧರಿಸುತ್ತಾನೆ ಮತ್ತು ಅವು ಕೆಂಪು ಬಣ್ಣದ್ದಾಗಿರುತ್ತವೆ. ಬಾಯಿಗೆ ಬಟ್ಟೆ ಕಟ್ಟಿಕೊಂಡಿರುತ್ತಾನೆ. ಚಪ್ಪರದ ಪೂಜೆ ನೆರವೇರಿಸಿದ ಬಳಿಕ ಕೈಗಳಲ್ಲಿ ಎರಡು ಕತ್ತಿಗಳನ್ನು ಹಿಡಿದು ನಡೆಯುತ್ತಾನೆ. ಹೂ ಮತ್ತು ಇತರ ಪೂಜಾ ಸಾಮಗ್ರಿ ಹೊತ್ತ ಆತನ ತಮ್ಮ ಹಿಂದೆ ಹೋಗುತ್ತಾನೆ. ಇಬ್ಬರೂ ಯಾರ ಜೊತೆಯಲ್ಲೂ ಮಾತನಾಡುವುದಿಲ್ಲ. ಅವರು ಹಾಗೆ ಹೋಗುವಾಗ ಊರ ಮುಂದೆ ಇದ್ದ ಹೆಣ್ಣಿನವರ ದಿಬ್ಬಣ ಈ ಗಂಡನ್ನು ನೋಡಬೇಕು. ವೀರಗಾರರ ಗುಡಿಯಲ್ಲಿ ಪೂಜೆಯಾದ ನಂತರ ವಾಪಸು ಬರುತ್ತಾರೆ. ಈ ರೀತಿಯ ಆಚರಣೆಗೆ ಹಿಂದೆ ಅವರ ವಂಶದಲ್ಲಿ ನಡೆದ ಒಂದು ಘಟನೆ ಕಾರಣ ಎಂದು ಅವರು ನಂಬಿದ್ದಾರೆ (ಕನ್ನಡ ಜಾನಪದ ವಿಶ್ವಕೋಶ, ಸಂಪುಟ–೧). ವಿವಾಹ ಸಂದರ್ಭದಲ್ಲಿ ವೀರರಿಗೆ ಪೂಜೆ ಸಲ್ಲಿಸುವ ಪದ್ಧತಿ ಮಾದಿಗರು ಹಾಗೂ ಗೊಲ್ಲರಲ್ಲಿಯೂ ಇದ್ದು, ಕ್ರಮಗಳು ಮಾತ್ರ ವಿಭಿನ್ನವಾಗಿರುತ್ತವೆ (ನೋಡಿ: ಸಿಂದ್ ಮಾದಿಗರ ಸಂಸ್ಕೃತಿ, ಪು.೨೮).

ವಿವಾಹದ ಸೂಚಕವಾಗಿ ತಾಳಿ ಧರಿಸುವ ಪದ್ಧತಿ ಹಿಂದೂಗಳಲ್ಲಿದೆ. ಮುಸ್ಲಿಂ ಮತ್ತು ಕ್ರೈಸ್ತಿಯನ್ನರಲ್ಲಿಯೂ ತಾಳಿ ಧರಿಸುವ ಅಭ್ಯಾಸ ಕಂಡುಬರುತ್ತಿದೆ. ಕೋಲಾರ ಭಾಗದಲ್ಲಿ ತಾಳಿಯನ್ನು ಬಟ್ಟು ಎಂದು ಕರೆಯಲಾಗುತ್ತದೆ. ಈ ಬಟ್ಟಿನ ಆಕಾರ ಮತ್ತು ಅದರ ಮೇಲಿನ ಚಿಹ್ನೆಗಳು ಜಾತಿಯಿಂದ ಜಾತಿಗೆ ವಿಭಿನ್ನವಾಗುವುದುಂಟು. ಒಂದೇ ಜಾತಿಯ ಒಳಪಂಗಡಗಳಲ್ಲಿಯೂ ತಾಳಿಗಳು ಹೇಗೆ ಭಿನ್ನವಾಗಬಹುದು ಎಂಬುದಕ್ಕೆ ಜಿಲ್ಲೆಯ ಕ್ಷೌರಿಕರಲ್ಲಿನ ನಡವಳಿಕೆಯನ್ನು ಗಮನಿಸಬಹುದು. ಇವರಲ್ಲಿ ಮೋಡಿಕಾರ್ಲು ಮತ್ತು ನಾಮಧಾರಿಗಳೆಂಬ ಒಳಪಂಗಡಗಳಿದ್ದು ಅವುಗಳಲ್ಲಿ ನಾಮಧಾರಿಗಳು ಪೆದ್ದಬಟ್ಟು (ದೊಡ್ಡ ತಾಳಿ) ಧರಿಸಿದರೆ, ಮೋಡಿಕಾರ್ಲು ಚಿನ್ನಬಟ್ಟು (ಚಿಕ್ಕತಾಳಿ) ಧರಿಸಬೇಕಾಗುತ್ತದೆ. ಹಿಂದೆ ನಟುವರಲ್ಲಿ ವಿವಾಹದ ಸಂಕೇತವಾಗಿ ಹೆಣ್ಣಿಗೆ 'ಲಕ್ಷ್ಮಿ ಪೂಜೆ' ಹಾಗೂ 'ಗೆಜ್ಜೆ ಪೂಜೆ'ಗಳು ನಡೆಯುತ್ತಿದ್ದವು. ವರನಿಗೆ ಬದಲು ಹಿರಿಯ ನಟುವಾಂಗ ಮಹಿಳೆಯೇ ಹೆಣ್ಣಿಗೆ ತಾಳಿ ಕಟ್ಟುವ ಸಂಪ್ರದಾಯವಿದ್ದಿತು. ಕುರುಬರಲ್ಲಿ (ಗೌರಿಬಿದನೂರು ಭಾಗ) ಗಂಡಿನವರು ಕೊಡುವ ಐದೆಕಡಗ (ಸಣ್ಣ ಪಟ್ಟಿಯಂತಹ ಬೆಳ್ಳಿ ಬಳೆ) ವನ್ನು ಆಕೆ ಸದಾ ತನ್ನ ಬಲಗೈಲಿ ಧರಿಸಬೇಕು. ಇದು ಅವರ ಜಾತಿಯ ಸೂಚಕವಾಗಿಯೂ ಇರುತ್ತದೆ ಎಂದು ತಿಳಿದುಬಂದಿದೆ. ಕೃಷ್ಣ ಮುದ್ರೆ ಅಥವಾ ಗೊಲ್ಲ ಕಡಗ ಧರಿಸುವ ಗೊಲ್ಲ ಮಹಿಳೆಯರು ತಮ್ಮ ಪತಿ ನಿಧನ ಹೊಂದಿದರೂ ತಾವು ಮುತ್ತೈದೆಯರೆಂದೇ ಭಾವಿಸುವ ವಿಶಿಷ್ಟ ನಡವಳಿಕೆ ಇಟ್ಟುಕೊಂಡಿದ್ದಾರೆ. ತಾಳಿಗಳಲ್ಲಿ ಸಾಮಾನ್ಯವಾಗಿ ತಾಯಿ ಮನೆ ತಾಳಿ ಹಾಗೂ ಗಂಡನ ಮನೆ ತಾಳಿ ಎಂದು ಎರಡು ಇರುತ್ತವೆ. ಇವುಗಳಲ್ಲಿ ಗಂಡನ ಮನೆಯವರು ನೀಡುವ ತಾಳಿಯನ್ನು ವರನು ಧಾರೆ ಮುಹೂರ್ತದ ಸಂದರ್ಭದಲ್ಲಿ ವಧುವಿನ ಕೊರಳಿಗೆ ಕಟ್ಟುತ್ತಾನೆ. ಆದರೆ, ತಾಯಿ ಮನೆ ತಾಳಿಯನ್ನು ಅದಕ್ಕೆ ಮೊದಲೇ ಆಕೆ ಧರಿಸಿರುತ್ತಾಳೆ. ಉದಾಹರಣೆಗೆ ನಾಯಕರಲ್ಲಿ ಚಪ್ಪರ ಶಾಸ್ತ್ರದ ಸಂಜೆ ಹುತ್ತದ ಪೂಜೆಗೆ ಹೋದಾಗ, ತಾಯಿಯೇ ಕನ್ಯೆಯ ಕೊರಳಿಗೆ ತವರುಮನೆ ಬಟ್ಟನ್ನು ಕಟ್ಟುತ್ತಾಳೆ. ಸಾಮಾನ್ಯವಾಗಿ ವಿವಾಹವಾದಾಗ ತಾಳಿಯು ಅರಿಸಿನದ ದಾರದೊಂದಿಗೇ ಇರುತ್ತದೆ. ಕೆಲವು ದಿನಗಳ ಬಳಿಕವಷ್ಟೇ ಕರಿಮಣಿ ಅಥವಾ ಚಿನ್ನದ ಸರದೊಂದಿಗೆ ಸೇರಿಸಿ ಧರಿಸಿಕೊಳ್ಳುತ್ತಾರೆ.

ಹಿಂದುಳಿದ ವರ್ಗದವರ ವಿವಾಹಗಳಲ್ಲಿ ವಧುವಿನ ಸೋದರ ಮಾವ (ತಾಯಿಯ ಸೋದರ)ನಿಗೆ ವಿಶೇಷ ಹಕ್ಕು ಹಾಗೂ ಪ್ರಾಧಾನ್ಯಗಳಿರುತ್ತವೆ. ಕನ್ಯೆಯ ವಿವಾಹ ಕುರಿತು ಹೊರಗಿನವರೊಡನೆ ಮಾತುಕತೆ ನಡೆಸುವ ಮೊದಲು ಸೋದರ ಸಂಬಂಧದಲ್ಲಿ ಮಾತನಾಡಿ ಅಭಿಪ್ರಾಯ ತಿಳಿಯಬೇಕೆಂಬುದು ರೂಢಿಯಲ್ಲಿ ನಡೆದುಬಂದ ಅಲಿಖಿತ ನಿಯಮವಾಗಿದೆ. ಅಂದರೆ, ಆ ಹೆಣ್ಣನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಮೊದಲ ಅವಕಾಶ ಆ ಸೋದರಮಾವನ ಮನೆಯವರದಾಗಿರುತ್ತದೆ. ಹುಡುಗಿ ಋತುಮತಿಯಾದಾಗ ಆಕೆಯ ಸೋದರ ಮಾವನೇ ಹಸಿರು ಗುಡಿಸಲು ನಿರ್ಮಿಸಬೇಕು. ಅಲ್ಲಿ ಹಾಕುವ ಮೊದಲ ಒಸಗೆಯೂ ಆತನಿಗೇ ಸಲ್ಲುತ್ತದೆ. ವಿವಾಹದಲ್ಲಿ ಭತ್ತ ಕುಟ್ಟುವುದು, ವಧೂವರರಿಗೆ ಅರಿಸಿನ ಹಚ್ಚುವುದು, ಕಾಲುಂಗುರ ತೊಡಿಸುವುದು, ಧಾರೆಗೆ ಕರೆತರುವುದು ಮೊದಲಾದ ಆಚರಣೆಗಳನ್ನು ವಧೂ–ವರರ ಸೋದರಮಾವ ಹಾಗೂ ಸೋದರತ್ತೆಯರೇ ನಡೆಸಿಕೊಡಬೇಕಾಗುತ್ತದೆ. ವಿವಾಹ ಕಾರ್ಯದಲ್ಲಿ ಅಗಸರು, ಕ್ಷೌರಿಕರು, ಚಲವಾದಿಗಳೂ ಕೆಲವೊಂದು ವಿಶೇಷ ಕಾರ್ಯಗಳನ್ನು ನಿರ್ವಹಿಸಬೇಕಾದ ವ್ಯವಸ್ಥೆ ಇರುತ್ತದೆ. ವಿವಾಹ ನಿಶ್ಚಿತವಾದ ಬಳಿಕ ಮಡಿವಾಳಿಯು ಗಂಡಿನ ಮನೆಯವರು ನೀಡುವ ಒಸಗೆ ಸಾಮಾನನ್ನು ತೆಗೆದುಕೊಂಡು ಹೋಗಿ

ಹೆಣ್ಣಿನವರಿಗೆ ಮುಟ್ಟಿಸುವ, ಪ್ರತಿಯಾಗಿ ಅವರು ನೀಡುವ ಒಸಗೆಯನ್ನು ಇವರಿಗೆ ತಂದುಕೊಡುವ ಕೆಲಸ ಮಾಡಬೇಕಾಗುತ್ತದೆ. ವಿವಾಹದಲ್ಲಿ ಧಾರೆ ಕಂಬಕ್ಕೆ ಕಟ್ಟಲುಬೇಕಾದ ಬಿಳಿವಸ್ತ್ರವನ್ನು ಈತನೇ ಒದಗಿಸಬೇಕಾಗುತ್ತದೆ. ಮೆರವಣಿಗೆಗಳಲ್ಲಿ ಪಂಜು ಹಿಡಿಯಬೇಕಾಗುತ್ತದೆ. ಅರಿಸಿನ ಶಾಸ್ತ್ರದಂದು ಕ್ಷೌರಿಕನು ವಧೂವರರಿಗೆ ಉಗುರು ತೆಗೆವ ಶಾಸ್ತ್ರ ನೆರವೇರಿಸಬೇಕಾಗುತ್ತದೆ: ಅವರ ಪಾದ ಹಾಗೂ ಹಸ್ತದ ಬೆರಳುಗಳ ತುದಿಗೆ ಹಾಲು, ಗಂಜಲದಲ್ಲಿ ಅದ್ದಿದ ಗರಿಕೆ ಪತ್ರೆಯಿಂದ ಗೆರೆ ಎಳೆದು (ಸೋಕಿಸಿ) ಉಗುರು ತೆಗೆವಶಾಸ್ತ್ರ ಮಾಡುತ್ತಾನೆ. ಆ ಸಂದರ್ಭದಲ್ಲಿ ಕೆಲವರಲ್ಲಿ ಹರಳೆಣ್ಣೆ, ಸೀಗೆಪುಡಿ, ಹಾಲಿನ ಮಿಶ್ರಣವನ್ನು ವಧೂ–ವರರ ನೆತ್ತಿಗೆ ಹಚ್ಚುವುದೂ ಉಂಟು. ಗಾಣಿಗರು, ಕ್ಷೌರಿಕರು ಮೊದಲಾದವರ ಸಾಂಪ್ರದಾಯಿಕ ಆಚರಣೆಗಳಲ್ಲಿ ಚಲವಾದಿಯು ತನ್ನ ಗಂಟೆ–ಬಟ್ಟಲುಗಳೊಂದಿಗೆ ಸಹಭಾಗಿಯಾಗಬೇಕಾಗುತ್ತದೆ. ಈ ಕಾರ್ಯಗಳಿಗೆ ಪ್ರತಿಯಾಗಿ ಅವರಿಗೆ ನಿಗದಿಯಂತೆ ಅಕ್ಕಿ, ಬೇಳೆ, ವಸ್ತ್ರ ಹಣ ಇತ್ಯಾದಿಗಳನ್ನು ನೀಡಲಾಗುತ್ತದೆ.

ಮುಸ್ಲಿಮರಲ್ಲಿ ಖಾಜಿಯು ವಿವಾಹ ವಿಧಿಗಳ ನೇತೃತ್ವ ವಹಿಸುವನು. ಹೆಣ್ಣಿನ ಕಡೆಯ ವಕೀಲ ಹಾಗೂ ಗವಾ (ಸಾಕ್ಷಿ) ಮತ್ತು ಗಂಡಿನ ಕಡೆಯ ಗವಾರ ಸಮ್ಮುಖದಲ್ಲಿ ವಧೂ–ವರರ ಕಬೂಲ್ (ಒಪ್ಪಿಗೆ) ಪಡೆಯುವುದು ಇವರಲ್ಲಿ ಬಹುಮುಖ್ಯ ಕಟ್ಟಳೆಯಾಗಿರುತ್ತದೆ. ಈ ಒಪ್ಪಂದವು ಅದಕ್ಕಾಗಿ ಇರಿಸಿರುವ ದಫ್ತರ್‌ನಲ್ಲಿ ಸಾಕ್ಷಿಗಳ ಸಹಿಯೊಂದಿಗೆ ದಾಖಲಾಗುತ್ತದೆ. ವರನು ವಧುವಿಗೆ ಮೆಹರ್ (ಉಡುಗೊರೆ) ನೀಡುವುದು, ಖಾಜಿಯು ನಿಖಾ ಓದುವುದು, ವಿವಾಹದ ಬಳಿಕ ವಲೀಮ (ಬೀಗರ ಔತಣ)ಕ್ಕೆ ಹೋಗುವುದು, ನವದಂಪತಿಗಳು ಮೂರು ಶುಕ್ರವಾರಗಳು ಬಂಧುಗಳ ಮನೆಗೆ ಔತಣಕ್ಕೆ ಹೋಗುವುದು (ಜುಮ್ಮಾಗಿ) ಮೊದಲಾದ ಶಾಸ್ತ್ರಗಳು ನಡೆಯುತ್ತವೆ. ಕರಿಮಣಿಸರವನ್ನು ವರನಿಗೆ ಬದಲು ಹಿರಿಯ ಮುತ್ತೈದೆಯೊಬ್ಬಳು ವಧುವಿನ ಕೊರಳಿಗೆ ಕಟ್ಟಬೇಕಾಗುತ್ತದೆ. ಕ್ರೈಸ್ತರಲ್ಲಿ ವಿವಾಹ ವಿಧಿಗಳನ್ನು ಗಂಡಿನವರ ಪ್ಯಾರಿಷ್ ಚರ್ಚ್‌ನಲ್ಲಿ ನಡೆಸಲಾಗುತ್ತದೆ. ನಿಶ್ಚಿತಾರ್ಥದ ಸಂಕೇತವಾಗಿ ವಧೂವರರು ಉಂಗುರಗಳನ್ನು ಪರಸ್ಪರ ತೊಡಿಸುತ್ತಾರೆ. ಈ ವಿವಾಹ ನಿಶ್ಚಯದ ಸುದ್ದಿಯನ್ನು ಚರ್ಚಿನಲ್ಲಿ ಪ್ರಾರ್ಥನೆ ಬಳಿಕ ಪ್ರಕಟಿಸುವ ಪದ್ಧತಿ (ಬಾನ್) ಇದೆ. ನಿಗದಿತ ದಿನದಂದು ಪಾದ್ರಿಯು ವಿಧಿವತ್ತಾಗಿ ವಿವಾಹ ಕಟ್ಟಳೆಗಳನ್ನು ನಡೆಸಿಕೊಡುತ್ತಾನೆ. ಮದುವೆಯ ಪುಸ್ತಕದಲ್ಲಿ ಸಾಕ್ಷಿದಾರರೊಂದಿಗೆ ವಧೂವರರು ಸಹಿ ಮಾಡುವ ಪದ್ಧತಿ ಇವರಲ್ಲಿಯೂ ಇದೆ.

**ಸೋಲಿಗರಲ್ಲಿ ವಿವಾಹ:** ಸೋಲಿಗರು ಮೂಲತಃ ಅಡವಿ ವಾಸಿ ಬುಡಕಟ್ಟು ಜನವರ್ಗಕ್ಕೆ ಸೇರಿದವರು. ಈಚೆಗೆ ಊರು ಸೇರಿದವರು ಊರು ಸೋಲಿಗರಾಗಿದ್ದಾರೆ. ಈ ಜನವರ್ಗದವರ ವಿವಾಹ ಸಂಪ್ರದಾಯಗಳ ಮೇಲೆ ಇತರ ಜಾತಿಗಳ ಪ್ರಭಾವ ಆದಂತೆ ತೋರುತ್ತದೆ. ಕೋಲಾರ ಭಾಗದ ಊರು ಸೋಲಿಗರ (ಪೂಸಲವರು) ವಿವಾಹದಲ್ಲಿ ಕುಂಬರ ಶಾಸ್ತ್ರ (ಕುಂಬಾರನಿಂದ ಅರವೇಣಿ ತರುವುದು), ವಸಂತಶಾಸ್ತ್ರ (ಓಕಳಿ ಎರಚುವುದು), ಪುಟ್ಟು ಬಂಗಾರು ಶಾಸ್ತ್ರ (ಧಾರೆ ಆದ ಸಂಜೆಗೆ ಊರಾಚೆ ಹುತ್ತದ ಬಳಿ ಹೋಗಿ, ಹುತ್ತದ ಮಣ್ಣಿನಿಂದ ಗಂಡು ಮೂರು ಮುದ್ದೆ ಮಾಡುವ ಹೊತ್ತಿಗೆ ಹೆಣ್ಣು ದೂರ ಓಡುವುದು, ಗಂಡು ಆಕೆಯನ್ನು ಕರೆತಂದು ಆ ಮುದ್ದೆಗಳನ್ನು ಹೊರಿಸಿಕೊಂಡು ಬರುವುದು), ಶಿವಾಸನ (ಕುಲಮುಖ್ಯರಿಗೆ ತಾಂಬೂಲ ಹಂಚುವುದು) ಮೊದಲಾದ ಶಾಸ್ತ್ರಾಚರಣೆಗಳನ್ನು ನಡೆಸುತ್ತಾರೆ.

ವಿಶೇಷ ಆಶಯದ ಇಂತಹ ಹಲವಾರು ನಂಬಿಕೆ, ಶಾಸ್ತ್ರಗಳು ಸಾಂಪ್ರದಾಯಿಕ ವಿವಾಹ ಪದ್ಧತಿಯಲ್ಲಿ ಕಾಣಬರುತ್ತದೆ. ಪುನರ್ ವಿವಾಹಗಳು ಹೆಚ್ಚಿನ ಶಾಸ್ತ್ರಾಚರಣೆಗಳಿರದೆ ನಡೆಯುತ್ತವೆ. ಈಚೆಗೆ ಸರಳ ವಿವಾಹ, ಸಾಮೂಹಿಕ ವಿವಾಹಗಳು ಅಲ್ಲಲ್ಲಿ ನಡೆಯುವುದುಂಟು. ಸರ್ಕಾರವು ಅಂತರ್ಜಾತೀಯ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಇಂತಹ ವಿವಾಹಗಳ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ಇಪ್ಪತ್ತೈದು ಸಾವಿರ ರೂ.ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ (ವಿವರಕ್ಕೆ ೧೬ನೇ ಅಧ್ಯಾಯ ನೋಡಿರಿ). ಭಾರತ ಸರ್ಕಾರದ ವಿವಾಹ ಕಾಯ್ದೆಯಂತೆ ಎಲ್ಲಾ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಾಗುತ್ತದೆ. ಕೋಲಾರ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ೧೯೯೯ ರಿಂದ ೨೦೦೫ರವರೆಗೆ ನೋಂದಣಿಯಾಗಿರುವ ದತ್ತು ಸ್ವೀಕಾರ ಹಾಗೂ ವಿವಾಹಗಳ ಅಂಕಿ–ಅಂಶಗಳನ್ನು ಕೋಷ್ಟಕ ೩.೧೮ರಲ್ಲಿ ನೀಡಲಾಗಿದೆ

**ಕೋಷ್ಟಕ ೩.೧೮**

| ಕ್ರ. ಸಂ. | ಉಪ ನೋಂದಣಿ ಕಛೇರಿ | ೧೯೯೯–೨೦೦೦ ವಿವಾಹ | ದತ್ತು ಸ್ವೀಕಾರ | ೨೦೦೦–೨೦೦೧ ವಿವಾಹ | ದತ್ತು ಸ್ವೀಕಾರ | ೨೦೦೧–೨೦೦೨ ವಿವಾಹ | ದತ್ತು ಸ್ವೀಕಾರ | ೨೦೦೨–೨೦೦೩ ವಿವಾಹ | ದತ್ತು ಸ್ವೀಕಾರ | ೨೦೦೩–೨೦೦೪ ವಿವಾಹ | ದತ್ತು ಸ್ವೀಕಾರ | ೨೦೦೪–೨೦೦೫ ವಿವಾಹ | ದತ್ತು ಸ್ವೀಕಾರ |
|---|---|---|---|---|---|---|---|---|---|---|---|---|---|
| ೧ | ಕೋಲಾರ | ೯೫ | ೨ | ೪೬ | ೩ | ೨೬ | ೩ | ೧೭ | ೪ | ೫೦ | ೧ | ೫೨ | ೩ |
| ೨ | ಗುಡಿಬಂಡೆ | ೩ | – | ೧ | ೧ | ೩ | – | ೩ | ೧ | ೬ | ೧ | ೧೧ | ೪ |
| ೩ | ಗೌರಿಬಿದನೂರು | ೩೧ | ೧ | ೩೪ | ೧ | ೨೨ | – | ೨೩ | – | ೨೯ | – | ೪೬ | ೨ |
| ೪ | ಚಿಕ್ಕಬಳ್ಳಾಪುರ | ೨೮ | – | ೩೮ | – | ೨೭ | – | ೧೭ | – | ೨೦ | – | ೩೪ | – |
| ೫ | ಚಿಂತಾಮಣಿ | ೧೫೬ | ೧ | ೧೩೯ | – | ೧೧೯ | ೧ | ೧೫೬ | ೪ | ೧೩೯ | – | ೧೨೬ | ೧ |
| ೬ | ಬಂಗಾರಪೇಟೆ | ೨೭೫ | ೪ | ೨೩೩ | ೧೦ | ೨೭೨ | ೪ | ೩೦೬ | ೧ | ೨೫೯ | ೭ | ೨೦೬ | ೫ |
| ೭ | ಬಾಗೇಪಲ್ಲಿ | ೧೨ | ೧ | ೧೨ | – | ೧೭ | – | ೧೨ | ೧ | ೧೫ | – | ೨೨ | – |
| ೮ | ಮಾಲೂರು | ೪೧ | – | ೬೩ | – | ೮೦ | – | ೮೩ | – | ೭೨ | ೧ | ೮೭ | – |
| ೯ | ಮುಳಬಾಗಿಲು | ೪೧ | ೨ | ೩೪ | ೨ | ೨೩ | ೩ | ೨೬ | ೧ | ೨೮ | – | ೨೬ | – |
| ೧೦ | ಶಿಡ್ಲಘಟ್ಟ | ೨೯ | – | ೯ | – | ೧೩ | – | ೨೧ | – | ೧೦ | – | ೧೩ | ೧ |
| ೧೧ | ಶ್ರೀನಿವಾಸಪುರ | ೬೧ | – | ೫೩ | – | ೪೬ | – | ೬೧ | – | ೫೨ | – | ೫೯ | ೨ |
| | ಒಟ್ಟು | ೭೭೨ | ೧೧ | ೬೬೨ | ೧೭ | ೬೪೮ | ೧೧ | ೭೨೫ | ೧೨ | ೬೮೦ | ೧೦ | ೬೬೨ | ೧೮ |

## ಶವಸಂಸ್ಕಾರ ಪದ್ಧತಿಗಳು

ಮೃತದೇಹಕ್ಕೆ ನಡೆಸುವ ಸಂಸ್ಕಾರ, ವಿಧಿಗಳು ವಿವಿಧ ಜಾತಿ, ಧರ್ಮಗಳಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತವೆ. ವೈದಿಕ ಪದ್ಧತಿಯನ್ನು ಅನುಸರಿಸುವವರು ಸಾಮಾನ್ಯವಾಗಿ ಒಂದೇ ರೀತಿಯ ಕ್ರಮ, ಆಚರಣೆಗಳನ್ನು ಅನುಸರಿಸಿದರೆ, ಹಿಂದುಳಿದವರ್ಗದ ವಿವಿಧ ಜಾತಿಗಳಲ್ಲಿ ಅವರವೇಆದ ಕೆಲವೊಂದು ಕ್ರಮಗಳನ್ನು ಅನುಸರಿಸುವುದನ್ನು ಗಮನಿಸಬಹುದಾಗಿದೆ. ಆದರೂ ವ್ಯಕ್ತಿಯು ಸಾವಿಗೆ ಸನಿಹನಾದ ಹೊತ್ತಿಗೆ ಆತನ ಬಾಯಿಗೆ ನೀರು ಬಿಡುವುದು, ಉಸಿರು ಹೋದ ತಕ್ಷಣ ಕಾಲುಗಳನ್ನು ಮಡಿಸುವುದು, ಅಂಗಳದಲ್ಲಿ ಬೆಂಕಿ ಹಾಕುವುದು, ಶವಕ್ಕೆ ಸ್ನಾನ ಮಾಡಿಸಿ ಹೊಸ ಬಿಳಿಬಟ್ಟೆ ಸುತ್ತಿ, ಚಟ್ಟದಲ್ಲಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವುದು, ಗುಂಡಿಯಲ್ಲಿ ಹೂತ ಮೇಲೆ ಅಥವಾ ಅಗ್ನಿ ಸಂಸ್ಕಾರ ಮಾಡಿದ ಮೇಲೆ ದಾರಿಯಲ್ಲಿ ನೀರು ಮುಟ್ಟುವುದು ಅಥವಾ ಮನೆಯಲ್ಲಿ ಸ್ನಾನ ಮಾಡುವುದು, ಮೂರನೇ ದಿನಕ್ಕೆ ಕೂಳು ಹಾಕುವುದು, ೧೧ನೇ ದಿನಕ್ಕೆ ತಿಥಿ ಮಾಡುವುದು ಇತ್ಯಾದಿಗಳು ಎಲ್ಲಾ ಜಾತಿಗಳಲ್ಲಿ ಸಾಮಾನ್ಯವಾಗಿರುವ ಶವಸಂಸ್ಕಾರದ ಮುಖ್ಯ ವಿಧಿಗಳಾಗಿವೆ. ವೈದಿಕ ಸಂಪ್ರದಾಯದಲ್ಲಿ ತಿಂಗಳ ತಿಥಿ ಹಾಗೂ ಪ್ರತೀ ವರ್ಷ ವಾರ್ಷಿಕ ಶ್ರಾದ್ಧಗಳು ನಡೆಯುತ್ತವೆ. ಹಿಂದುಳಿದ ವರ್ಗದವರು ಪ್ರತೀ ವರ್ಷ ಮಹಾನವಮಿ ಅಥವಾ ಶಿವರಾತ್ರಿಗಳಲ್ಲಿ ಪಿತೃಗಳ ಪ್ರತೀಕವಾದ ಕಳಸ ಪೂಜಿ, ಹೊಸ ವಸ್ತ್ರ ಇಟ್ಟು ಎಡೆ ಹಾಕುವುದು ಪದ್ಧತಿಯಾಗಿದೆ. ಶವವನ್ನು ಸಾಮಾನ್ಯವಾಗಿ ಬಿದಿರಿನ ಚಟ್ಟದಲ್ಲಿ ನಾಲ್ವರು ಹೊತ್ತೊಯ್ಯುವುದು ಸಂಪ್ರದಾಯ. ಆದರೆ, ಬುಡಕಟ್ಟು ಹಿನ್ನೆಲೆಯ ಪೂಸಲವರು ಅಥವಾ ಸೋಲಿಗರಲ್ಲಿ ಹೆಣವನ್ನು ಐವರು ಕೈಗಳಲ್ಲೇ ಒಯ್ಯುತ್ತಾರೆ. ಅವರಲ್ಲಿ ಮಗ ಆದವನು ಹೆಣದ ತಲೆ ಅಥವಾ ಪಾದಗಳನ್ನು ಹಿಡಿದುಕೊಂಡು ಹೋಗಬೇಕು. ಶೆಟ್ಟಿ ಬಣಜಿಗರ ದಾಸಪ್ಪಗಳ ಶವ ಸಂಸ್ಕಾರದಲ್ಲಿ ಹೆಣದ ಚಟ್ಟವನ್ನು ಇಬ್ಬರೇ–ಮುಂದೆ ಒಬ್ಬರು, ಹಿಂದೆ ಒಬ್ಬರು ತಮ್ಮ ಎರಡೂ ಹೆಗಲ ಮೇಲೆ ಇಟ್ಟುಕೊಂಡು–ಹೊತ್ತೊಯ್ಯಬೇಕು. ವಡ್ಡರಲ್ಲಿ ಕಂಬಳಿಯಲ್ಲಿರಿಸಿ ಶವ ಒಯ್ಯುವ ಪದ್ಧತಿ ಇದ್ದಿತು. ಅಲ್ಲದೆ, ಅವರಲ್ಲಿ ೧೨ನೆಯ (ಕರ್ಮಕಳೆವ) ದಿನ ಪೌರೋಹಿತ್ಯಕ್ಕೆ ಬರುವ ಅಯ್ಯನು ಆ ಮನೆತನದ ಎಲ್ಲಾ ಮನೆಗಳಿಗೆ ತಲಾ ಒಂದರಂತೆ ಮಾವಿನ ತೋರಣ ಕಟ್ಟಿಕೊಡುವುದು ಪದ್ಧತಿಯಾಗಿದೆ. ಶವವನ್ನು ಮೆರವಣಿಗೆಯಲ್ಲಿ ಒಯ್ಯುವಾಗ ತಮಟೆ ಬಡಿಯುವ ತೋಟಿಯು ಹಾಡಿನ ಮೂಲಕ ಮೃತನ ಗುಣಗಾನ ಮಾಡುವ, ಅದಕ್ಕಾಗಿ ಹಣಕೊಟ್ಟವರನ್ನೂ ಧನ್ಯವಾದದೊಂದಿಗೆ ಹೊಗಳುವ ಅಭ್ಯಾಸ ಮುಳಬಾಗಿಲು ಮತ್ತಿತರ ಭಾಗಗಳಲ್ಲಿ ಇರುವುದಾಗಿ ತಿಳಿದುಬಂದಿದೆ. ಶವಸಂಸ್ಕಾರದ ಕೆಲವೊಂದು ವಿಧಿಗಳು ಹೇಗೆ ವಿಶಿಷ್ಟ ಹಾಗೂ ಅಭ್ಯಸನೀಯವಾಗಿರುತ್ತವೆ ಎಂಬುದಕ್ಕೆ ಒಂದು ಮಾದರಿಯಾಗಿ ಚಿಕ್ಕಬಳ್ಳಾಪುರ ಭಾಗದ ಪಿಚ್ಚಕುಂಟರ (ಹೆಳವರ) ಶವಸಂಸ್ಕಾರ ಪದ್ಧತಿಯನ್ನು ಇಲ್ಲಿ ಗಮನಿಸಬಹುದಾಗಿದೆ:

ಇವರಲ್ಲಿ ಹಿಂದೆ ಶವವನ್ನು ಕೈನಲ್ಲಿಯೇ ಎತ್ತಿಕೊಂಡು(ತುಲಿ) ಹೋಗುತ್ತಿದ್ದರು. ಈಗ ಪಾಡಿ(ಚಟ್ಟ) ಕಟ್ಟುತ್ತಾರೆ. ಗುರುಬೋಧೆ ತೆಗೆದುಕೊಂಡವರನ್ನು ಚಟ್ಟದಲ್ಲಿ ಕುಳ್ಳಿರಿಸಿ ಎತ್ತಿಕೊಂಡು ಹೋಗುತ್ತಾರೆ. ತಂದೆಗೆ ದೊಡ್ಡಮಗ ತಲಗೋರು ಹಿಡಿಯಬೇಕು. ಸ್ಮಶಾನಕ್ಕೆ ಮೊದಲು ದಾರಿಯಲ್ಲಿ ಒಂದೆಡೆ ಹೆಣ ಇಳಿಸಿ, ಆ ಸ್ಥಳ (ದಿಂಪಡಿ ಕಾಲುವ)ದಲ್ಲಿ ನಾಲ್ಕು ಸಣ್ಣ ಕಲ್ಲುಗಳನ್ನಿಟ್ಟು ಅವುಗಳಿಗೆ ಅರಿಸಿನ, ಕುಂಕುಮ ಇಟ್ಟು, ಸಾಂಬ್ರಾಣಿ ಕಡ್ಡಿ ಹಚ್ಚಿ, ಹೆಣ ಹೊತ್ತವರು ಹೆಗಲು ಬದಲಾಯಿಸಿಕೊಂಡು (ಅಂದರೆ ಮುಂದಿನವರು ಹಿಂದೆ ಬಂದು, ಹಿಂದಿನವರು ಮುಂದೆ ಹೋಗಿ) ಹೆಣ ಹೊತ್ತು ಗುಂಡಿ ಬಳಿ ಹೋಗುತ್ತಾರೆ (ಇವರಲ್ಲಿ ಗುಂಡಿಯನ್ನು ಮಾವನ ವರಸೆಯವರು ತೆಗೆಯುತ್ತಾರೆ). ಗುಂಡಿಯಲ್ಲಿ ಶವ ಮಲಗಿಸಿ, ಬಟ್ಟೆ ಸಡಿಲಿಸಿ ಬಟ್ಟೆಯ ಸೆರಗಿನಲ್ಲಿಯೇ ಮುಖ ಮುಚ್ಚಿದ ಬಳಿಕ ಆ ಕ್ರಿಯೆಗಳನ್ನು ಮಾಡಿದವನು ಅದೇ ಬಟ್ಟೆಯ ಒಂದು ಸಣ್ಣ ಎಳೆಯನ್ನು ತನ್ನ ಎಡಗಾಲ ಹೆಬ್ಬೆರಳಿಗೆ ಕಟ್ಟಿಕೊಂಡು, ಗುಂಡಿಯ ಮೇಲಕ್ಕೆ ಹತ್ತುವಾಗ ಆ ದಾರ ಕಿತ್ತುಕೊಂಡು ಬರುತ್ತಾನೆ. ಮಣ್ಣು ಮುಚ್ಚಿದ ಮೇಲೆ ಮಾದಿಗರವನು ಗುಂಡಿಯ ಮೂರು ಮೂಲೆಯಲ್ಲಿ ಬೆರಣಿ ಇಟ್ಟಾಗ ಅದರ ಮೇಲೆ ದಕ್ಷಿಣೆ ಇಡಬೇಕು. ಮೃತನ ಮಗನು ತನ್ನ ಹೆಗಲ ಮೇಲೆ ತಲಗೋರು ಹೊತ್ತುಕೊಂಡು ಗುಂಡಿಯ ಸುತ್ತಾ ಬರುವಾಗ, ಮೂರು ಸುತ್ತಿಗೂ ಒಂದೊಂದು ತೂತು ಮಾಡಿ ಸುತ್ತಲೂ ನೀರು ಸುರಿಯುವಂತೆ ಮಾಡುತ್ತಾರೆ. ಕೊನೆಗೆ ಆ ಗಡಿಗೆಯನ್ನು ಹಿಂದಕ್ಕೆ ಎತ್ತಿಹಾಕುತ್ತಾನೆ. ಸಮಾಧಿಗೆ ಪೂಜೆ ಮಾಡಿ, ಕೆರೆಯಲ್ಲಿ ಸ್ನಾನ ಮಾಡಿ, ಮನೆಗೆ ಹೋಗಿ ದೀಪ ನೋಡುತ್ತಾನೆ. ಮೂರು ದಿನಕ್ಕೆ ಕೂಳಿನ ಶಾಸ್ತ್ರ: ಹೊಸ ಮಡಕೆಯಲ್ಲಿ ಅಕ್ಕಿ ಜೊತೆ ಮೂರು ರೀತಿ ಸೊಪ್ಪು (ಅಗಸೆ, ದಂಟು ಹಾಗೂ ಮುನಿಗೆ ಸೊಪ್ಪು), ಒಣಮೀನು, ಮೊಟ್ಟೆ ಹಾಕಿ ಕೂಳು ಬೇಯಿಸುತ್ತಾರೆ. ದಾರಿಯಲ್ಲಿ ಹೆಣ ಇಳಿಸಿದ್ದ ಜಾಗದ ಹತ್ತಿರದಲ್ಲಿ ಈ ಮಡಕೆಯಿಂದ ಮೂರು ಹಿಡಿ ಕೂಳು ತೆಗೆದು ಇಟ್ಟು, ಪೂಜೆ ಮಾಡುತ್ತಾರೆ. ಕಾಗೆ ಬಂದು ಕೂಳು ಮುಟ್ಟಿದ ಮೇಲೆ ಮನೆಗೆ ಬರುತ್ತಾರೆ. ಅಂದು ಮಾಂಸಾಹಾರ ಊಟ ಮಾಡುತ್ತಾರೆ. ಆ ದಿನ ಬೆಳಿಗ್ಗೆ ಕೆರೆ ಅಥವಾ ಬಾವಿ ಹತ್ತಿರ ಮಡಿವಾಳಿಯು ಹಾಲು, ಹರಳೆಣ್ಣೆಗಳ ಮಿಶ್ರಣವನ್ನು ಗರಿಕೆ ಪತ್ರೆಯಲ್ಲಿ ಅದ್ದಿ, ಹೆಣ ಮುಟ್ಟಿಸಿಕೊಂಡವರು ಹಾಗೂ ಸಂಬಂಧಿಕರ ಮೇಲೆ ಚಿಮುಕಿಸುವ ಶಾಸ್ತ್ರ ಮಾಡುತ್ತಾನೆ. ಕ್ಷೌರಿಕ ಅವರಿಗೆ ಮುಖಕ್ಷೌರ, ತಲಗೋರು ಹಿಡಿದವನಿಗೆ ತಲೆಕ್ಷೌರ ಮಾಡುತ್ತಾನೆ. ಅಲ್ಲಿಯೇ ಅವರು ಸ್ನಾನ ಮಾಡುತ್ತಾರೆ. ೧೧ನೇ ದಿನವೂ ಅದೇ ರೀತಿ ಕೂಳು ಮಾಡುತ್ತಾರೆ. ಸಂಜೆಗೆ ಒಂದು ಎತ್ತಿನ ಕಾಲು ತೊಳೆದು, ಹರಿಸಿನ ಕುಂಕುಮ ಇಟ್ಟು, ಬೆನ್ನಮೇಲೆ ಕರೇಕಂಬಳಿ ಹಾಕಿ ಪಿತೃಗಳನ್ನು ಸ್ಮರಿಸುತ್ತಾ, ಗಂಟೆ ಬಾರಿಸುತ್ತಾ, ಗಂಗೆ ಹತ್ತಿರ ಹೋಗುತ್ತಾರೆ. ಅಲ್ಲಿ ಮಣ್ಣಿನ ಬೊಂಬೆ ಮಾಡಿ, ಅದರ ಮುಂದೆ ಎಲೆ ಮೇಲೆ ಎಲ್ಲರೂ ಒಂದೊಂದು ಹಿಡಿ ಕೂಳು ಇಟ್ಟು, ಪೂಜೆ ಮಾಡಿ, ಗಂಗೆಯಲ್ಲಿ ಎಲೆ ತೇಲಿಬಿಡುತ್ತಾರೆ. ಮನೆಗೆ ಬಂದು ದೀಪ ನೋಡುತ್ತಾರೆ. ರಾತ್ರಿಗೆ ಮನೆ ಮುಂದೆ ಹಟ್ಟಿ ಸಾರಿಸಿ, ರಂಗೋಲಿ ಬರೆದು, ನಡುವೆ ಸಗಣಿಯನ್ನು ಮಂದವಾಗಿ ತಟ್ಟುತ್ತಾರೆ. ಅದರ ನಡುವೆ ಹುತ್ತದ ಮಣ್ಣಿನಿಂದ ಮಾಡಿದ ಎತ್ತಿನ ಬೊಂಬೆಯನ್ನು ನಿಲ್ಲಿಸಿ, ಅದರ ಸುತ್ತ ಸಣ್ಣ ಕಡ್ಡಿಯಿಂದ ಸಾಂಕೇತಿಕವಾಗಿ ಏಳು ಸುತ್ತಿನ ಕೋಟೆಯಂತೆ ಗೆರೆಗಳನ್ನು ಎಳೆದು, ಅವುಗಳ ಮೇಲೆ ಅಲ್ಲಲ್ಲಿ ಕೆಲವು ನಾಣ್ಯಗಳನ್ನು ಚುಚ್ಚುತ್ತಾರೆ. ತಲಕೊರುವಿ ಹಿಡಿದವನು ಎಡಗೈನ ಉಂಗುರಬೆರಳಲ್ಲಿ ಬೆಣ್ಣೆ ತೆಗೆದು, ಆ ಎತ್ತಿನ ಬೊಂಬೆ ಬಾಯಿಗೆ ಸೋಕಿಸಿ, 'ಅವತ್ತು ತಿಳೀದೆ ಕಲ್ಲಲ್ಲಿ ಹೊಡೆದಿದ್ದೆ; ಇವತ್ತು ತಿಳಿದು ಬೆಣ್ಣೇಲಿ ಹಾಕ್ತಾ ಇದ್ದೀನಿ; ನಮ್ಮಪ್ಪ\ಅಮ್ಮ ಸತ್ತು ಈಗ ಸ್ವರ್ಗಕ್ಕೆ ಬಂದಿದ್ದಾನೆ\ಳೆ; ಬಾಗಿಲ ತೆಗಿ' ಎಂದು ಮೂರು ಸಾರಿ ಹೇಳಬೇಕು. ರಾತ್ರಿಯೆಲ್ಲಾ ಅಲ್ಲಿ ಜಾಗರಣೆ, ಭಜನೆ ಮಾಡುತ್ತಾರೆ. ಬೆಳಗ್ಗಿಗೆ ಆ ಸಗಣಿ, ಬೊಂಬೆ ಎಲ್ಲಾ ತೆಗೆದುಕೊಂಡು ಹೋಗಿ ನೀರಿಗೆ ಬಿಟ್ಟು ಬರುತ್ತಾರೆ.

**ಮನೆಯ ಮಾದರಿಗಳು**

ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಒಂದಾದ ಮನೆಯ ಮಾದರಿಯು ಆಯಾಪ್ರದೇಶದ ಹವಾಗುಣ, ಪ್ರಾಕೃತಿಕವಾಗಿ ದೊರೆಯುವ ಸಾಮಗ್ರಿ, ವ್ಯಕ್ತಿಯ ಆರ್ಥಿಕ ಸಾಮರ್ಥ್ಯ, ಧಾರ್ಮಿಕ ನಂಬಿಕೆ ಮೊದಲಾದ ಅಂಶಗಳನ್ನು ಅನುಸರಿಸಿ ರೂಪುಗೊಳ್ಳುತ್ತದೆ. ಈ ತತ್ವ ಕೋಲಾರ ಜಿಲ್ಲೆಗೂ ಸಹಜವಾಗಿಯೇ ಅನ್ವಯವಾಗುತ್ತದೆ. ಕಡಿಮೆ ಮಳೆ ಹಾಗೂ ಹೆಚ್ಚು ಉಷ್ಣತೆಯಿಂದ ಕೂಡಿದ ಕೋಲಾರ ಜಿಲ್ಲೆಯಲ್ಲಿ ಮಾಳಿಗೆ ಮನೆಗಳು, ಹೆಂಚಿನ ಮನೆಗಳು ಹಾಗೂ ಗುಡಿಸಲುಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಮಾಳಿಗೆಗೆ ಅನುಕೂಲಸ್ಥರು ಚಪ್ಪಡಿ ಕಲ್ಲುಗಳನ್ನು ಬಳಸಿದರೆ, ಅದಾಗದವರು ಮಣ್ಣನ್ನು ಬಳಸುತ್ತಾರೆ. ಈಚೆಗೆ ತಾರಸಿ ಮನೆಗಳೂ ನಿರ್ಮಾಣಗೊಂಡಿವೆ. ಹಳೆಯ ಕಾಲದ ಮಣ್ಣಿನ ಮನೆಗಳನ್ನು ಮಿದ್ದೆ (ಮೇಲುಮುದ್ದೆ) ಮನೆಗಳೆಂದು ಕರೆಯುವುದುಂಟು. ಗೋಡೆಗಳಿಗೆ ಸಾಮಾನ್ಯವಾಗಿ ಕಲ್ಲು, ಮಣ್ಣು, ಇಟ್ಟಿಗೆ ಬಳಸುತ್ತಾರೆ. ಹಿಂದೆ ನಾಡಹೆಂಚನ್ನು ಛಾವಣಿಗೆ ಬಳಸಲಾಗುತ್ತಿದ್ದಿತು. ಮಾಲೂರು ಮೊದಲಾದ ಕಡೆ ಆಧುನಿಕ ರೀತಿಯ 'ಮಂಗಳೂರು ಹೆಂಚಿ'ನ ಕಾರ್ಖಾನೆಗಳು ಪ್ರಾರಂಭವಾದ ಮೇಲೆ ಈಗ ಈ

ಕೆಂಪು ಹೆಂಚಿನ ಮನೆಗಳೇ ಹೆಚ್ಚಾಗಿ ಕಾಣಬರುತ್ತವೆ. ಮನೆಗಳಲ್ಲಿ ತೊಲೆ, ಜಂತೆ ಮೊದಲಾದವುಗಳಿಗೆ ಸೀಬೇವು, ನೇರಳೆ, ಬಿದಿರು, ಅಡಕೆ ಮೊದಲಾದ ಮರಗಳನ್ನು ಬಳಸುತ್ತಿದ್ದರು. ಊರ ಮುಖಂಡರು, ಅನುಕೂಲಸ್ಥರು ಕಡಪಾಕಲ್ಲು ಹಾಕಿಸಿ ಅಥವಾ ನೆಲಕ್ಕೆ ಗಾರೆ ಇಡಿಸಿ, ಗೋಡೆಗೆ ಸುಣ್ಣ ಬಳಿಸುತ್ತಿದ್ದರು. ಶ್ರೀಸಾಮಾನ್ಯರು ನೆಲಕ್ಕೆ ಸಗಣಿಗಾರೆಯನ್ನೇ ಬಳಸುತ್ತಿದ್ದರು. ರೈತರ ಮನೆಗಳಲ್ಲಿ ಧಾನ್ಯ ಸಂಗ್ರಹಣೆಗೆ ಕಣಜ/ಹಗೇವು ಮತ್ತು ವಾಡೆಗಳು, ಮೇವು, ಕಸ ಸಂಗ್ರಹಣೆಗೆ ಅವರವರಿಗೆ ಅನುಕೂಲವಾದ ಸ್ಥಳಗಳಲ್ಲಿ ಆಯಾ ಮನೆಯ ಹಿತ್ತಿಲು, ತಿಪ್ಪೆಗಳು ಇರುತ್ತವೆ. ಬಡವರು ನಿರ್ಮಿಸುವ ಗುಡಿಸಲುಗಳಲ್ಲಿ ಆಯಾಕಾರದ ತಳವಿನ್ಯಾಸದ ಗುಡಿಸಲುಗಳು ಇದ್ದಹಾಗೆ ಚಿಂತಾಮಣಿ, ಮುಳುಬಾಗಿಲು ಮೊದಲಾದ ಆಂಧ್ರದ ಗಡಿಭಾಗದ ಕೆಲ ಹಳ್ಳಿಗಳಲ್ಲಿ ವೃತ್ತಾಕಾರದ ತಳ ವಿನ್ಯಾಸದ ಗುಡಿಸಲುಗಳು ಕಂಡುಬರುತ್ತವೆ.

**ಮಾಳಿಗೆ ಮನೆಗಳ ನಿರ್ಮಾಣ:** ಬಹು ಹಿಂದಿನ ಕಾಲದಲ್ಲಿ ಮಾಳಿಗೆ ಮನೆಗಳನ್ನು ಕಟ್ಟುತ್ತಿದ್ದ ಸಾಂಪ್ರದಾಯಿಕ ವಿಧಾನವು ಸಾಮಾನ್ಯವಾಗಿ ಹೀಗಿದ್ದಿತು: ಕೆರೆ/ಕಟ್ಟೆ ಅಂಗಳದ ಜೇಡಿ ಹಾಗೂ ಮರಳು ಮಣ್ಣನ್ನು ಸೂಕ್ತ ಪ್ರಮಾಣದಲ್ಲಿ ಬೆರೆಸಿ, ನೀರಿನಲ್ಲಿ ಕಲೆಸಿ, ತುಳಿದು, ಹದ ಮಾಡಿ, ದಪ್ಪ ದಪ್ಪ ಮಿದ್ದೆ ಮಾಡಿ ಆ ಮಿದ್ದೆಗಳನ್ನೇ ಕ್ರಮವಾಗಿ ಜೋಡಿಸಿ ಗೋಡೆಗಳನ್ನು ಕಟ್ಟಿ ಅದರ ಮೇಲೆ ಮರಳುಗಾಜು ಅಥವಾ ಮಣ್ಣುಗಾಜನ್ನು ಮಾಡಿ, ಗೋಡೆಯ ಒಳಭಾಗವು ಬಹುವಾಗಿ ನಯವಾಗುವಂತೆ ಮಾಡುತ್ತಿದ್ದರು. ಮುಂದೆ, ಮಿದ್ದೆಮಣ್ಣನ್ನೇ ಹೆಂಟೆಗಳನ್ನಾಗಿ ಮಾಡಿ ಗೋಡೆಗೆ ಬಳಸುವುದು, ಆ ಬಳಿಕ ಹಸೀ ಇಟ್ಟಿಗೆ, ಈಚಿನ ಕಾಲದಲ್ಲಿ ಸುಟ್ಟ ಇಟ್ಟಿಗೆಗಳನ್ನು ಬಳಸುವುದು ರೂಢಿಗೆ ಬಂದಿದೆ. ಕೆಲವರು ಸೈಜುಗಲ್ಲನ್ನೇ ಇಟ್ಟಿಗೆಗಳಂತೆ ಬಳಸಿ ಗೋಡೆ ಕಟ್ಟುವುದೂ ಉಂಟು. ಅಳತೆಗೆ ಅನುಗುಣವಾಗಿ ಗೋಡೆಗಳನ್ನು ಕಟ್ಟಿದ ಮೇಲೆ ಗೋಡೆಯಿಂದ ಗೋಡೆಗೆ(ನಡುವೆ ಸೂಕ್ತ ಅಳತೆಯಲ್ಲಿ ಕಂಬಗಳನ್ನು ನಿಲ್ಲಿಸಿ)ಅಡ್ಡಲಾಗಿ ಮರದ ದೂಲ ಅಥವಾ ಅಡ್ಡೆಗಳನ್ನು ಹಾಕಿ, ಅದರ ಮೇಲೆ ಅಡ್ಡವಾಗಿ ತರಾಯಿಗಳನ್ನು ಹಾಸಿ, ಮತ್ತೆ ಅದರ ಮೇಲೆ ಅಡ್ಡವಾಗಿ ಸಣ್ಣ ಸಣ್ಣ ಜಂತೆ ಕಡ್ಡಿಗಳನ್ನು ಒತ್ತೊತ್ತಾಗಿ ಹರಡಿ, ಮೇಲೆ ದೇವದಾರಿ ಗಿಡದ ಮಾಳವಾತವನ್ನು ಹಾಕಿ ಅದರ ಮೇಲೆ ಬಂದರ ಸೊಪ್ಪು ಅಥವಾ ಬಿದಿರಿನ ಚಾಪೆ ಹಾಸಿ, ಮತ್ತೆ ಅದರ ಮೇಲೆ ಕಲೆಸಿದ ಮಣ್ಣು ಹಾಕಿ, ಗಟ್ಟಿ ಮಾಡಿ ಕೊನೆಗೆ ಸುಮಾರು ಎರಡು ಅಂಗುಲದಷ್ಟು ಸುದ್ದೆ ಅಥವಾ ಚೌಳು ಮಣ್ಣನ್ನು ವಾಟವಾಗಿ ಹರಡಿ, ಗೋಡೆ ಮೇಲೆ ಮಳೆನೀರು ಸೋರದಂತೆ ಸುತ್ತಲೂ ದಿಂಡುಕಟ್ಟಿ, ಮಾಳಿಗೆ ಮೇಲಿನ ಮಳೆ ನೀರು ಸರಾಗವಾಗಿ ಹರಿದುಹೋಗಲು ದೋಣಿಗಳನ್ನು ಅಳವಡಿಸುತ್ತಿದ್ದರು.

### ಗೃಹೋಪಕರಣಗಳು

ಕೆಲವೇ ದಶಕಗಳ ಹಿಂದೆ ಗೃಹಸ್ಥರು ಮಡಕೆ, ಕಂಚು, ಹಿತ್ತಾಳೆ ಹಾಗೂ ತಾಮ್ರದ ಪಾತ್ರೆಗಳನ್ನು ನಿತ್ಯ ಬಳಕೆಯಲ್ಲಿ ಬಳಸುತ್ತಿದ್ದುದು ಸಾಮಾನ್ಯವಾಗಿದ್ದಿತು. ಆಮೇಲೆ ಅಲ್ಯೂಮಿನಿಯಂನ, ಈಚೆಗೆ ಸ್ಟೀಲ್ ಹಾಗೂ ಪ್ಲಾಸ್ಟಿಕ್‌ನ ಪಾತ್ರೆ-ಪಡಗಗಳು ಜಾತಿ ಭೇದವಿರದೆ ಎಲ್ಲಾ ವರ್ಗದವರಲ್ಲಿ ವಿಶೇಷವಾಗಿ ಬಳಕೆಯಾಗುತ್ತಿರುವುದು ಕಾಣಬರುತ್ತದೆ. ಮೊದಲು 'ನುಲಕಿಮಂಚ' ಅಂದರೆ ಹುರಿಮಂಚಗಳು ಗ್ರಾಮಾಂತರ ಪ್ರದೇಶದಲ್ಲಿ ಸಾಮಾನ್ಯವಾಗಿ ಕಾಣಬರುತ್ತಿದ್ದವು. ಈಗ ಮರ ಹಾಗೂ ಸ್ಟೀಲ್‌ನ ಮಂಚಗಳೇ ಹೆಚ್ಚಾಗಿವೆ. ಜಿಲ್ಲೆಯ ಗ್ರಾಮೀಣರು ತಮ್ಮ ಮನೆಗಳಲ್ಲಿ ಬಳಕೆ ಮಾಡುವ ಕೆಲವು ಗೃಹೋಪಕರಣಗಳ ಹೆಸರು ಹೀಗಿವೆ: ಹಂಡೆ, ಕೊಳಗ, ಹರವಿ (ಸರ್ವ), ಬಿಂದಿಗೆ, ಒಲೆ (ಪಯ್ಯಿ), ಚೊಂಬು (ಶೆಂಬು), ಮೊರ, ಜರಡಿ, ಮುದ್ದೆ ಮಾಡುವಾಗಿನ ಕವೆಗೋಲು (ಮೆಟ್ಟುಗಟ್ಟ), ಹಿಟ್ಟು ತಿರುವೋ ಕೋಲು (ಸಂಗಟಗಟ್ಟ), ಹಸೇಕಲ್ಲು (ಪಸುಬಂಡೆ), ಖಾರ ಅರೆಯೋ ಕಲ್ಲು (ಪಸುಕಲ್ಲು), ಒರಳುಕಲ್ಲು (ರೋಲು), ರುಬ್ಬುಗುಂಡು (ರುಬ್ಬಿನಗುಂಡಿ), ಸಿಂಬೆ, ತೆಕ್ಕೆ (ಸೋಡು), ಚಟ್ಟಣೆ (ಮೂಗಟ್ಲು), ಕುಡಿಕೆ (ಮುಂತ್ಲು). ರೈತರು ಕೃಷಿ ಕಾರ್ಯದಲ್ಲಿ ಕುಡುಗೋಲು, ನೇಗಿಲು, ಬೈರಿಗೆ, ಬಾಚಿ (ಬಾಡ್ಸಿ), ಗುದ್ದಲಿ, ಶನಿಕೆ, ಗಡಾರಿ, ಬಾಣಲಿ, ವರಾರಿ, ಕೂರಿಗೆ, ಹುಲ್ಲಾರಿ, ಅರ (ಗರ), ಇಕ್ಕಳ, ಮಚ್ಚು, ಗೊಡ್ಲಿ, ಸಮ್ಮಿ, ದೊಡ್ಡಪಲುಗಾರ, ಚಿಕ್ಕಪಲುಗಾರ ಮೊದಲಾದ ಉಪಕರಣಗಳನ್ನು ಬಳಸುತ್ತಾರೆ.

### ಆಹಾರ ಪದ್ಧತಿಗಳು

ಜಿಲ್ಲೆಯ ನಿವಾಸಿಗಳಲ್ಲಿ ರೂಢಿಯಲ್ಲಿರುವ ಆಹಾರವನ್ನು ದಿನನಿತ್ಯದ ಆಹಾರ ಹಾಗೂ ವಿಶೇಷ ಸಂದರ್ಭದ ಆಹಾರ ಎಂದು ಎರಡು ವಿಧಗಳಾಗಿ ವರ್ಗೀಕರಿಸಬಹುದು. ದಿನನಿತ್ಯದ ಆಹಾರದಲ್ಲಿ ಸಾಮಾನ್ಯವಾಗಿ ರಾಗಿ, ಜೋಳ, ಅಕ್ಕಿ ಮೊದಲಾದ

ಧಾನ್ಯಗಳು, ಅವರೆ, ತೊಗರಿ, ಹುರುಳಿ ಮೊದಲಾದ ಕಾಳುಗಳು, ಸೊಪ್ಪು, ತರಕಾರಿಗಳು ಬಳಕೆಯಾಗುತ್ತವೆ. ಹುರುಳಿಕಾಯಿ, ಕ್ಯಾರೆಟ್, ಬೀಟ್‌ರೂಟ್, ಕೋಸು, ಟಮೋಟೋ ಇತ್ಯಾದಿ ತರಕಾರಿಗಳನ್ನು ಜಿಲ್ಲೆಯಲ್ಲಿ ವಿಶೇಷವಾಗಿ ಬೆಳೆಯುವುದರಿಂದ ಇವರ ಊಟದಲ್ಲಿ ಈ ತರಕಾರಿಗಳ ಬಳಕೆ ಹೆಚ್ಚಾಗುವುದು ಸಹಜವಾಗಿದೆ. ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಮಾವಿನಹಣ್ಣನ್ನು ಹೆಚ್ಚಾಗಿ ಬೆಳೆಯುವುದರಿಂದ ಇಲ್ಲಿನ ನಿವಾಸಿಗಳು ಋತುಮಾನವನ್ನನುಸರಿಸಿ ಮಾವು, ಹಲಸು ಮೊದಲಾದ ಹಣ್ಣುಗಳನ್ನು ಸಾಕಷ್ಟು ಬಳಸುತ್ತಾರೆ. ಗ್ರಾಮೀಣರ ದಿನನಿತ್ಯದ ಆಹಾರದಲ್ಲಿ ರಾಗಿಮುದ್ದೆ, ಅನ್ನ, ರೊಟ್ಟಿಗಳು ಸಾಮಾನ್ಯವಾಗಿರುತ್ತವೆ. ಒಂದು ಕಾಲಕ್ಕೆ ಮಾಂಸಾಹಾರವು ವರ್ಷದ ನಿರ್ದಿಷ್ಟವಾದ ಕೆಲವೇ ದಿನಗಳಲ್ಲಿ ಮಾತ್ರ ಅಂದರೆ ಹಬ್ಬ ದೇವರಿಗಾಗಿ ಹಾಗೂ ಬಂಧು ಬಾಂಧವರು ಮನೆಗೆ ಬಂದಾಗ ಅವರ ಔತಣಕ್ಕಾಗಿ ಮಾಡುತ್ತಿದ್ದ ವಿಶೇಷ ಆಹಾರವಾಗಿದ್ದರೂ, ಈಚೆಗೆ ಲಭ್ಯತೆಯನ್ನನುಸರಿಸಿ ಹೆಚ್ಚು ಹೆಚ್ಚಾಗಿ ಬಳಸುವ ಆಹಾರವಾಗಿದೆ. ಅದರೂ, ಮಾಂಸಾಹಾರವನ್ನು ಮೈಲಿಗೆ ಎಂದು ಭಾವಿಸುವುದರಿಂದ ಶ್ರಾವಣ, ಕಾರ್ತಿಕ ಮೊದಲಾದ ದಿನಗಳಲ್ಲಿ ಕೆಲವರಿಗೆ ಅದರ ಸೇವನೆ ನಿಷಿದ್ಧವಾಗಿರುತ್ತದೆ. ಅಲ್ಲದೆ, ಲಗ್ನ ಕಟ್ಟಿಸಿದ ಮೇಲೆ ಚಪ್ಪರ ತೆಗೆವವರೆಗೆ ಮಾಂಸಾಹಾರ ಮಾಡುವಂತಿಲ್ಲ ಎಂಬ ನಿಷೇಧವೂ ಮಾಂಸಾಹಾರಿಗಳಲ್ಲಿ ಸಾಮಾನ್ಯವಾಗಿ ಪಾಲನೆಯಾಗುತ್ತದೆ

ವಿಶೇಷ ಆಹಾರವನ್ನು ಹಬ್ಬದ ಆಹಾರಗಳು, ವಿವಾಹದ ಆಹಾರಗಳು, ಶವಸಂಸ್ಕಾರದ ಆಹಾರಗಳು ಎಂದು ವಿಭಾಗಿಸಬಹುದು. ಒಂದೊಂದು ಹಬ್ಬಕ್ಕೆ ಒಂದೊಂದು ವಿಶೇಷ ಆಹಾರ ತಯಾರಿಸಿ ಊಟ ಮಾಡುವ ಸಂಪ್ರದಾಯ ಹಿಂದೂಗಳಲ್ಲಿ ವಿಶೇಷವಾಗಿದೆ. ಯುಗಾದಿ, ಗೌರಿಗೆ ಹೋಳಿಗೆ, ಗಣೇಶ ಹಬ್ಬಕ್ಕೆ ಕಡುಬು, ದೀಪಾವಳಿಗೆ ಕಜ್ಜಾಯ, ಸಂಕ್ರಾಂತಿಗೆ ಪೊಂಗಲು, ಹುರಿಟ್ಟು, ವರ್ಷತೊಡಕು ಹಾಗೂ ಆಯುಧ ಪೂಜೆಗಳಂದು ಮಾಂಸಾಹಾರ ಇತ್ಯಾದಿ. ಹೊಸದೇವರು ಹಬ್ಬ ಮಾಡುವ ಮಹಿಳೆಯರು ಮಡಿಯಿಂದ ಹೊಸಮಡಕೆಯಲ್ಲಿ ಅಕ್ಕಿ ಮತ್ತು ಕುಂಬಳಕಾಯಿಗಳನ್ನು ಒಟ್ಟಾಗಿ ಬೇಯಿಸಿ ಮಾಡಿದ ಅನ್ನವನ್ನು ದೇವರಿಗೆ ಎಡೆ ಹಾಕಿ, ಬಳಿಕ ಬೇರೆ ಸಾರು ಬೆರೆಸದೆ ಅದನ್ನೇ ಊಟ ಮಾಡುತ್ತಾರೆ. ಚಂದ್ರಮ್ಮನ ಆಚರಣೆಯಲ್ಲಿ ಉಪ್ಪು ಹಾಕದ–ಸಪ್ಪೆ–ರಾಗಿರೊಟ್ಟಿಗಳನ್ನು ಮಾಡಿ ದೇವರಿಗೆ ಇಟ್ಟು, ಕೊನೆಗೆ ಪ್ರಸಾದವಾಗಿ ತಿನ್ನುವ ರೂಢಿ ಇದೆ. ವಿವಾಹದ ಅಂಗವಾಗಿ ನಿಶ್ಚಿತಾರ್ಥದ ದಿನ ಹೆಣ್ಣಿನ ಮನೆಯಲ್ಲಿ ತುಪ್ಪ–ಅನ್ನವು ವಿಶೇಷ ಊಟವಾಗಿದ್ದಿತು. ಹಿಂದಿನ ಕಾಲದ ಮದುವೆಯಲ್ಲಿ ಅವರೆಕಾಳು ಹುಳಿ, ರಾಗಿಮುದ್ದೆ ವಿಶೇಷ ಊಟವಾಗಿದ್ದಿತು. ಈಚಿನ ದಿನಗಳಲ್ಲಿ ಪಲಾವು, ಕಾಯೋಳಿಗೆಗಳನ್ನು ಬಡಿಸುವ ಅಭ್ಯಾಸ ಹೆಚ್ಚಾಗುತ್ತಿದೆ. ಶವಸಂಸ್ಕಾರದ ಅಂಗವಾಗಿ, ಕೂಳಿನ ಶಾಸ್ತ್ರಕ್ಕಾಗಿ ಇತರರು ಬರೀ ಅನ್ನ ಮಾಡಿದರೆ, ಮಾಂಸಾಹಾರ ಪದ್ಧತಿಯವರು ಅಕ್ಕಿಯೊಂದಿಗೆ ಅಗಸೆ, ದಂಟು, ನುಗ್ಗೆ ಸೊಪ್ಪು, ಒಣಮೀನು, ಕೋಳಿಮೊಟ್ಟೆ ಇತ್ಯಾದಿ ಹಾಕಿ ಬೇಯಿಸಿ ಕೂಳು ಮಾಡುತ್ತಾರೆ. ಮೈನೆರೆದಾಕೆಗೆ ಎಳ್ಳಿನ ತಿಂಡಿ, ಬಾಣಂತಿಗೆ ಕೆಲವು ವಿಶೇಷ ಪಥ್ಯದ ಆಹಾರಗಳನ್ನು ಸಿದ್ಧಿಪಡಿಸಿ ಕೊಡುವುದೂ ರೂಢಿಯಲ್ಲಿದೆ.

**ಜೈನರ ಆಹಾರ ಪದ್ಧತಿ:** ಜೈನರು ತಮ್ಮ ಆಹಾರದ ಬಳಕೆಯಲ್ಲಿಯೂ ಅಹಿಂಸೆಯ ಆಚರಣೆಗೆ ಹೆಚ್ಚು ಆದ್ಯತೆ ನೀಡಿದ್ದಾರೆ. ಇವರ ನಂಬಿಕೆಯ ಪ್ರಕಾರ ನೀರನ್ನು ಶೋಧಿಸಿಯೇ ಬಳಸಬೇಕು. ರಾತ್ರಿ ವೇಳೆ ಆಹಾರ ಸೇವಿಸುವಂತಿಲ್ಲ. ಜೀರ್ಣಕಾರಕಗಳಾದ ಶುಂಠಿ, ಬೆಳ್ಳುಳ್ಳಿ, ಈರುಳ್ಳಿ, ಇಂಗು ಮೊದಲಾದ ಪದಾರ್ಥಗಳು ಆಹಾರ ತಯಾರಿಯಲ್ಲಿ ನಿಷಿದ್ಧ. ಭೂಮಿಯ ಒಳಭಾಗದಲ್ಲಿ ಬೆಳೆಯುವ ಗೆಣಸು, ಮೂಲಂಗಿ ಮೊದಲಾದವುಗಳನ್ನು ಸೇವಿಸುವಂತಿಲ್ಲ. ಜೇನುತುಪ್ಪ ರೇಷ್ಮೆಬಟ್ಟೆಗಳನ್ನು ಉಪಯೋಗಿಸುವಂತಿಲ್ಲ. ಹಸು ಕರು ಹಾಕಿದಾಗಿನಿಂದ ೧೬ ದಿನಗಳವರೆಗಿನ ಗಿಣ್ಣು ಹಾಲನ್ನು ಮನುಷ್ಯರು ಸೇವಿಸಬಾರದು. ಚಾತುರ್ಮಾಸ ಅಂದರೆ ಆಷಾಢದಿಂದ ಕಾರ್ತಿಕದವರೆಗೆ ನಾಲ್ಕು ತಿಂಗಳವರೆಗೆ ಕ್ರಿಮಿಕೀಟಗಳ ಉತ್ಪತ್ತಿ ಬಹಳವಾಗಿರುತ್ತದೆ. ಆ ಕಾಲದಲ್ಲಿ ಬೆಳೆಯುವ ಸೊಪ್ಪಿನಲ್ಲಿ ಅವುಗಳ ಮೊಟ್ಟೆ ಮರಿಗಳಿರುವ ಸಾಧ್ಯತೆ ಹೆಚ್ಚಾಗಿರುವುದರಿಂದ, ಅಂತಹ ಜೀವಿಗಳಿಗೆ ತೊಂದರೆಯಾಗಬಾರದೆನ್ನುವ ಕಾರಣಕ್ಕೆ ಆ ಕಾಲದಲ್ಲಿ ಸೊಪ್ಪು, ದಂಟುಗಳನ್ನು ಜೈನರು ಆಹಾರದ ಭಾಗವಾಗಿ ಬಳಸುವುದನ್ನು ನಿಷೇಧಿಸಿದ್ದಾರೆ.

ಪ್ರಾದೇಶಿಕವಾಗಿಯೂ ಕೆಲವೊಂದು ತಿಂಡಿ, ತಿನಿಸುಗಳು ವಿಶೇಷವಾಗಿರುವುದುಂಟು. ಕೋಲಾರದ ಹುರಿದ ಅವರೆಕಾಳು, ಚಿಂತಾಮಣಿಯ ಖಾರದ ಕಡ್ಲೆಬೀಜ ಮೊದಲಾದುವು ಈ ಭಾಗದ ವಿಶೇಷ ತಿನಿಸುಗಳಾಗಿ ಜನಪ್ರಿಯವಾಗಿವೆ. ಇವರ ರೊಟ್ಟಿಗಳಲ್ಲಿಯೂ ರುಚಿ ವೈವಿಧ್ಯಗಳಿವೆ. ಈ ಭಾಗದಲ್ಲಿ ತಯಾರಿಸುವ ಕೆಲವು ರೊಟ್ಟಿ ಮತ್ತಿತರ ಆಹಾರಗಳ ಮಾದರಿಗಳು ಹೀಗಿವೆ: **ರೊಟ್ಟಿಗಳು: ಮೆತುವಿನ ರೊಟ್ಟಿ:** ತೊಳೆದ ಅಕ್ಕಿ ಒಣಗಿಸಿ ಹಸಿಟ್ಟು ಮಾಡಿಕೊಂಡು, ಆ ಅಕ್ಕಿಹಿಟ್ಟನ್ನು ಬೇಯಿಸಿ, ಸಣ್ಣ ಸಣ್ಣ ಉಂಡೆ ಮಾಡಿ, ಅವುಗಳನ್ನು ಲಟ್ಟಣಿಗೆಯಲ್ಲಿ ಚಪಾತಿ ರೀತಿ ಒತ್ತಿ, ಅದನ್ನು ಹೆಂಚಿನ ಮೇಲೆ ಸುಡುವುದು; ಆ ರೊಟ್ಟಿಯನ್ನು

ಚಟ್ನಿಪುಡಿ, ಪಲ್ಯ ಇತ್ಯಾದಿಗಳೊಂದಿಗೆ ತಿನ್ನುವುದು. **ಖಾರದ ರೊಟ್ಟಿ:** ಮೆಣಸಿನಕಾಯಿ ಖಾರ, ಹುರಿದ ಕಡಲೆಬೀಜದ ಪುಡಿ, ಎಳೇ ಕರಿಬೇವಿನ ಎಲೆ ಅಥವಾ ಕೊತ್ತುಂಬರಿ ಸೊಪ್ಪು, ಈರುಳ್ಳಿ ಚೂರು ಇವೆಲ್ಲವನ್ನೂ ಒಣ ಅಕ್ಕಿ ಹಿಟ್ಟಿನಲ್ಲಿ ಕಲೆಸಿ, ಎಣ್ಣೆ ಸವರಿದ ಬಾಣಲಿ ಮೇಲೆ ತೆಳ್ಳಗೆ ತಟ್ಟಿ, ತಟ್ಟಿ ಮುಚ್ಚಿ ಸುಡುವುದು, ನೆಂಚಿಗೆಗೆ ಬೇಕಿದ್ದರೆ ಮಾತ್ರ ಮೂಲಂಗಿ ಚಟ್ನಿ, ಬೆಣ್ಣೆ ದಂಟಿನ ಸೊಪ್ಪಿನ ಪಲ್ಯ ಇತ್ಯಾದಿ ಬಳಸಬಹುದು. ಅಕ್ಕಿಹಿಟ್ಟು ಅಥವಾ ರಾಗಿಹಿಟ್ಟಿನಲ್ಲಿ ಈ ರೊಟ್ಟಿ ಮಾಡಬಹುದು. ಕಡಲೆಬೀಜದ ಪುಡಿ ಹೆಚ್ಚು ಬಳಸಿದರೆ ರೊಟ್ಟಿ ಮುರಿದುಹೋಗುವುದರಿಂದ ಸ್ವಲ್ಪವೇ ಬಳಸಬೇಕು. **ಬೆಲ್ಲದ ರೊಟ್ಟಿ:** ರಾಗಿ ಹಸಿಟ್ಟಿಗೆ ಬೆಲ್ಲ ಹಾಕಿ, ಹಿಟ್ಟಿನಂತೆ ಬೇಯಿಸಿ, ಸಣ್ಣ ಉಂಡೆ ಮಾಡಿ, ರತೂಡಿ (ಲತೂಡಿ) ಮಣೆ ಮೇಲೆ ಚಪಾತಿಯಂತೆ ಹೊಸೆದು, ಹೆಂಚಿನ ಮೇಲೆ ಸುಡುವುದು; ರುಚಿಗೆ ಬೇಕಿದ್ದರೆ ಚಟ್ನಿ, ಪಲ್ಯ, ತುಪ್ಪ ಇತ್ಯಾದಿ ಸೇರಿಸಿ ತಿನ್ನುವುದು. **ರಾಗಿ ಉಪ್ಪಿಟ್ಟು:** ರಾಗಿಯನ್ನು ಭತ್ತದ ಅರಳಿನಂತೆ ಹುರಿದು, ಅದನ್ನು ಬೀಸಿ ಹಸಿಟ್ಟು ಮಾಡಿಕೊಳ್ಳುವುದು; ಅದನ್ನು ಹುಳಿಮಜ್ಜಿಗೆಯೊಂದಿಗೆ ಅರಳಿಟ್ಟಿನಂತೆ ಕಲೆಸಿಕೊಂಡು (ಹುಡಿಯಾಗುವಂತೆ), ಉಪ್ಪಿಟ್ಟಿಗೆ ಒಗ್ಗರಣೆ ಹಾಕುವಂತೆ ಕುದಿಯುವ ನೀರಿನಲ್ಲಿ ಈ ರಾಗಿ ಪುಡಿ ಹಾಕಿ ತಿರುವಿ ಬೇಯಿಸುವುದು. **ಸಪ್ಪೆಸ್ರು:** ಅವರೆಕಾಳನ್ನು ಸ್ವಲ್ಪ ಉಪ್ಪು ಹಾಕಿ ಬೇಯಿಸಿಕೊಳ್ಳುವುದು; ಕಾಳು ಬಸಿದುಕೊಳ್ಳುವುದು. ಹಸಿಮೆಣಸಿನಕಾಯಿಯನ್ನು ಬಾಣಲಿ ಮೇಲೆ ಕಾಯಿಸಿ (ಗೋಳಿಸಿ) ಬಾಡಿಸಿಟ್ಟುಕೊಂಡಿದ್ದು, ಅದನ್ನು ಕಾಳು ಬಸಿದ ನೀರಿನಲ್ಲಿ ಬೇಕಾದಷ್ಟು ಕಿವುಚಿಕೊಂಡು ಊಟ ಮಾಡುವುದು. **ಗಿಣ್ಣಾಲು:** ಗಿಣ್ಣುಹಾಲನ್ನು ಪಾತ್ರೆಯಲ್ಲಿಟ್ಟು, ಅಗತ್ಯವಾದಷ್ಟು ಬೆಲ್ಲ ಹಾಕಿ ಕಾಯಿಸುತ್ತಾ ತಿರುವುತ್ತಾ ಇದ್ದು, ಹಾಲು ಒಡೆದು ಕುದಿ ಬರುತ್ತಿದ್ದಂತೆ ಇಳಿಸಿಕೊಳ್ಳುವುದು; ರುಚಿಗೆ ಬೇಕಿದ್ದರೆ ಚೂರು ಏಲಕ್ಕಿ ಪುಡಿ ಬೆರೆಸಿಕೊಂಡು ಕುಡಿಯುವುದು.

**ಉಡುಪು:** ಆಧುನಿಕತೆಯ ಪರಿಣಾಮವಾಗಿ ಈಗ ಉಡುಪುಗಳಲ್ಲಿಯೂ ಏಕಮಾದರಿ ನಾವೀನ್ಯತೆ ಕಂಡುಬರುತ್ತದೆ. ಹೀಗಾಗಿ ಯುವ ಜನರು ಪ್ಯಾಂಟು, ಶರ್ಟು, ಬೂಟ್ಸ್, ಕೈಗಡಿಯಾರ ಮೊದಲಾದವುಗಳನ್ನು ಧರಿಸುವುದು ಸಾಮಾನ್ಯವಾಗಿದೆ. ಆದರೆ ಹಿಂದೆ ಸಣ್ಣ ಮಕ್ಕಳಿಗೆ 'ಕಂಕಾರೆ', ಹೆಣ್ಣುಮಕ್ಕಳಿಗೆ 'ಪರಕಾರೆ' (ಕಟ್ಟುವ ಲಂಗ) ಹಾಕುತ್ತಿದ್ದರು. ಮಹಿಳೆಯರು ೧೬ ಅಥವಾ ೧೮ ಮೊಳದ ಸೀರೆಯನ್ನು ನಿರಿಗೆ ಹಾಕಿ ಉಡುತ್ತಿದ್ದರು; ಅಂಚಿನ ಕುಪ್ಪಸ ತೊಡುತ್ತಿದ್ದರು. ಈಗ ಗ್ರಾಮೀಣ ತರುಣಿಯರೂ ವರ್ಗ ಭೇದವಿರದೆ ಚೂಡಿದಾರ್ ಮೊದಲಾದ ಆಧುನಿಕ ವಿನ್ಯಾಸದ ಡ್ರೆಸ್‌ಗಳನ್ನು ಸಾಮಾನ್ಯವಾಗಿ ಧರಿಸುತ್ತಾರೆ. ಹಿಂದೆ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಗಂಡಸರು ಚಡ್ಡಿ, ಜೇಬು ಇರುವ ಬನಿಯನ್, ಟವೆಲ್, ಯಜಮಾನರು ವಿಶೇಷ ಸಂದರ್ಭಗಳಲ್ಲಿ ಕಚ್ಚೆಪಂಚೆ, ತುಂಬುದೋಳಿನ ಅಂಗಿ, ಕ್ಲೋಸ್‌ಕಾಲರ್ ಕೋಟು, ಶಲ್ಯ, ಪೇಟ, ಇತ್ಯಾದಿ ಧರಿಸುವುದು ಸಾಮಾನ್ಯವಾಗಿತ್ತು.

**ಆಭರಣ:** ಹುಡುಗಿಯರು ಮೈನೆರೆದ ಮೇಲೆ ಆಕೆಗೆ ಮೂಗು ಚುಚ್ಚಿ ಮೂಗುತಿ ಇಡುವುದು ಹಿಂದಿನ ಪದ್ಧತಿಯಾಗಿದ್ದಿತು. ಅದು ಈಗಲೂ ಬಹುಮಟ್ಟಿಗೆ ಉಳಿದುಬಂದಿದೆ. ಮಹಿಳೆಯರು ಅವರ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಕಿವಿಗೆ ವಾಲೆ, ಮಾಟಿ, ಮೂಗುನತ್ತು, ಕರಿಮಣಿ (ನಲ್ಲಪೂಸುಲು), ತಾಳಿ (ಬಟ್ಟು), ಕಾಲುಂಗುರ (ಮೆಟ್ಟು), ಕಾಲುಚೈನು (ಚೈನಾಲು), ಕಾಲಂದುಗೆ (ಕಾಲಂದ್ಲು), ಡಾಬು ಮೊದಲಾದ ಆಭರಣಗಳನ್ನು ಧರಿಸುವುದು ರೂಢಿಯಲ್ಲಿದೆ.

**ಹಬ್ಬ–ದೇವರು:** ಇತರ ಭಾಗಗಳಲ್ಲಿ ಕಂಡುಬರುವಂತೆ, ಜಿಲ್ಲೆಯ ಮುಸ್ಲಿಮರು ಏಕ ದೇವೋಪಾಸಕರಾದರೆ, ಕ್ರೈಸ್ತರು ಏಸುವನ್ನು ಆರಾಧಿಸುತ್ತಾರೆ. ಮೇರಿತಾಯಿ ಹಾಗು ಕೆಲವರನ್ನು ಸಂತರೆಂದು ಗೌರವಿಸುತ್ತಾರೆ. ಆದರೆ, ಹಿಂದೂಗಳು ಬಹು ದೇವೋಪಾಸಕರಾಗಿದ್ದಾರೆ. ವೈದಿಕ ಹಿನ್ನೆಲೆಯವರು ರಾಮ, ಕೃಷ್ಣ ಲಕ್ಷ್ಮಿ, ಸರಸ್ವತಿ, ಆಂಜನೇಯ ಮೊದಲಾದ ದೇವತೆಗಳನ್ನು, ವೀರಶೈವರು ಶಿವ, ಪಾರ್ವತಿ, ಗಣೇಶ, ನಂದಿ ಮೊದಲಾದ ದೇವರುಗಳನ್ನು ಪೂಜಿಸಿದರೆ, ವೈದಿಕೇತರರು ಈ ದೇವತೆಗಳ ಜೊತೆಗೆ ಮಾರಮ್ಮ, ಎಲ್ಲಮ್ಮ, ಬೀರಪ್ಪ, ಭೈರವ, ಮೈಲಾರ, ಮುನಿಯಪ್ಪ, ಗಂಗಮ್ಮ, ದ್ರೌಪದಿ, ಪಾಟಮ್ಮ, ತಂಗಡಿದ್ಯಾವ್ರ ಮೊದಲಾದ ದೇವರಿಗೆ ವಿಶೇಷವಾಗಿ ನಡೆದುಕೊಳ್ಳುತ್ತಾರೆ. ವಿದುರಾಶ್ವತ್ಥದ ನಾಗರಕಟ್ಟೆಗೆ ದೂರದ ಊರುಗಳಿಂದಲೂ ಆಸ್ತಿಕರು ಹೋಗುತ್ತಾರೆ. ಪ್ರಾಚೀನ ಪದ್ಧತಿಗಳಾದ ನಿಸರ್ಗ ದೇವತಾರಾಧನೆ ಹಾಗೂ ಕುಲದೇವತಾರಾಧನೆ ಹಿಂದೂಗಳಲ್ಲಿ ಸ್ವಲ್ಪಮಟ್ಟಿಗಾದರೂ ಇನ್ನೂ ಜೀವಂತವಾಗಿದೆ. ಬೀಸುವ ಕಲ್ಲು, ರುಬ್ಬುವ ಕಲ್ಲುಗಳನ್ನೂ ಕೆಲವರು ದೇವರೆಂದು ನಂಬಿ ಪೂಜಿಸುತ್ತಾರೆ ಎಂಬುದು ಈ ಭಾಗದ ವಿಶೇಷವೆನಿಸುತ್ತದೆ. ಸವೆದುಹೋದ ಬೀಸುವ ಕಲ್ಲು ಅಥವಾ ರುಬ್ಬುಗುಂಡುಗಳಿಗೆ ಉಳಿಯಿಂದ ಕಲ್ಲುಕುಟಿಗನು ಮುಳ್ಳುಉಯ್ದು ಸುಂಕು ಮಾಡುವಾಗ, ಆಕಸ್ಮಿಕವಾಗಿ ಜೋರು ಏಟಿನಿಂದ ಆ ಕಲ್ಲು ಒಡೆದುಹೋದರೆ, ಕೂಡಲೇ ಅದನ್ನು ಪೂಜಿಸಿ, ಊರೆಲ್ಲಾ ಮೆರವಣಿಗೆ ಮಾಡಿ, ಬಳಿಕ ನೆರೆ ಊರಿನ ಗುಡಿಯಲ್ಲಿ ಎಸೆದುಬರುತ್ತಾರೆ. 'ಭಿನ್ನವಾದ ಆ ಕಲ್ಲು ವಿಕೃತಗೊಂಡ ಗೌರಮ್ಮ ತಾಯಿಯಂತೆ; ಅದು ಊರಲ್ಲಿದ್ದರೆ ಮಳೆ, ಬೆಳೆ ಸರಿಯಾಗಿ ಆಗುವುದಿಲ್ಲ' – ಎಂಬ ನಂಬಿಕೆ ಗ್ರಾಮೀಣರಲ್ಲಿದೆ.

ಆದ್ದರಿಂದ ನೆರೆಯೂರವರೂ ಆ ಕಲ್ಲನ್ನು ಅದೇ ರೀತಿ ಪೂಜಿಸಿ ಇನ್ನೊಂದು ಊರಿನ ಸರಹದ್ದಿಗೆ ದಾಟಿಸಿಬಿಡುತ್ತಾರೆ (ಉಲ್ಲೇಖ: ಬಂಗಾರಪೇಟೆ ತಾಲೂಕು ದರ್ಶನ).

**ರಾವಣೇಶ್ವರ, ದುರ್ಯೋಧನರ ಆರಾಧನೆ:** ಸುಗಟೂರು, ವಕ್ಕಲೇರಿ, ಮುಳಬಾಗಿಲುಗಳಲ್ಲಿ ರಾವಣೇಶ್ವರ ವಿಗ್ರಹಗಳು ಇವೆ. ವಕ್ಕಲೇರಿಯಲ್ಲಿ ಫೆಬ್ರವರಿಯಲ್ಲಿ ನಡೆಯುವ ಮಾರ್ಕಂಡೇಶ್ವರನ ಜಾತ್ರೆಯಲ್ಲಿ ರಾವಣನ (ವಾಹನ) ಪ್ರತಿಮೆ ಮೇಲೆ ಮಾರ್ಕಂಡೇಶ್ವರನನ್ನು ಇರಿಸಿ ಮೆರವಣಿಗೆ ಮಾಡುತ್ತಾರೆ. ಅಕ್ಕಪಕ್ಕದ ಊರವರೂ ಆಗ ಆರತಿ ಬೆಳಗಿ ಪೂಜೆ ಸಲ್ಲಿಸುತ್ತಾರೆ. ಸುಮಾರು ೧೫೦ ವರ್ಷಗಳ ಹಿಂದೆ ಈ ರಾವಣ ಪ್ರತಿಮೆ ಮಾಡಿಸಿದ್ದಾಗಿ ತಿಳಿದುಬರುತ್ತದೆ. ರಾವಣೇಶ್ವರನಿಗೆ ಕೆಲವರು ಹರಕೆಯನ್ನು ಒಪ್ಪಿಸುತ್ತಾರೆ. ಪ್ರತಿಮೆಯನ್ನು ಈಚೆ ತೆಗೆವ ಮುನ್ನ 'ಬಲಿ'ಯನ್ನು ನೀಡುವ ಪದ್ಧತಿಯೂ ಇದೆ. ದುರ್ಯೋಧನ, ಕರ್ಣರ ವಿಗ್ರಹಗಳನ್ನು ಪೂಜಿಸುವ ಪದ್ಧತಿಯನ್ನು ಸುಮಾರು ೧೫ ವರ್ಷಗಳ ಹಿಂದೆ ವಕ್ಕಲೇರಿಯ ವಹ್ನಿಕುಲದ ಮರಿಯಪ್ಪ ಎಂಬುವರು ಸ್ವಆಸಕ್ತಿಯಿಂದ ಪ್ರಾರಂಭಿಸಿದರೆಂದು ತಿಳಿದುಬರುತ್ತದೆ. ಮೆರವಣಿಗೆ ಸಂದರ್ಭದಲ್ಲಿ ಊರವರು ಆ ವಿಗ್ರಹಗಳಿಗೆ ಪೂಜೆ ಮಾಡಿಸುತ್ತಿದ್ದರು; 'ಬಲಿ'ಯನ್ನು ನೀಡುತ್ತಿದ್ದರು. ಮರಿಯಪ್ಪ ಅವರ ನಿಧನದ ಬಳಿಕ ಸುಮಾರು ಐದು ವರ್ಷಗಳ ಹಿಂದೆ, ಈ ವಿಗ್ರಹಗಳನ್ನು ಪಕ್ಕದ ಲಕ್ಷ್ಮೀಪುರದವರಿಗೆ ನೀಡಿದರೆಂದು ಸ್ಥಳೀಯರಿಂದ ತಿಳಿದುಬಂದಿದೆ.

**ಮುನಿಯಪ್ಪ (ಮುನೇಶ್ವರ):** ಕೋಲಾರ ಭಾಗದ 'ಮುನಿಯಪ್ಪನ ಪರಿಕಲ್ಪನೆ ಸಹ ವಿಭಿನ್ನವಾಗಿರುವುದು ಉಲ್ಲೇಖನೀಯವಾಗಿದೆ. ಬಲಗೈಲಿ ಖಡ್ಗ ಹಿಡಿದು, ನೆಲದ ಮೇಲೆ ಅಂಗಾತ ಮಲಗಿದ ಉಗ್ರರೂಪಿ ಬೃಹತ್ ಮಾನವನಂತೆ (ಕೆಲವೆಡೆ ಬೆತ್ತಲೆ ರೂಪಿ) ಈ ಮುನಿಯಪ್ಪನ ಬಣ್ಣದ ಪ್ರತಿಮೆಯನ್ನು ಮಣ್ಣು ಅಥವಾ ಸಿಮೆಂಟ್‌ನಿಂದ ರಸ್ತೆ ಬದಿ ರೂಪಿಸುವುದು ಇಲ್ಲಿನ ವಿಶೇಷವಾಗಿದೆ. ಕೆಮ್ಮು, ಜ್ವರ ಮೊದಲಾದ ಖಾಯಿಲೆಯಾದವರು ಹಾಗೂ ಮಕ್ಕಳ ಕೂದಲು ತೆಗೆಸುವವರು ಈ ದೇವರಿಗೆ ಬಲಿ ಕೊಟ್ಟು, ಪೂಜೆ ಮಾಡಿಸುವ ನಡವಳಿಕೆಕೆ ಇಟ್ಟುಕೊಂಡಿದ್ದಾರೆ. ಮಾಲೂರು ತಾಲೂಕು ಬನಹಳ್ಳಿಯಲ್ಲಿನ ಮುನೇಶ್ವರನಿಗೆ ವೈಶ್ಯರು ಸಹ ನಡೆದುಕೊಳ್ಳುತ್ತಾರೆ. ಕೆಲವು ಬ್ರಾಹ್ಮಣರೂ ಶಾಖಾಹಾರದ ಎಡೆಯೊಂದಿಗೆ ಮುನೇಶ್ವರನನ್ನು ಪೂಜಿಸುವುದುಂಟು.

ಹಿಂದೂಗಳು ಪೂಜಿಸುವ ಈ ಎಲ್ಲಾ ದೈವಗಳಿಗೂ ಬಹುಮಟ್ಟಿಗೆ ಪ್ರತ್ಯೇಕವಾದ ಪೂಜಾಕ್ರಮ, ಹಬ್ಬ ಆರಾಧನೆಗಳಿರುತ್ತವೆ. ನಾಡಿನ ಇತರ ಭಾಗಗಳಲ್ಲಿ ಕಂಡುಬರುವ ಹೆಚ್ಚಿನ ಹಬ್ಬ ಹರಿದಿನಗಳು ಪ್ರಾದೇಶಿಕ ಲಕ್ಷಣಗಳೊಂದಿಗೆ ಕೋಲಾರ ಭಾಗದಲ್ಲಿಯೂ ಕಂಡುಬರುತ್ತವೆ. ಈ ಹಬ್ಬಗಳನ್ನು ಬಹುಮಟ್ಟಿಗೆ ಎಲ್ಲಾ ಜಾತಿಯವರೂ ಆಚರಿಸುತ್ತಾರಾದರೂ ಅದಕ್ಕೆ ಅಪವಾದಗಳೂ ಇವೆ (ನಿದರ್ಶನಕ್ಕೆ ಸಿಂದ್ ಮಾದಿಗರು ಕದಿರೆ ಹುಣ್ಣಿಮೆ ಹಾಗೂ ದೀಪಾವಳಿಗಳನ್ನು ಆಚರಿಸುವುದಿಲ್ಲ. ಕುರುಡುಮಲೆಯ ಹರಿಜನರು ಯುಗಾದಿ ಆಚರಿಸುವುದಿಲ್ಲ). ಜಿಲ್ಲೆಯಲ್ಲಿ ಕಾಣಬರುವ ಕೆಲವು ಹಬ್ಬ ಆರಾಧನೆಗಳು ಹೀಗಿವೆ: **ಯುಗಾದಿ:** ಸಾಮಾನ್ಯವಾಗಿ ಈ ಹಬ್ಬದಂದು ಎಣ್ಣೆ ಸ್ನಾನ, ಹೊಸ ವಸ್ತ್ರ ಧಾರಣೆ, ಒಬ್ಬಟ್ಟಿನ ಊಟ ಮಾಮೂಲಿನಂತೆ ನಡೆಯುತ್ತದೆ. ಕಿರಿಯರು ಮನೆಮನೆಗೆ ಹೋಗಿ ಹಿರಿಯರಿಗೆ ಬೇವು, ಬೆಲ್ಲ ನೀಡಿ ಅವರ ಕಾಲಿಗೆ ನಮಸ್ಕರಿಸುವ ಪದ್ಧತಿಯೂ ಇದೆ. ಆದರೆ, ಕೃಷಿಕರು ಮನೆಯಲ್ಲಿ ದೇವರು ಪೂಜಿಸುವ ಸ್ಥಳದಲ್ಲಿ ಹೊಸ ನೇಗಿಲು ಇಟ್ಟು, ಅದರ ಮುಂದೆ ಗೊಬ್ಬರದೊಂದಿಗೆ ಬೆರೆಸಿದ ನವಧಾನ್ಯಗಳ ತಟ್ಟೆ ಇಟ್ಟು ಪೂಜೆ ಮಾಡುವುದು ವಿಶೇಷ ನಡವಳಿಕೆಕೆಯಾಗಿದೆ. ಒಂಬತ್ತು ದಿನಗಳ ಹೊತ್ತಿಗೆ ಈ ಧಾನ್ಯಗಳು ಮೊಳೆತು ಪೈರಾಗಿ ಬೆಳೆಯುತ್ತವೆ. ಒಂಬತ್ತನೇ ದಿನಕ್ಕೆ ಅಂದರೆ ಶ್ರೀರಾಮನವಮಿ ದಿನದಂದು ಪೈರಿಗೆ ಪೂಜೆ ಮಾಡಿ, ನೀರಿಗೆ ಬಿಡುತ್ತಾರೆ. ಮೊಳಕೆ ಯಾವ ರೀತಿ ಬೆಳೆಯುತ್ತದೆಯೋ ಹೊಲಗಳಲ್ಲಿ ಆ ವರ್ಷ ಅದೇ ರೀತಿ ಬೆಳೆ ಬರುತ್ತದೆ ಅನ್ನುವುದು ಅವರ ನಂಬಿಕೆ. ಮಾರನೇ ದಿನ **ವರ್ಷ ತೊಡಕು**. ಅಂದು ಅಭ್ಯಾಸ ಇರುವವರು ತಪ್ಪದೇ ಮಾಂಸಾಹಾರ ಮಾಡುತ್ತಾರೆ. **ಶ್ರಾವಣಮಾಸ**ದಲ್ಲಿ ಒಂದು ಶನಿವಾರ ಅವರವರ ಮನೆ ದೇವರಿಗೆ ಪೂಜೆ ಮಾಡಿಸಿಕೊಂಡು ಬಂದು, ಮನೆಯಲ್ಲಿ ದೇವರ ದೀಪ ಹಚ್ಚಿ ಪೂಜೆ ಮಾಡುತ್ತಾರೆ. ಬೆಳಗ್ಗಿನಿಂದ ಎಲ್ಲರೂ ಉಪವಾಸವಿದ್ದು, ಸ್ನಾನ ಮಾಡಿ, ಸಂಜೆ ದೇವರ ತೀರ್ಥ ಸ್ವೀಕರಿಸಿ ಊಟ ಮಾಡುತ್ತಾರೆ. ಶ್ರಾವಣ ಶನಿವಾರಗಳಲ್ಲಿ ದೇವರ ಹೆಸರಲ್ಲಿ ಇತರ ಮನೆಗಳಿಂದ ಉಪಾದಾನ ಪಡೆದು, ದೇವರಿಗೆ ನೈವೇದ್ಯ ಮಾಡುವ ಸಂಪ್ರದಾಯ ಕೆಲವು ವೆಂಕಟೇಶ್ವರನ ಒಕ್ಕಲಿನವರಲ್ಲಿ ಇದೆ. **ಗಣೇಶನ ಹಬ್ಬ**ಕ್ಕೆ ಸಂಬಂಧಿಸಿದಂತೆ ಈ ಭಾಗದಲ್ಲಿನ ಎರಡು ವಿಶೇಷ ಸಂಗತಿಗಳು ಗಮನಾರ್ಹವಾಗಿವೆ. ಆನೆಮುಖದ ಗಣೇಶನಿಗೆ ಅರ್ಥಾತ್ ಆನೆಗೆ ಪ್ರಿಯವಾದುದು ಎಂಬ ಭಾವನೆಯಿಂದ ಮಕ್ಕಳು ಎಲ್ಲಾ ಬಗೆಯ ಎಲೆ, ಸೊಪ್ಪುಗಳನ್ನು ಸಂಗ್ರಹಿಸಿ ತಂದು ಗಣೇಶನನ್ನು ಪೂಜಿಸುತ್ತಾರೆ. ಹಾಗೆಯೇ, ಕೆಲವರು ಮನೆಗಳಲ್ಲಿ ಗಣೇಶನ

ಬೊಂಬೆ ಕೂರಿಸಿ ಪೂಜಿಸುವುದಕ್ಕೆ ಬದಲು ಸಗಣಿ ಉಂಡೆಗೆ ಗರಿಕೆ ಪತ್ರೆ ಚುಚ್ಚಿ ಮಾಡುವ ಪಿಳ್ಳೇರಾಯನನ್ನು ಇಟ್ಟು ಪೂಜಿಸುತ್ತಾರೆ. ಆ ಮೊದಲು ಹುತ್ತಕ್ಕೆ ತನಿ ಎರೆದುಕೊಂಡು ಬರುವುದು ಸಂಪ್ರದಾಯವಾಗಿದೆ. **ಮಹಾನವಮಿ:** ಗೌರಿ ಹಬ್ಬದಂದು ಸಮಾಧಿಗಳಿಗೆ ಪೂಜೆ ಮಾಡದವರು ಮಹಾನವಮಿ ಹಬ್ಬದಂದು ಹೋಗಿ ಪೂಜೆ ಮಾಡುತ್ತಾರೆ. ಬನ್ನಿ ಪೂಜೆ, ಆಯುಧ ಪೂಜೆಯನ್ನು ಮಾಡುತ್ತಾರೆ. ಕೆಲವರು ಬನ್ನಿಯ ಎಲೆ, ಹೂಗಳನ್ನು ತಮ್ಮ ಮನೆಗಳಿಗೂ ತೆಗೆದುಕೊಂಡು ಹೋಗುತ್ತಾರೆ. ನವರಾತ್ರಿಯಲ್ಲಿ ವಿವಿಧ ಗೊಂಬೆಗಳನ್ನು ಅಲಂಕಾರಿಕವಾಗಿ ಪ್ರದರ್ಶಿಸುವುದು ಜಿಲ್ಲೆಯ ಕೆಲವೆಡೆ ಪದ್ಧತಿಯಾಗಿ ಉಳಿದಿದೆ. ಕೋಲಾರ ತಾಲೂಕಿನ ಅಚ್ಚಟ್ನಳ್ಳಿಯಲ್ಲಿ ವಿಶೇಷ ಬಗೆಯ ಬಹು ಅಪರೂಪದ ಕೀಲುಗೊಂಬೆಗಳ ಪ್ರದರ್ಶನ ನಡೆಯುತ್ತದೆ. **ದೀಪಾವಳಿ** ಹಬ್ಬದ ವಿಶೇಷವಾಗಿ ಕಜ್ಜಾಯ ಮಾಡುತ್ತಾರೆ. ಆದ್ದರಿಂದಲೇ ಇದನ್ನು ಕಜ್ಜಾಯಗಳ ಹಬ್ಬವೆಂದೂ ಕರೆಯುತ್ತಾರೆ. ಮನೆಯಲ್ಲಿ ಎಲ್ಲರೂ ಗೆಜ್ಜೆಮುಡಿ ಸೇರಿಸಿದ 'ನೋಮು'ದಾರ ಕೈಗೆ ಕಟ್ಟಿಕೊಳ್ಳುತ್ತಾರೆ. ಮನೆಯವರು ಪಾಕಡಕೆ (ಹಸಿ ಅಡಕೆ ಐದು, ಬಟ್ಟಲಡಿಕೆ ಐದು), ಅರಿಸಿನ ಕೊಂಬು ಐದು, ಬಾಳೆಹಣ್ಣು ಹಾಗೂ ಕಜ್ಜಾಯಗಳನ್ನು (ಪದ್ಧತಿಯಂತೆ ಐದು ಅಥವಾ ಒಂಬತ್ತರಂತೆ) ತಟ್ಟೆಯಲ್ಲಿಟ್ಟುಕೊಂಡು ಊರಲ್ಲಿ ಗೌರಮ್ಮನನ್ನು ಪೂಜಿಸಿದ ಯಾವುದಾದರೂ ದೇವಸ್ಥಾನಕ್ಕೆ ಹೋಗಿ, ಅಲ್ಲಿ ಹಿಂದಿನ ವರ್ಷದ ನೋಮುದಾರಗಳನ್ನು ಹಿಂದಿರುಗಿಸಿ, ಹೊಸ ದಾರಗಳಿಗೆ ಪೂಜೆ ಮಾಡಿಸಿಕೊಂಡು ಬಂದು, ಮನೆಯಲ್ಲಿ ಸಣ್ಣ ಕೂಸಿನಿಂದ ಹಿರಿಯರವರೆಗೆ ಎಲ್ಲರೂ ಕಟ್ಟಿಕೊಳ್ಳುತ್ತಾರೆ. ಸಂಜೆ ವೇಳೆ ಮನೆ ಮುಂಬಾಗಿಲ ಪಕ್ಕ ಹಣತೆಗಳನ್ನು ಹಚ್ಚಿಡುತ್ತಾರೆ. ಕಿಸರು ನೀರು ಆರತಿ ಮಾಡಿಕೊಂಡ ಚಿಕ್ಕ ಹೆಣ್ಣುಮಕ್ಕಳು ಆಚೆಯಿಂದ ಬಂದ ಹಿರಿಯರಿಗೆ ಬಾಗಿಲಲ್ಲಿ ಆರತಿ ಬೆಳಗಿ, ಕಾಣಿಕೆ ಪಡೆಯುತ್ತಾರೆ. ಕಾರ್ತಿಕ ಮಾಸದಲ್ಲಿ ಹೊಸದೇವರು ಒಕ್ಕಲವರು ಹೊಸದೇವರ ಹಬ್ಬ ಮಾಡುತ್ತಾರೆ. ದೀಪಾವಳಿಯಲ್ಲಿ ಲಕ್ಷ್ಮೀ ಪೂಜೆ ಮತ್ತು ಕೇದಾರೇಶ್ವರ ವ್ರತ ಮಾಡುವವರೂ ಇದ್ದಾರೆ. **ಸಂಕ್ರಾಂತಿ:** ರೈತರು ತಮ್ಮ ದನ, ಎಮ್ಮೆ, ಕುರಿಗಳ ಮೈ ತೊಳೆದು ಬಣ್ಣ ಹಚ್ಚುತ್ತಾರೆ. ದನಗಳನ್ನು ಕಟ್ಟುವ ಗಾಡಿಕಲ್ಲು (ಗ್ವಾಂತಿಗೆ ಕಲ್ಲು) ತೊಳೆದು, ಅರಿಸಿನ ಕುಂಕುಮ ಇಟ್ಟು ಸಂಜೆ ಪೂಜೆ ಮಾಡುತ್ತಾರೆ. ಮಧ್ಯಾಹ್ನ ಮನೇಲಿ ಪೂಜೆ ಆದಮೇಲೆ ದನಗಳಿಗೆ ಕಬ್ಬು, ಉಪ್ಪು, ಪೊಂಗಲು ತಿನ್ನಿಸುತ್ತಾರೆ. ಅವರೆಕಾಯಿ ಮತ್ತು ಕಡಲೆಕಾಯಿ ಬೇಯಿಸಿ ತಿನ್ನುವುದು ಈ ಹಬ್ಬದ ಆಹಾರ ವಿಶೇಷವಾಗಿದೆ. ಚಿಕ್ಕಬಳ್ಳಾಪುರ ಭಾಗದ ರೈತರು ಅಂದು ಸಂಜೆ ಕಾಟಿಂರಾಯನ ಪೂಜೆ ಮಾಡುತ್ತಾರೆ. ಊರಾಚೆ ಒಂದು ಸ್ಥಳದಲ್ಲಿ ಮಡಿವಾಳಿಯು ಲಕಳಿ ಸೊಪ್ಪಿನಿಂದ ಸಣ್ಣ ಗುಡಿ ಮಾಡಿ, ಮೇಲೆ ಬಿಳಿ ಪಂಚೆ ಹೊದ್ದಿಸಿ, ಒಳಗೆ ಐದು ಕಲ್ಲು ಇಟ್ಟು ದೇವರೆಂದು ಪೂಜಿಸುತ್ತಾನೆ. ಪಕ್ಕದಲ್ಲಿ ಹುತ್ತ ಇರದಿದ್ದರೆ ಮಣ್ಣಿನಿಂದ ಹುತ್ತದ ರೀತಿ ಮಾಡಿರುತ್ತಾನೆ. ದನಗಳಿಗೆ ಅಲ್ಲಿ ತೀರ್ಥ ಹಾಕಿಸಿಕೊಂಡು ಬರುವಾಗ ಬೆಂಕಿಮೇಲೆ ನೆಗೆಸುತ್ತಾರೆ. ಕಾಟಿಂರಾಯನಿಗೆ ಹರಕೆ ಮಾಡಿಕೊಂಡವರು ಕೋಳಿಗಳ ಬಲಿಕೊಡುತ್ತಾರೆ. ಗೃಹಿಣಿಯರು ತಮ್ಮ ಮನೆ ಮುಂಬಾಗಿಲ ಗೋಡೆ ಮೇಲೆ ಅಕ್ಕ-ಪಕ್ಕ ಹಾಗೂ ಮೇಲೆ ತಲಾ ಮೂರು ಮೂರರಂತೆ ಸಗಣಿ ಉಂಡೆ ಕಚ್ಚಿಸಿ, ಅವುಗಳಿಗೆ ಅವರೆ, ತುಂಬೆ, ಹುಚ್ಚೆಳ್ಳು ಹೂ ಮುಡಿಸುವ ಪರಿಪಾಟವಿದೆ. ಶಿಡ್ಲಘಟ್ಟ ಭಾಗದ ಕೃಷಿಕರು ನಡೆಸುವ 'ಚಂಕ್ರಾಂತಿ'ಯ ಅಂಗವಾಗಿ – ಊರ ನಡುವೆ 'ಶಂಕರು' ಎಂದು ಎರಡು ಕಲ್ಲು ಇಟ್ಟು ಪೂಜೆ ಮಾಡುತ್ತಾರೆ. ಮೊಸರನ್ನದ ಎರಡು ಎಡೆ ಹಾಕಿ ಒಂದನ್ನು ಊರ ದನ ಮೇಯಿಸುವ ತೋಟಿಗೂ ಇನ್ನೊಂದನ್ನು ತಳವಾರನಿಗೂ ನೀಡುತ್ತಾರೆ. ಊರ ಹೊರಗೆ ಕಾಟಿಂರಾಯನ ಸಣ್ಣ ಗುಡಿ ಇರುತ್ತದೆ. ಅದರಲ್ಲಿ ಮುಷ್ಟಿ ಗಾತ್ರದ ಮೂರು ಕಲ್ಲುಗಳನ್ನಿಟ್ಟಿರುತ್ತಾರೆ. ಈ ಗೂಡಿನಂತಹ ಗುಡಿಯ ಮೇಲೆ ಮಣ್ಣಿನ ಮುದ್ದೆಗಳನ್ನಿಟ್ಟು ಅವುಗಳಿಗೆ ಗುಗ್ಗರಿ ಗಿಡದ ರೆಂಬೆಗಳನ್ನು ಚುಚ್ಚುತ್ತಾರೆ. ಗುಡಿಗೆ ಎದಿರು ಒಂದು ಚಿಕ್ಕ ಕಲ್ಲು ನೆಟ್ಟು ಅದಕ್ಕೂ ಗುಡಿಗೂ ಸುದ್ದೆ ಮತ್ತು ಕೆಮ್ಮಣ್ಣು ಪಟ್ಟೆಗಳನ್ನು ಬಳಿದಿರುತ್ತಾರೆ. ಹಬ್ಬದಂದು ಆ ಗುಡಿ ಬಳಿ ಅವರೆಕಾಯಿ ಬೇಯಿಸಿ, ಹಾಲು ಉಕ್ಕಿಸುತ್ತಾರೆ. ದೇವರಿಗೆ ಮೊಸರನ್ನ ಎಡೆ ಹಾಕುತ್ತಾರೆ. ಪೂಜೆ ಆದಮೇಲೆ ಎತ್ತುಗಳ ಮೆರವಣಿಗೆಯಲ್ಲಿ ಊರೊಳಗೆ ಬರುತ್ತಾರೆ. ಗುಡಿ ಬಳಿಯಿಂದ ತಂದ ಅನ್ನ ಮತ್ತು ಗುಗ್ಗರಿ ಹೂವನ್ನು ಮನೆಗಳ ಮೇಲೆ ಹಾಕಿ (ಇದನ್ನು ಮುದ್ದೆ ಕೂಳು ಹಾಕುವುದು ಎನ್ನುತ್ತಾರೆ) ಅವರೆಕಾಯನ್ನು ಪ್ರಸಾದವಾಗಿ ತಿನ್ನುತ್ತಾರೆ. ಎತ್ತುಗಳ ಮೆರವಣಿಗೆ ಆದಮೇಲೆ ಊರು ಬಾಗಿಲಲ್ಲಿ ಅವುಗಳನ್ನು ಬೆಂಕಿಮೇಲೆ (ಕಿಚ್ಚು ಹಾರಿಸುವ ಕ್ರಿಯೆ) ನೆಗೆಸುತ್ತಾರೆ. ಸಂಕ್ರಾಂತಿ ಮಾಸದಲ್ಲಿ ಕೆಲವು ಮಹಿಳೆಯರು (ಜೋಗಿ/ಸನ್ಯಾಸಿ) ಕಾಟಿಮಲಿಂಗ ದೇವರ ಪ್ರತೀಕವಾಗಿ ಸಗಣಿ ಉಂಡೆಗೆ ಹೂ ಇಟ್ಟು, ಅದನ್ನು ಪುಟ್ಟಿಯಲ್ಲಿರಿಸಿ, ಹೊತ್ತುಕೊಂಡು, ಗಬ್ಬಿಲ ಹಾಡು ಹಾಡುತ್ತಾ ಊರೂರಿಗೆ ಹೋಗಿ ಧಾನ್ಯ ಸಂಗ್ರಹಿಸುವ ರೂಢಿಯೂ ಜಿಲ್ಲೆಯಲ್ಲಿ ಕಾಣಬರುತ್ತದೆ. ಜಿಲ್ಲೆಯ ಸಂಕ್ರಾಂತಿಯ ಇನ್ನೊಂದು ವಿಶೇಷವೆಂದರೆ ಎತ್ತುಗಳ ಓಟದ ಸ್ಪರ್ಧೆ ಏರ್ಪಡಿಸುವುದು. ಮುಳಬಾಗಿಲು ತಾಲೂಕಿನ ದೂಲಪಲ್ಲಿ, ಯಲಚೇಪಲ್ಲಿ, ಮಾಲೂರು ತಾಲೂಕಿನ ಇಗ್ಗಲೂರು,

ಸಂಪಂಗೆರೆ ಮೊದಲಾದೆಡೆ ಹೋರಿ, ಎತ್ತು, ಕೋಣಗಳನ್ನು ಸ್ಪರ್ಧಾತ್ಮಕವಾಗಿ ಓಡಿಸುವ, ಓಡುವ ಹೋರಿಗಳ ಅಲಂಕಾರದ ಕುಚ್ಚು ಕೀಳುವ, ಗೆದ್ದವರಿಗೆ ಬಹುಮಾನ ನೀಡುವ ಕಾರ್ಯಕ್ರಮಗಳು ಬಹು ಅದ್ದೂರಿಯಾಗಿ ನಡೆಯುತ್ತವೆ. ಸಂಕ್ರಾಂತಿಯನ್ನು ಈ ಭಾಗದ ಜನರು ದೊಡ್ಡ ಹಬ್ಬ ಇಲ್ಲವೇ ಎತ್ತುಗಳ ಹಬ್ಬ ಎಂದೂ ಕರೆಯುತ್ತಾರೆ. **ಶಿವರಾತ್ರಿ:** ಅಂದು ದಿನವಿಡೀ ಉಪವಾಸ ಮಾಡುತ್ತಾರೆ. ರಾತ್ರಿ ದೇವರಿಗೆ ಹಣ್ಣಂಪಲು, ಹೆಸರುಬೇಳೆ ಎಡೆ ಹಾಕುತ್ತಾರೆ. ಉಪ್ಪಿಟ್ಟು ಅಥವಾ ಅವಲಕ್ಕಿ ಮಾಡಿ ಎಲ್ಲರೂ ಅದನ್ನೇ ಸೇವಿಸುತ್ತಾರೆ. ಬೆಳಗಿನ ಜಾವ ಎದ್ದು, ಸ್ನಾನ ಮಾಡಿ, ಎಲ್ಲಾ ರೀತಿ ಅಡುಗೆ ಮಾಡಿ, ದೇವರಿಗೆ ಎಡೆ ಹಾಕಿ, ಪೂಜೆ ಮಾಡಿ ("ದೊಡ್ಡವರು ಬರುತ್ತಾರೆ" ಎಂಬ ನಂಬಿಕೆಯಲ್ಲಿ ಒಂದು ಎಡೆಯನ್ನು ಮಾಳಿಗೆ ಮೇಲೆ ಇಡುತ್ತಾರೆ. ಅದನ್ನು ಕಾಗೆ ತಿಂದ ಮೇಲೆ) ಊಟ ಮಾಡುತ್ತಾರೆ. ವಿಭೂತಿ ಉಂಡೆ ಕೊಟ್ಟ ಅಯ್ಯನೋರಿಗೆ ಒಣಪಡಿ ಕೊಡುವ ಪದ್ಧತಿಯೂ ಇದೆ. ಇವುಗಳಲ್ಲದೆ ಕೆಲವು ಜಾತಿಯವರಿಗೇ ವಿಶಿಷ್ಟವಾದ ಹಬ್ಬ–ಆರಾಧನೆಗಳೂ ಜಿಲ್ಲೆಯಲ್ಲಿ ಸಾಂಪ್ರದಾಯಿಕವಾಗಿ ಇವೆ. ಅವುಗಳ ಕೆಲವು ಮಾದರಿಗಳನ್ನು ಇಲ್ಲಿ ಗಮನಿಸಬಹುದು:

**ಭಾರತ ಹುಣ್ಣಿಮೆ:** ಜಿಲ್ಲೆಯ ಹರಿಜನರು ಫೆಬ್ರವರಿ ಅಥವಾ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬಕ್ಕಾಗಿ ಪ್ರತಿಯೊಂದೂ ಹೊಸ ವಸ್ತುವನ್ನು ತರುತ್ತಾರೆ. ಹಬ್ಬದ ಅಡುಗೆ ಮಾಡುತ್ತಾರೆ. ಸಾಯಂಕಾಲ ಊರ ಮುಂದಿನ ಗಂಗಮ್ಮನ ಗುಡಿಯ ಮುಂದೆ ಒಂದು ಹೊಸ ಮಡಕೆಯ ತುಂಬಾ ನೀರು, ಹೊಸ ದಾರ ಮತ್ತು ಸೂಜಿಯೊಂದನ್ನು ಇಟ್ಟಿರುತ್ತಾರೆ. ಅವರ ಪ್ರಕಾರ ಮಹಾಭಾರತದ ಯುದ್ಧದಲ್ಲಿ ಭಾಗವಹಿಸಲು ಹೋದ ತಮ್ಮ ವೀರರು ಆ ದಿನ ಹಿಂತಿರುಗುತ್ತಾರೆ. ಅವರಿಗೆ ಕುಡಿಯಲು ಮಡಕೆಯಲ್ಲಿ ನೀರು; ಯುದ್ಧದಲ್ಲಿ ಹರಿದ ಅವರ ದೇಹದ ಭಾಗಗಳನ್ನು ಹೊಲಿದುಕೊಳ್ಳಲು ಈ ಸೂಜಿ ಮತ್ತು ದಾರ. ಅಂದು ರಾತ್ರಿಯೆಲ್ಲಾ ಹಾಡುಗಳನ್ನು ಹಾಡುತ್ತಾರೆ. ಆ ರಾತ್ರಿ ಮೂರು ನಕ್ಷತ್ರಗಳಲ್ಲಿ ಯಾವ ನಕ್ಷತ್ರ ಮುಂದೆ ಹೋಗುತ್ತದೆ ಎಂಬುದರ ಮೇಲೆ ಆ ವರ್ಷದ ಫಲಾಫಲಗಳಿರುತ್ತವೆ ಎಂದು ತಿಳಿಯುತ್ತಾರೆ.

**ಹೊಸದೇವರು:** ಮೊರಸು ಒಕ್ಕಲಿಗರ (ಕಾಪುಲು) ಹೊಸದೇವರು ಆ ಜಾತಿಯ ಮಹಿಳೆಯರಿಗೇ ಸೀಮಿತವಾದ ವಿಶಿಷ್ಟ ಹಬ್ಬವಾಗಿದೆ. ಮನೆಗೆ ಬಂದ ಹೊಸ ಸೊಸೆಗೆ ಹೊಸದೇವರನ್ನು ಕೊಡುವ, ಕುಟುಂಬದ ಗೃಹಿಣಿಯರೆಲ್ಲರೂ ಒಟ್ಟಾಗಿ ಪ್ರತೀ ವರ್ಷ ಹೊಸದೇವರನ್ನು ಆರಾಧಿಸುವ ಈ ಹಬ್ಬವು ಹೊಸ ಸೊಸೆಯನ್ನು ತಮ್ಮ ಮನೆತನಕ್ಕೆ ವಿಧ್ಯುಕ್ತವಾಗಿ ಸೇರಿಸಿಕೊಳ್ಳುವ ಹಾಗೂ ಮುಂದೆಯೂ ತಮ್ಮ ಕುಲದೈವದಲ್ಲಿ ಶ್ರದ್ಧೆ, ನಂಬಿಕೆಗಳನ್ನು ಸ್ಥಿರೀಕರಿಸಿಕೊಳ್ಳುವ ಆಶಯವನ್ನು ಹೊಂದಿದಂತಿದೆ. ಅಲ್ಲದೆ, ಇದು ಆ ವರ್ಷದ ಹೊಸ ಬೆಳೆಯ ಆರಾಧನೆಯ ಒಂದು ರೂಪವಾಗಿಯೂ ಕಂಡುಬರುತ್ತದೆ. ಹೊಸದೇವರು ಹಬ್ಬವನ್ನು ಕೆಲವರು ವರ್ಷಕ್ಕೊಮ್ಮೆ ಕಾರ್ತಿಕಮಾಸದಲ್ಲಿ (ಭಾನುವಾರದಂದು) ಮಾತ್ರ ಆಚರಿಸಿದರೆ, ಇನ್ನು ಕೆಲವರು ಕಾರ್ತಿಕ ಹಾಗೂ ಚೈತ್ರಮಾಸಗಳಲ್ಲಿ (ಗುರುವಾರದಂದು) – ಎರಡು ಬಾರಿ ಆಚರಿಸುತ್ತಾರೆ. ಭಾನುವಾರ ಬೆಳಿಗ್ಗೆ ಮಡಿಯಾಗಿ ಮನೆಯ ಎಲ್ಲಾ ಮಹಿಳೆಯರು ಊರ ಹೊರಗಿನ ಒಂದು ನಿರ್ದಿಷ್ಟ ಬಂಡೆಯ ಮೇಲೆ ಹೋಗುತ್ತಾರೆ. ಅಲ್ಲಿ ಸ್ಥಳ ಶುದ್ಧಿ ಮಾಡಿ ಹಿರಿಯಾಕೆ ಕುಂಬಳಕಾಯಿಯನ್ನು ಎತ್ತಿ ಹಾಕಿ ಒಡೆದ ಮೇಲೆ, ಇತರರು ಅದನ್ನು ಹೋಳುಗಳಾಗಿ ಮಾಡುತ್ತಾರೆ. ಅಲ್ಲಿಯೇ ಇರುವ ಒರಳುಕಲ್ಲಿನಲ್ಲಿ ಹೊಸ ಭತ್ತ ಕುಟ್ಟಿ ಅಕ್ಕಿ ಮಾಡುತ್ತಾರೆ. ಹೊಸ ನೀರು ತಂದು, ಹೊಸ ಮಡಕೆಯಲ್ಲಿ ಅನ್ನ ಮಾಡುತ್ತಾರೆ. ಕುಂಬಳಕಾಯಿಗೆ ಉಪ್ಪು, ಖಾರ, ತುಸು ಬೆಲ್ಲ ಹಾಕಿ ಸಾರು ಮಾಡುತ್ತಾರೆ (ಕೆಲವೆಡೆ ಅಕ್ಕಿ ಮತ್ತು ಕುಂಬಳಕಾಯಿ ಒಟ್ಟಾಗಿ ಸೇರಿಸಿ ಅನ್ನ ಮಾಡುತ್ತಾರೆ; ಸಾರು ಮಾಡುವುದಿಲ್ಲ). ಹೊಸ ಅಕ್ಕಿ ಕುಟ್ಟಿ ಆ ಹಸಿ ಹಿಟ್ಟಿನಿಂದ ಒಂಭತ್ತು ಹಣತೆ ಮಾಡುತ್ತಾರೆ. ಬಂಡೆ ಮೇಲೆ ಬಾಳೆಎಲೆ ಹರಡಿ, ಅನ್ನ–ಸಾರಿನ ಎಡೆ ಹಾಕುತ್ತಾರೆ. ಹೊಸದೇವರ ತಟ್ಟೆಯಲ್ಲಿ ಒಂಭತ್ತು ತುಪ್ಪದ ದೀಪ, ರಾಗಿ ತೆನೆ, ನವಣೆ ತೆನೆ, ಹುರುಳಿಗಿಡ, ಅಗಸೆಸೊಪ್ಪು, ಇವುಗಳನ್ನೆಲ್ಲಾ ಇಟ್ಟು, ಆ ತಟ್ಟೆಯನ್ನು ತಲೆಯ ಮೇಲೆ ಹೊತ್ತು, ಪೂರ್ವಾಭಿಮುಖವಾಗಿ ನಿಂತಾಗ, ಆಕೆಯ ಕೈಯಲ್ಲಿ ಹಿಡಿದ ವೀಳ್ಯದ ಎಲೆಯ ಮೇಲೆ ಇನ್ನೊಬ್ಬಾಕೆ ನೀರು ಹನಿಸುತ್ತಾರೆ. ಆಗ ಆಕೆ ಆ ನೀರನ್ನು ತನ್ನ ಎರಡೂ ಪಕ್ಕ ಒಮ್ಮೊಮ್ಮೆ ಹಾಗೂ ಮೂರನೇ ಬಾರಿಗೆ ಮುಂದಕ್ಕೆ ಎಸೆಯುತ್ತಾರೆ. ಇದಾದ ಬಳಿಕ ಇನ್ನೊಬ್ಬಾಕೆ ಆ ತಟ್ಟೆಗೆ ನಮಸ್ಕರಿಸಿ, ತನ್ನ ತಲೆಯ ಮೇಲೆ ಇಟ್ಟುಕೊಂಡು ತಾನೂ ಹೀಗೇ ಮುಕ್ಕು (ನಮಸ್ಕರಿಸು)ತ್ತಾಳೆ. ಹೀಗೆ, ಹಿರಿಯಾಕೆಯಿಂದ ಕಿರಿಯಾಕೆಯವರೆಗೆ ಕ್ರಮವಾಗಿ ಮುಕ್ಕಿದ್ದು ಆದಮೇಲೆ, ಎಲ್ಲರೂ ಆ ಸ್ಥಳದಿಂದ ಸ್ವಲ್ಪ ಪಕ್ಕ ಬರುತ್ತಾರೆ. ಕಾಗೆ ಬಂದು ಎಡೆ ತಿಂದ ಮೇಲೆ, ತಾವೆಲ್ಲರೂ ಪ್ರಸಾದದ ರೀತಿ ಊಟ ಮಾಡಿ ಮನೆಗೆ ಹಿಂದಿರುಗುತ್ತಾರೆ. ಕೆಲವರು ಈ ಹಬ್ಬವನ್ನು ತಮ್ಮ ಮನೆಯಲ್ಲಿಯೇ ಮಾಡುತ್ತಾರೆ.

**ಕುರುಬರ ದ್ಯಾವರ:** ಜಿಲ್ಲೆಯ ಕುರುಬರಲ್ಲಿ ಸಿದ್ದೇದೇವರು, ಬೀರೇದೇವರು ಮೊದಲಾದ ಮನೆದೇವರು ಇವೆ. ಆಯಾ ಮನೆದೇವರಿಗೆ ಸಂಬಂಧಿಸಿದ ಒಕ್ಕಲಿನವರೆಲ್ಲರೂ ಐದು ಅಥವಾ ಒಂಭತ್ತು ವರ್ಷಗಳಿಗೆ ಒಮ್ಮೆ ತಮ್ಮ ಮನೆದೇವರು ಇರುವ ಊರಿಗೇ ಹೋಗಿ ವಿಶೇಷ ಪೂಜೆ ಮಾಡಿಕೊಂಡು ಬರುತ್ತಾರೆ. ಅದರ ಕೆಲವೊಂದು ಕ್ರಮ ವಿಶೇಷಗಳನ್ನು ಇಲ್ಲಿ ಮಾದರಿಗಾಗಿ ಗಮನಿಸಬಹುದು: ಆಯಾ ಮನೆತನದ ಎಲ್ಲರೂ ದೇವರಿಗೆ ಹೋಗುತ್ತಾರೆ. ದೇವರಿರುವ ಊರಲ್ಲಿ ಒಂದೊಂದು ಮನೆತನದ ಗುಂಪು ಯಾರದಾದರೂ ಒಂದೊಂದು ಮನೆಯಲ್ಲಿ ತಾತ್ಕಾಲಿಕ ಬಿಡಾರ ಹೂಡುತ್ತದೆ. ಮನೆತನದ ಹಿರಿಯ ಹೋಗಿ ಕುಲಮುಖ್ಯಸ್ಥರು ಅದಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ತಮ್ಮ ಹೆಸರು ನೋಂದಾಯಿಸುತ್ತಾರೆ. ಕಟ್ಟೆಮನೆಗೆ ನೀಡಬೇಕಾದ ವಾರ್ಷಿಕ ಶುಲ್ಕ ಇತ್ಯಾದಿ ಅಲ್ಲಿ ಸಂದಾಯವಾಗುತ್ತವೆ. ಬಳಿಕ, ವ್ಯವಸ್ಥಾಪಕರು ಹೇಳಿದ ಸಮಯದಲ್ಲಿ ಮಾತ್ರವೇ ಆಯಾ ಮನೆತನದವರು ಒಟ್ಟಾಗಿ ಹೋಗಿ ಗುಡಿಯ ಬಳಿ ತಮ್ಮ ಪೂಜಾಕಾರ್ಯಗಳನ್ನು ಮುಗಿಸಿಕೊಳ್ಳಬೇಕಾಗುತ್ತದೆ. ರಾತ್ರಿ ೧೨ ಗಂಟೆಗೆ ಪೂಜೆ ಆಗುತ್ತದೆ. ಮಾರನೆಯ ಬೆಳಿಗ್ಗೆ ದೇವರು ಎತ್ತಿಕೊಂಡು ಊರಾಚೆಯ ಕೆಲವು ನಿರ್ದಿಷ್ಟ ಸ್ಥಳಗಳಿಗೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಆಗ ಈರಗಾರರ ತಲೆಮೇಲೆ ಕಾಯಿ ಒಡೆಯುವುದು ಇತ್ಯಾದಿ ನಡೆಯುತ್ತದೆ. ಮಾರನೆಯ ದಿನ ಮಕ್ಕಳ ತಲೆ ಮೇಲೆ ಹೂ ಇಡಿಸಿ, ಸೋದರ ಮಾವ ಸಾಂಕೇತಿಕವಾಗಿ ಕತ್ತರಿಸಿದ ತಲೆಗೂದಲನ್ನು ಪೂಜಾರಿಗೆ ಕೊಡುತ್ತಾರೆ. ಈ ಶಾಸ್ತ್ರ ನಡೆಯದ ಹೊರತು ಮಕ್ಕಳ ತಲೆಗೂದಲನ್ನು ಕತ್ತರಿಸುವಂತಿಲ್ಲ ಎಂಬ ಕಟ್ಟುಪಾಡು ರೂಢಿಯಲ್ಲಿದೆ. ಕೊನೆಯ ದಿನ ಹಿರಿಯ ಸಂಬಂಧಿಕರು ಕಿರಿಯರಿಗೆ ಹೊಸ ವಸ್ತ್ರ ನೀಡುತ್ತಾರೆ. ಹಸಿ ಅಕ್ಕಿಹಿಟ್ಟಿನಿಂದ ಮಾಡಿದ ದೀಪವನ್ನು ಕಂಚದ ತಟ್ಟೆಯಲ್ಲಿಟ್ಟುಕೊಂಡು ಮನೆತನದ ಎಲ್ಲರೂ ದೇವಸ್ಥಾನದ ಎದುರಿಗೆ ನಿಲ್ಲುತ್ತಾರೆ. ವಿವಾಹಿತರಲ್ಲಿ ಹಿರಿಯರಿಂದ ಪ್ರಾರಂಭಿಸಿ ಕಿರಿಯರವರೆಗೆ ಎಲ್ಲರೂ ಕ್ರಮವಾಗಿ ಆರತಿಯನ್ನು ತಲೆಯ ಮೇಲೆ ಇಟ್ಟುಕೊಂಡು ದೇವರಿಗೆ ನಮಸ್ಕರಿಸುತ್ತಾರೆ. ಗಂಡನ ಬಳಿಕ ಹೆಂಡತಿಯಂತೆ ಸರದಿಯಲ್ಲಿ ಎಲ್ಲರೂ ಕೈಮುಗಿದ ಮೇಲೆ, ದೇವಾಲಯಕ್ಕೆ ಪ್ರದಕ್ಷಿಣೆ ಮಾಡಿ, ಗುಡಿಯಲ್ಲಿ ಆರತಿಗೂ ಪೂಜೆ ಮಾಡಿಸಿ, ತಾವು ಮಂಗಳಾರತಿ, ತೀರ್ಥ ತೆಗೆದುಕೊಂಡಾದ ಮೇಲೆ ಬಿಡಾರಕ್ಕೆ ಹಿಂದಿರುಗುತ್ತಾರೆ. ಅಲ್ಲಿ ಎಲ್ಲರೂ ಆ ಆರತಿ ತಂಬಿಟ್ಟನ್ನು ಪ್ರಸಾದವಾಗಿ ತಿನ್ನುತ್ತಾರೆ. ಅಂದು ಹೊಸ ಸೊಸೆಯ ತೌರಿನವರು ಆಕೆಗೆ ಹೊಸ ವಸ್ತ್ರ, ತಾಳಿ, ಕಾಲುಂಗುರ, ಮಿಂಚುಗಳನ್ನೂ, ಅಳಿಯನಿಗೆ ವಸ್ತ್ರ, ಮಿಂಚುಗಳನ್ನೂ ಕೊಡಬೇಕು. ಅದಾದ ಮೇಲೆಯೇ ಅವರಿಗೆ ದೀಪ ಕೊಡುವುದು.

**ಬಂಡಿದೇವರು:** ಮರಸು ಒಕ್ಕಲಿಗರಲ್ಲಿ ಹೊಸದೇವರ ಒಕ್ಕಲಿನವರು ಸಾಮಾನ್ಯವಾಗಿ ಈ ದೇವರು ಮಾಡುತ್ತಾರೆ. ಕುಲಸ್ಥರೆಲ್ಲಾ ಸೇರಿ, ನಿರ್ಧರಿಸಿದ ದಿನದಂದು ಅಲಂಕರಿಸಿದ ಬಂಡಿಗಳನ್ನು ಕಟ್ಟಿಕೊಂಡು, ಊರಾಚೆ ಹೋಗಿ ದೇವರು ಮಾಡುವ ಸ್ಥಳದಲ್ಲಿ ಅರ್ಧ ವೃತ್ತಾಕಾರವಾಗಿ ನಿಲ್ಲುತ್ತಾರೆ. ಆ ಸ್ಥಳಕ್ಕೆ ಎಲ್ಲರಿಗಿಂತಲೂ ವೇಗವಾಗಿ ಗಾಡಿ ಓಡಿಸಿಕೊಂಡುಬಂದವರಿಗೆ ವ್ಯವಸ್ಥಾಪಕರು ಒಂದು 'ಮರಿ' ನೀಡುವ ಪದ್ಧತಿಯೂ ಇದೆ.

ದೇವರು ಮಾಡುವ ಬಯಲಲ್ಲಿ ಹಸಿರು ಚಪ್ಪರ ಹಾಕಿ ಅದರಲ್ಲಿ 'ಕರಗದಮ್ಮ'ನ್ನು ಪೂಜಿಸುತ್ತಾರೆ. ಎಲ್ಲಾ ಮನೆಗಳಿಂದಲೂ ಸ್ನಾನ–ಮಡಿ ಮಾಡಿ, ಗಂಡ–ಹೆಂಡತಿಯರು ಕಡ್ಡಾಯವಾಗಿ ಬಿಳಿವಸ್ತ್ರಗಳನ್ನೇ ಉಟ್ಟು, ಅಕ್ಕಿ–ಬೆಲ್ಲಗಳ ಗಂಟನ್ನು ತಲೆ ಮೇಲೆ ಹೊತ್ತು ಸಾಲಾಗಿ ನಡೆಮಡಿಯಲ್ಲಿ ಅಲ್ಲಿಗೆ ಬರುತ್ತಾರೆ. "ಹೂವ ಮುಡಿಸಿಕೊಳ್ಳುವ" ಮಕ್ಕಳೂ ಅವರ ಜತೆ ಬರುತ್ತಾರೆ. ಗುಡಿಗೆ ಪ್ರದಕ್ಷಿಣೆ ಮಾಡಿ, ಮುಡಿಗಂಟನ್ನು ದೇವರಿಗೆ ಕೊಡುತ್ತಾರೆ (ಈ ಅಕ್ಕಿ–ಬೆಲ್ಲವನ್ನು ಕೊನೆಗೆ ಮಡಿವಾಳರಿಗೆ ಹಂಚುತ್ತಾರೆ). ಕರಗದಮ್ಮನಿಗೆ ಕರೀಹೋತ ಬಲಿಕೊಟ್ಟು ಪೂಜೆ ಮಾಡುತ್ತಾರೆ. ಊರಿಗೆ ಬಂದು, ಕರಗದಮ್ಮ ದೇವತೆ ಪೂಜಿದ ಸ್ಥಳದಲ್ಲಿಯೂ ಬಲಿಗಳನ್ನು ಕೊಡುತ್ತಾರೆ. ಬಳಿಕ ಮನೆತನದಲ್ಲಿ ಹೊಸದೇವರು ತೆಗೆದುಕೊಂಡವರಲ್ಲಿ ಅತೀ ಹಿರಿಯ ದಂಪತಿಗಳಲ್ಲಿ ಹೆಂಡತಿಯು ಕರಗದಮ್ಮನ ಪ್ರತೀಕವಾದ ಕುಂಭವನ್ನು, ಗಂಡನು ಕಳಸ ಹಾಗೂ ಮೂರು ಕಾಲಿನ ಪೀಠವನ್ನು ಎತ್ತಿಕೊಂಡು, ನಡೆಮಡಿಯಲ್ಲಿ ಹೋಗಿ ದೇವರು ಪೂಜಿದಲ್ಲಿ ಪೂಜೆ ಮಾಡಿಸಿಕೊಂಡು ಹಿಂದಿರುಗಿ, ಹೊಸದೇವರು ಮಾಡುವ ಮನೆಯಲ್ಲಿ ಸಿದ್ಧಪಡಿಸಿದ ಕದಲೆ ಮಂಟಪದಲ್ಲಿ ದೇವರನ್ನು ಇಡುತ್ತಾರೆ. ಅದರ ಎದಿರು ಮಕ್ಕಳನ್ನು ಸಾಲಾಗಿ ಕುಳ್ಳಿರಿಸಿ, ಅವರವರ ಸೋದರಮಾವ ಅವರ ಪಕ್ಕ ಕುಳಿತು ಕೈಕಾಲುಗಳ ಉಗುರು ತೆಗೆವ ಶಾಸ್ತ್ರ ಮಾಡುತ್ತಾನೆ; ಕಿವಿಗೆ ಹೂ ಮುಡಿಸುತ್ತಾನೆ (ಈ ಶಾಸ್ತ್ರ ಆಗದ ಮಕ್ಕಳು ಹೂಮುಡಿಯುವಂತಿಲ್ಲ; ಕ್ಷೌರಮಾಡಿಸಿಕೊಳ್ಳುವಂತಿಲ್ಲ). ಆಗ ಆ ಮಕ್ಕಳಿಗೆ ತಂದೆತಾಯಿಗಳು ಹೊಸವಸ್ತ್ರಗಳನ್ನು ಕೊಡುತ್ತಾರೆ. ಬಳಿಕ ಗೋತ್ರ ಹೇಳಿ, ತೀರ್ಥ ಹಾಕಿದ ಮೇಲೆ ಆ ಮಕ್ಕಳ ಮೂರು ತಲೆಗೂದಲನ್ನು ಕತ್ತರಿಸುತ್ತಾನೆ. ಆಲದ ಚಕ್ಕೆಗಳನ್ನು ಸೇರಿಸಿಕಟ್ಟಿ

ಒಂದು 'ತೆಪ್ಪ'ದ ರೀತಿ ಮಾಡಿ, ಅದರ ಮೇಲೆ ಬಾಳೆ ಎಲೆ ಹರಡಿ, ಮಾವಿನ ಎಲೆ, ಬೇವಿನ ಸೊಪ್ಪು ಹಾಕಿರುತ್ತಾರೆ; ಒಂದು ಪಿಳ್ಳೇರಾಯನನ್ನೂ ಇಟ್ಟಿರುತ್ತಾರೆ. ಅದರ ಮೇಲೆ ಆ ಎಲ್ಲಾ ಮಕ್ಕಳ ಕತ್ತರಿಸಿದ ತಲೆಗೂದಲನ್ನು ಹಾಕುತ್ತಾನೆ (ಮಾರನೆ ದಿನ ಅದನ್ನು ನೀರಿನಲ್ಲಿ ತೇಲಿಬಿಡುತ್ತಾರೆ).

ಆಮೇಲೆ ದಂಪತಿಗಳಲ್ಲಿ ಹೆಂಡತಿಯು ಬಾಳೆಮಂಟಪದಲ್ಲಿ ಇಟ್ಟಿದ್ದ ಕರಗದಮ್ಮನನ್ನು, ಗಂಡನು ಅದರ ಪಕ್ಕ ಇಟ್ಟಿದ್ದ ಕಳಸವನ್ನು ಹೊತ್ತು ಆ ಮಂಟಪಕ್ಕೆ ಪ್ರದಕ್ಷಿಣೆ ಮಾಡಿ, ಅವುಗಳನ್ನು ಕೆಳಗೆ ಇಳಿಸಿ ಕೈ ಮುಗಿಯುತ್ತಾರೆ. ಹೀಗೆ, ಸರದಿಯಲ್ಲಿ ಎಲ್ಲಾ ದಂಪತಿಗಳೂ ಪ್ರದಕ್ಷಿಣೆ ಮಾಡಿ, ನಮಸ್ಕರಿಸುತ್ತಾರೆ. ಎಲ್ಲರದೂ ಮುಗಿದಮೇಲೆ ಕರಗದಮ್ಮನನ್ನು ತೆಗೆದುಕೊಂಡು ಹೋಗಿ, ದೇವರ ಮನೆಯಲ್ಲಿ ಅದಕ್ಕಾಗಿ ಇರುವ ಸ್ಥಳದಲ್ಲಿ ಇಡುತ್ತಾರೆ. ಸಂಜೆ ಮತ್ತೆ ಆರತಿ, ಪೂಜೆ, ರಾತ್ರಿಗೆ ಭಜನೆ ಇತ್ಯಾದಿ ನಡೆಯುತ್ತವೆ.

**ಚಂದ್ರಮ್ಮನ ಮಾಡುವುದು:** ಇತರ ಭಾಗದಲ್ಲಿ ತಿಂಗಳು ಮಾಮನ ಪೂಜೆ ಅಥವಾ ಬೆಳ್ದಿಂಗಳಪ್ಪನ ಪೂಜೆ ಎಂದು ಕರೆಯುವುದನ್ನೇ ಕೋಲಾರ ಭಾಗದಲ್ಲಿ ಚಂದ್ರಮ್ಮನ ಮಾಡುವುದು ಎಂದು ಕರೆಯಲಾಗುತ್ತದೆ. ಇದು ನಿಸರ್ಗದ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಒಂದು ಆಚರಣೆ. ಆಯಾ ಜಾತಿಯ ಮಹಿಳೆಯರು ತಮ್ಮ ಕೇರಿಗಳಲ್ಲಿ ಪ್ರತ್ಯೇಕವಾಗಿ ಆಚರಿಸುವ ಒಂದು 'ಸಾರ್ವತ್ರಿಕ' ಆಚರಣೆಗೆ ನಿದರ್ಶನವಾಗಿಯೂ ಚಂದ್ರಮ್ಮನ ಮಾಡುವ ಆರಾಧನೆಯನ್ನು ಗಮನಿಸಬಹುದು: ಸಾಮಾನ್ಯವಾಗಿ ಮಳೆ ಬಾರದೆ, ಬೆಳೆ ಒಣಗುತ್ತಿರುವಾಗ ಊರಿನ ಆಯಾ ಬೀದಿಯ ಮಹಿಳೆಯರು, ಮಕ್ಕಳು ಈ ಆರಾಧನೆ ನಡೆಸಲು ಮುಂದಾಗುತ್ತಾರೆ. ಗೌರಿಬಿದನೂರು, ಶ್ರೀನಿವಾಸಪುರ ತಾಲೂಕುಗಳ ಕೆಲ ಗ್ರಾಮಗಳಲ್ಲಿ ಕದಿರೆ ಹುಣ್ಣಿಮೆ ಕಾಲದಲ್ಲಿ ಈ ಆಚರಣೆ ಐದರಿಂದ ಹನ್ನೆರಡು ದಿನಗಳವರೆಗೆ ನಡೆದರೆ, ಗುಡಿಬಂಡೆ ಪ್ರದೇಶದಲ್ಲಿ ಒಂಭತ್ತು ದಿನಗಳವರೆಗೆ ನಡೆಯುತ್ತದೆ. ನಿಗದಿಯಾದ ದಿನ ಬೀದಿಯಲ್ಲಿ ಸಾರಿಸಿದ ನೆಲದ ಮೇಲೆ ರಂಗೋಲಿ ಹಿಟ್ಟಿನಿಂದ ಸೂರ್ಯ, ಚಂದ್ರ, ಸರ್ಪ, ಹಸ್ತ ಮೊದಲಾದ ಚಿತ್ರಗಳನ್ನು ಬರೆದು, ನಡುವೆ ಕಳಸ ಹಾಗೂ ಪಿಳ್ಳೇರಾಯನನ್ನೂ, ನಾಲ್ಕು ಮೂಲೆಗೆ ಒಂದೊಂದು ರಾಗಿರೊಟ್ಟಿಯನ್ನೂ ಇಡುತ್ತಾರೆ. ಹಾಡು ಹೇಳಿ, ಪೂಜೆ ಮಾಡಿದ ಮೇಲೆ, ಪಿಳ್ಳೇರಾಯ, ಹೂ ಇತ್ಯಾದಿಗಳನ್ನು ಎತ್ತಿಕೊಂಡು ಬಾವಿ ಬಳಿ ಹೋಗಿ, ಇಟ್ಟು, ಮಳೆ ಬಂತು, ಮಳೆ ಬಂತು ಎಂದು ಕೂಗುತ್ತಾ ಓಡಿ ಬಂದು, ಚಂದ್ರಮ್ಮನ ಮಾಡಿದ ಸ್ಥಳದಲ್ಲಿ ಹೆಣ್ಣುಮಕ್ಕಳು ಜೂಟಾಟ, ಗಿರಿಗಿಟ್ಟೆ ಇತ್ಯಾದಿಗಳನ್ನು, ಗಂಡುಮಕ್ಕಳು ಕಬಡ್ಡಿ, ಕೊಕ್ಕೋ ಮೊದಲಾದುವನ್ನು ಆಡುತ್ತಾರೆ. ಐದನೆಯ ದಿನ ಇಬ್ಬರು ಹುಡುಗರಿಗೆ ಹೆಣ್ಣು–ಗಂಡು ವೇಷ ಹಾಕಿ 'ಮದುವೆ' ಮಾಡುತ್ತಾರೆ. ಚಂದ್ರಮ್ಮನ ಚಿತ್ರದ ನಡುವೆ ಒಂದು ಗುಂಡುಕಲ್ಲು ಇರಿಸಿ, ಅದರ ಮೇಲೆ ಹುಡುಗಿಯರು ತಮ್ಮ ಪಾದಗಳನ್ನು ಒತ್ತಿಕೊಂಡು ತಿರುಗುವಾಗ ಹೆಂಗಸರು ಕಲ್ಲಿನ ಮೇಲೆ ನೀರು ಹುಯ್ಯುತ್ತಾರೆ. ಕೊನೆಯಲ್ಲಿ ಚಂದ್ರಮ್ಮನಿಗೆ ಇಟ್ಟ (ಉಪ್ಪು ಹಾಕದ) ರೊಟ್ಟಿಗಳನ್ನು ಎಲ್ಲರಿಗೂ ಪ್ರಸಾದವಾಗಿ ಹಂಚುತ್ತಾರೆ. ಕೊನೆಗೆ ಕಳಸವನ್ನು ಮನೆಯಲ್ಲಿ ದೇವರ ಬಳಿಯೂ, ಪಿಳ್ಳೇರಾಯನನ್ನು ಬಾವಿ ಬಳಿಯೂ ಇಟ್ಟು ಬಂದು, ಮಕ್ಕಳು ರಂಗೋಲಿ ಮೇಲೆ ನೀರು ಹುಯ್ದು ಗಿರಿಗಿಟ್ಟೆ ಆಡುತ್ತಾರೆ. ಹೀಗೆ ಮಾಡಿದರೆ ಮಳೆ ಬರುತ್ತದೆ ಎಂಬ ಆಶಯ ಅವರದಾಗಿದೆ.

**ಕರಗ:** ಬೆಂಗಳೂರು ಜಿಲ್ಲೆಯ ಹಾಗೆ ಕೋಲಾರ ಜಿಲ್ಲೆಯಲ್ಲಿಯೂ ಕರಗ ಆರಾಧನೆ ವಿಶೇಷವಾಗಿದೆ. ಕರಗ ಶಕ್ತ್ಯುತ್ಸವವು ಜಿಲ್ಲೆಯ ಕೋಲಾರ, ಮುಳಬಾಗಿಲು, ಮಾಲೂರು, ನರಸಾಪುರ, ಬೇತಮಂಗಲ, ಹೋಳೂರು, ವೇಮಗಲ್, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮೊದಲಾದ ಊರುಗಳಲ್ಲಿ ನಡೆಯುತ್ತದೆ. ಧರ್ಮರಾಯನ ಕರಗವಲ್ಲದೆ ದ್ರೌಪತಿ, ಗಂಗಮ್ಮ, ಯಲ್ಲಮ್ಮ ಮತ್ತು ಆಂಜನೇಯ (ಮುಳಬಾಗಿಲು) ಮೊದಲಾದವರ ಕರಗವೂ ಜರುಗುತ್ತವೆ. ಈ ಭಾಗದ ಕರಗ ಆರಾಧನೆಯ ಒಂದು ಮಾದರಿಗಾಗಿ ಮಾಲೂರು ಕರಗದ ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ: ಪದ್ಧತಿಯಂತೆ, ಯುಗಾದಿಯ ಆನಂತರದ ಶುಕ್ರವಾರದಂದು ಸಾಟು ಎಂಬ ವಿಧಿಯ ಮೂಲಕ ಮಾಲೂರಿನ ಕರಗ ಸಂಪ್ರದಾಯವು ಪ್ರಾರಂಭವಾಗುತ್ತದೆ. ಸಾಟು ಪ್ರಾರಂಭವಾದ ಮೇಲೆ ಬರುವ ಎರಡನೆಯ ಬುಧವಾರದಂದು ಧರ್ಮರಾಯನ ಗುಡಿಯಲ್ಲಿ ಧ್ವಜಾರೋಹಣ ನಡೆಯುತ್ತದೆ. ಅಂದು ಕಂಕಣಧಾರಿಗಳಾಗಿ ಕರಗ ದೀಕ್ಷೆ ಪಡೆದವರು ಕರಗ ಆಚರಣೆ ಮುಗಿಯುವವರೆಗೆ ಈ ಗುಡಿಯಲ್ಲಿಯೇ ನೇಮದಿಂದ ಉಳಿಯಬೇಕಾಗುತ್ತದೆ. ಮಾರನೇ ದಿನ ಗುರುವಾರ, ಆಂಜನೇಯ ದೇವಾಲಯದ ಕಲ್ಯಾಣಿಯಲ್ಲಿ ಗಂಗಾಪೂಜೆ ನೆರವೇರಿಸಿದ ಕರಗದ ಪೂಜಾರಿಯು, ನೀರಿನಲ್ಲಿ ಇರಿಸಿದ್ದ ಕುಂಭವನ್ನು ಎತ್ತಿ ಗುಡಿಗೆ ತಂದು ಅಲ್ಲಿ ಹೂವಿನ ಅಲಂಕಾರ ಮಾಡಿಕೊಂಡು, ಮೆರವಣಿಗೆಯಲ್ಲಿ ಧರ್ಮರಾಯನ ಗುಡಿಗೆ ಬರುತ್ತಾರೆ. ಶುಕ್ರವಾರ ಪಟಾಲಮ್ಮನಿಗೆ ತಂಬಿಟ್ಟಿನ ಆರತಿ ದೀಪೋತ್ಸವ ಆಗುತ್ತದೆ. ರಾತ್ರಿ ಸಿಡೀರಣ್ಣನನ್ನು

ಹೊತ್ತು ಕುಣಿಯುತ್ತಾರೆ. ಶನಿವಾರ ಸಂಜೆ ಪಟಾಲಮ್ಮನ ಗುಡಿಯ ಎದುರಿನ ಕಲ್ಲಿನ ಕಂಬಕ್ಕೆ ಕಟ್ಟಿದ ಮರದ ತುಂಡಿನ ಮಧ್ಯಕ್ಕೆ ಆ ಸಿಡೀರಣ್ಣನನ್ನು ಮಾವು, ಬೇವಿನ ಸೊಪ್ಪಿನೊಂದಿಗೆ ಬಂಧಿಸಿಡುತ್ತಾರೆ. ಹರಕೆ ಮಾಡಿಕೊಂಡ ಭಕ್ತರು ಧವನ ಸಿಕ್ಕಿಸಿದ ಬಾಳೆಹಣ್ಣಿನಿಂದ ಈ ಸಿಡೀರಣ್ಣನಿಗೆ ಹೊಡೆಯುತ್ತಾರೆ. ಕೊನೆಗೆ, ಪೂಜಾರಿಯು ಆ ಮೂರ್ತಿಯನ್ನು ಬಿಡಿಸಿಕೊಂಡು ದೇವಾಲಯಕ್ಕೆ ತರುತ್ತಾನೆ. ಈ ವಿಧಿಯ ಹಿಂದಿನ ಆಶಯವು ಅಭ್ಯಾಸ ಯೋಗ್ಯವಾಗಿದೆ. ಆ ರಾತ್ರಿಗೆ ಕರಗದ ಪೂಜಾರಿಗೆ ಬಳೆ, ಸೀರೆ, ಕುಪ್ಪಸ ತೊಡಿಸಿ ಧರ್ಮರಾಯನ ಪೂಜಾರಿಯೊಂದಿಗೆ ವಿವಾಹ ಮಾಡುತ್ತಾರೆ. ಭಾನುವಾರ ರಾತ್ರಿ ಕರಗದ ಪೂಜಾರಿಯು ಪಟಾಲಮ್ಮನ ಗುಡಿಯಿಂದ ಟೋಪಿ ಕರಗ ಹೊತ್ತು ಧರ್ಮರಾಯನ ಗುಡಿಗೆ ಬರುತ್ತಾನೆ. ಮಧ್ಯರಾತ್ರಿಗೆ ಹೂವಿನ ಕರಗವು ನಗರ ಪ್ರದಕ್ಷಿಣೆಗೆ ಹೊರಡುತ್ತದೆ. ಆ ಸಂಚಾರದಲ್ಲಿ ಮಸೀದಿಗಳಿಗೆ ಭೇಟಿ ನೀಡಿ ಪೂಜೆ ಸ್ವೀಕರಿಸಲಾಗುತ್ತದೆ. ಮುಸ್ಲಿಂ ಹಿರಿಯರು ಹೂಮಾಲೆ ಧರಿಸಿ, ಕೈಲಿ ಬೆತ್ತ ಹಿಡಿದು ಕರಗ ರಕ್ಷಣೆ ಮಾಡುತ್ತಾರೆ. ಬೆಳಿಗ್ಗೆ ದೇವಸ್ಥಾನದ ಬಳಿ ಕರಗವು ಕೊಂಡ ಹಾಯುತ್ತದೆ. ಮಂಗಳವಾರ ವಹ್ನಿ ಕುಲಸ್ಥರು ದೀಪಗಳ ಪೂಜೆ ಸಲ್ಲಿಸುತ್ತಾರೆ. ಕೋಲು ವರಸೆ ಮೊದಲಾದ ಕಸರತ್ತು ಪ್ರದರ್ಶನದೊಂದಿಗೆ ಓಕುಳಿ ಉತ್ಸವವೂ ನಡೆದು ಕರಗ ಆರಾಧನೆಗೆ ಮಂಗಳ ಹಾಡಲಾಗುತ್ತದೆ. ಈ ಅವಧಿಯಲ್ಲಿ ಕರಗ ಪೂಜಾರಿಯ ಪತ್ನಿಯು ತಾತ್ಕಾಲಿಕವಾಗಿ ವಿಧವೆಯಂತೆ ಆಗಿ ಮನೆಯಲ್ಲಿರಬೇಕು ಎಂಬ ನಡವಳಿಕೆಯೂ ಇದೆ.

**ಕಾಮನ ಹಬ್ಬ:** ಮಾಲೂರಿನಲ್ಲಿ ಕಾಮನ ಹುಣ್ಣಿಮೆಯಂದು ನಡೆಸುವ ಕಾಮನ ಹಬ್ಬವೂ ಒಂದು ಕಾಲಕ್ಕೆ ಬಹು ಪ್ರಸಿದ್ಧವಾಗಿದ್ದಿತು. ಈ ಸಂದರ್ಭದಲ್ಲಿ ಕಾಮ-ರತಿಯರ ಪ್ರತಿಮೆಗಳನ್ನು ಮಾಡಿ ಪೂಜಿಸುವುದರೊಂದಿಗೆ ಹುಲಿ ವೇಷ, ಲಂಬಾಣಿ ಕುಣಿತ, ಸಂಗೀತ ಕಾರ್ಯಕ್ರಮ ಮೊದಲಾದ ಮನರಂಜನಾ ವಿಶೇಷಗಳನ್ನೂ ಏರ್ಪಡಿಸುತ್ತಾರೆ.

ಇವುಗಳಲ್ಲದೆ ನಟುವರ ವಸಂತೋತ್ಸವ, ಸಿಂಧ್ ಮಾದಿಗರ ತಂಗಡಿದ್ಯಾವ್ರ ಆಚರಣೆ, ಯಾನಾದಿಗರ ಕೂಲುಸಲು ಹಬ್ಬ, ಮೊಂಡರ ಎಲ್ಲಮ್ಮನ ಜಾತ್ರೆ ಮೊದಲಾದುವು ಜಿಲ್ಲೆಯ ಜಾತಿ ವಿಶಿಷ್ಟ ಹಬ್ಬ, ಆಚರಣೆಗಳಾಗಿದ್ದು ಜನಾಂಗಿಕ ಹಾಗೂ ಪ್ರಾದೇಶಿಕ ಸಂಸ್ಕೃತಿಯ ಗ್ರಹಿಕೆಯ ಹಿನ್ನೆಲೆಯಲ್ಲಿ ವಿಶಿಷ್ಟ ಮಾದರಿಗಳಾಗಿ ಗಮನಸೆಳೆಯುತ್ತವೆ.

## ಕ್ರೈಸ್ತರ ಹಬ್ಬಗಳು

ಕ್ರೈಸ್ತರು ವರ್ಷವಿಡೀ ಹಲವಾರು ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಸಕಲ ಆತ್ಮಗಳ ಹಬ್ಬ (All souls day), ಸಕಲ ಸಂತರ ಹಬ್ಬ (All saints day), ಹೊಸ ವರ್ಷಾದಿಯ ಹಬ್ಬ (New year day) ಮೊದಲಾದ ಹಲವು ಹಬ್ಬಗಳು ಇದ್ದರೂ ಮೋಕ್ಷಾರೋಹಣ (Ascension), ದಿವ್ಯ ಸತ್ಪ್ರಸಾದದ ಹಬ್ಬ (Corpus christi), ಮರಿಯಮ್ಮನ ಸ್ವರ್ಗಾರೋಹಣ ಹಬ್ಬ (Assumption of Mary), ಈಸ್ಟರ್ ಹಾಗೂ ಕ್ರಿಸ್‌ಮಸ್‌ಗಳು ತಪ್ಪದೇ ಆಚರಿಸುವ ಪ್ರಮುಖ ಹಬ್ಬಗಳಾಗಿವೆ. 'ಕ್ರಿಸ್‌ಮಸ್' ಕ್ರೈಸ್ಟ್-ಮಾಸ್ ಅಥವಾ ಎಕ್ಸ್‌ಮಸ್ (X' mas) ಎಂಬುದರ ಸಂಕ್ಷಿಪ್ತರೂಪ. ಗ್ರೀಕ್ ಭಾಷೆಯಲ್ಲಿ ಎಕ್ಸ್ ಎಂಬುದು ಕ್ರಿಸ್ತನ ಹೆಸರಿನ ಮೊದಲ ಅಕ್ಷರವಾಗಿದೆ. ಕ್ರಿಸ್ತನ ಜನನದ ಹಬ್ಬವಾದುದರಿಂದ ಕನ್ನಡ ಕ್ರಿಶ್ಚಿಯನ್ನರು ಇದನ್ನು ಕ್ರಿಸ್ತ ಜಯಂತಿ ಎಂದೂ ಕರೆಯುತ್ತಾರೆ. ಇದನ್ನು ಭಕ್ತಿ-ಸಂಭ್ರಮಗಳಿಂದ ಒಂದು ವಾರದವರೆಗೂ ಆಚರಿಸುತ್ತಾರೆ. ಆಗಸ್ಟ್ ೧೫ ಅನ್ನು ಮಾತೆ ಮರಿಯಮ್ಮನ ಸ್ವರ್ಗಾರೋಹಣ ದಿನವನ್ನಾಗಿ ಕನ್ನಡ ಕ್ರೈಸ್ತರು ಆಚರಿಸುತ್ತಾರೆ. ಅಂದು ಚರ್ಚ್‌ಗಳಲ್ಲಿ ವಿಶೇಷವಾದ ಆರಾಧನೆಗಳು ನಡೆಯುತ್ತವೆ. ಯೇಸುವು ಶಿಲುಬೆಗೇರುವ ಹಿಂದಿನ ರಾತ್ರಿ ತನ್ನ ಶಿಷ್ಯರೊಂದಿಗೆ ನಡೆಸಿದ ಕೊನೆಯ ಭೋಜನದ ಸಂದರ್ಭದಲ್ಲಿ ರೊಟ್ಟಿ ಹಾಗೂ ದ್ರಾಕ್ಷಾರಸವನ್ನು ತನ್ನ ಶರೀರ ಹಾಗೂ ರಕ್ತವನ್ನಾಗಿ ಮಾರ್ಪಡಿಸಿ ನೀಡಿದನೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಆ ರೊಟ್ಟಿ ಹಾಗೂ ದ್ರಾಕ್ಷಾರಸಗಳನ್ನು ದಿವ್ಯ ಸತ್ಪ್ರಸಾದವೆಂದೂ ಭಾವಿಸಿ ಕೊಂಡಾಡುವುದೇ ಪರಮ ಪ್ರಸಾದದ ಹಬ್ಬ. ಆ ಆರಾಧನೆಯಲ್ಲಿ ಪರಮ ಪ್ರಸಾದ ಇರುವ ಪ್ರಭಾವಳಿಯನ್ನು ಮೆರವಣಿಗೆಯಲ್ಲಿ ಚರ್ಚಿಗೆ ತರುವ ಕಾರ್ಯನಡೆಯುತ್ತದೆ. ಹೀಗೆ ಒಂದೊಂದು ಹಬ್ಬಕ್ಕೂ ಒಂದೊಂದು ಹಿನ್ನೆಲೆಯನ್ನು ಅವರು ಗುರುತಿಸಿಕೊಂಡಿದ್ದಾರೆ.

## ಮುಸ್ಲಿಂ ಹಬ್ಬಗಳು

ರಾಜ್ಯದ ಇತರ ಜಿಲ್ಲೆಗಳಲ್ಲಿ ಮುಸ್ಲಿಮರು ಆಚರಿಸುವಂತಹ ಹಬ್ಬಗಳನ್ನು ಕೋಲಾರ ಜಿಲ್ಲೆಯ ಮುಸ್ಲಿಮರೂ ಆಯಾ ಕಾಲಕ್ಕೆ ಆಚರಿಸುತ್ತಾರೆ. ಇವರ ಹಬ್ಬಗಳಲ್ಲಿ ಈದ್-ಉಲ್-ಫಿತರ್ ಅಥವಾ ರಂಜಾನ್, ಈದ್-ಉಲ್-ಜುಹಾ ಅಥವಾ ಬಕ್ರೀದ್,

ಈದೇಮೀಲಾದುನ್ನಬಿ (ಈದ್ ಮಿಲಾದ್), ಮೊಹರಂ ಮೊದಲಾದುವು ಬಹುಮುಖ್ಯವಾದವುಗಳಾಗಿವೆ. ಇವುಗಳಲ್ಲಿ ಈದ್ ಮಿಲಾದ್ ಪ್ರವಾದಿ ಮೊಹಮದ್ ಪೈಗಂಬರರ ಜನ್ಮದಿನವಾಗಿ ಆಚರಣೆಯಾಗುತ್ತದೆ. ಈ ಹಬ್ಬಗಳಲ್ಲಿ ಎಲ್ಲಾ ಮುಸ್ಲಿಮರು ಈದ್ ಮೈದಾನಕ್ಕೆ ಹೋಗಿ ಸಾಮೂಹಿಕವಾಗಿ ನಮಾಜ್ ಮಾಡುತ್ತಾರೆ. ರಂಜಾನ್‌ನಲ್ಲಿ ಉಪವಾಸ, ಬಡಬಗ್ಗರಿಗೆ ದಾನ ಮಾಡುವುದನ್ನು ಎಲ್ಲಾ ಸಂಪ್ರದಾಯಸ್ಥ ಮುಸ್ಲಿಮರೂ ತಪ್ಪದೇ ಆಚರಿಸುತ್ತಾರೆ.

**ಮೊಹರಂ ಹಬ್ಬ:** ಈ ಹಬ್ಬವನ್ನು ಬಾಬಯ್ಯನ ಜಲ್ದಿ ಅಥವಾ ಹಬ್ಬ ಎಂದೂ ಕರೆಯಲಾಗುತ್ತದೆ. ಈ ಹಬ್ಬದ ಅಂಗವಾಗಿ ಒಂಬತ್ತು ದಿನ ಮೊದಲು ಗುದ್ದಲಿ ಹಾಕುತ್ತಾರೆ. ಅಂದರೆ ಅಲಾವ (ಕೊಂಡ)ದ ಸ್ಥಳದಲ್ಲಿ ಸ್ವಲ್ಪ ಅಗೆಯುತ್ತಾರೆ. ಮೂರನೇ ದಿನಕ್ಕೆ ಗುಂಡಿ ತೋಡುತ್ತಾರೆ. ನಾಲ್ಕನೇ ದಿನ ದೇವರ ಸಾಮಗ್ರಿಗಳನ್ನು 'ಗುಡಿ'ಯಲ್ಲಿಡುತ್ತಾರೆ. ಐದನೇ ದಿನ ನಿಸಾನೆಯೊಂದಿಗೆ ಊರಲ್ಲಿ ಮೆರವಣಿಗೆ ಹೋಗುತ್ತಾರೆ. ಹಿಂದೂಗಳು ಆ ನಿಸಾನೆಗೆ ಪೂಜೆ ಮಾಡಿ ಕಾಣಿಕೆ ಕೊಡುತ್ತಾರೆ. ಅದರ ಹಿಂದೆ ಮಜೀನು ಕುಣಿತ ನಡೆಯುತ್ತದೆ. ಎಂಟನೇ ದಿನ ಕೊಂಡ ಹಾಕುತ್ತಾರೆ. ಆ ರಾತ್ರಿಗೆ ಹುಲಿ, ರಾವಣ, ಪಾಳೇಗಾರ, ರಾಮ, ಲಕ್ಷ್ಮಣ, ಸೀತೆ, ಜೋಕರ್, ಕರಗ, ಕೀಲು ಕುದುರೆ, ಕಳ್ಳ ಪೊಲೀಸ್ ಹೀಗೆ ವಿವಿಧ ಬಗೆಯ ವೇಷ ಹಾಕಿದವರು ಕೊಂಡದ ಸುತ್ತ ಕುಣಿತ ಮಾಡುತ್ತಾರೆ. ಬೆಳಗಿನ ಜಾವಕ್ಕೆ ಕೊಂಡ (ಕೆಂಡ) ಎರಚುವ ಆಚರಣೆಯಾಗುತ್ತದೆ. ಹರಕೆ ಮಾಡಿಕೊಂಡವರು ತಲೆ ಮೇಲೆ ಕೆಂಡ ಸುರಿಸಿಕೊಳ್ಳುತ್ತಾರೆ. ಒಂಬತ್ತನೇ ದಿನ ಮಧ್ಯಾಹ್ನ ಪರಿಷೆ ಸೇರುತ್ತದೆ. ವಿವಿಧ ವೇಷ ಹಾಕಿದವರೊಂದಿಗೆ ಜಲ್ದಿ ನಡೆಯುತ್ತದೆ. ರಾತ್ರಿಗೆ ಕೊಂಡ ಮುಚ್ಚುತ್ತಾರೆ. ಅಲ್ಲಿಂದ ಮೂರು ದಿನಕ್ಕೆ ಕೊನೇ ಶಾಸ್ತ್ರಗಳು ನಡೆಯುತ್ತವೆ. ಹೀಗೆ ಮೊಹರಂ, ಹಿಂದೂ–ಮುಸ್ಲಿಮರು ಇಬ್ಬರೂ ಸೇರಿ ನಡೆಸುವ ಒಂದು ಪ್ರಮುಖ ಮುಸ್ಲಿಂ ಹಬ್ಬವಾಗಿದೆ.

## ಜಾತ್ರೆಗಳು

ಜಾತ್ರೆ ಹಾಗೂ ಪರಿಷೆಗಳು ಗ್ರಾಮೀಣರ ಆರ್ಥಿಕ ಮತ್ತು ಧಾರ್ಮಿಕ ಬದುಕಿನಲ್ಲಿ ಮಹತ್ತ್ವದ ಪಾತ್ರ ವಹಿಸುತ್ತವೆ. ಊರ ಪರಿಷೆಗಳು ಬಂಧು–ಮಿತ್ರರು ಸೇರುವ ಹಬ್ಬದ ವಾತಾವರಣ ನಿರ್ಮಿಸಿದರೆ, ದೊಡ್ಡ ಪ್ರಮಾಣದಲ್ಲಿ ನಡೆಯುವ ಜಾತ್ರೆಗಳು ಪೂಜೆ, ಮನರಂಜನೆಯಲ್ಲದೆ, ರಾಸುಗಳು, ಗೃಹೋಪಯೋಗಿ ವಸ್ತುಗಳ ಕೊಳ್ಳುವಿಕೆ, ಮಾರುವಿಕೆ ಇತ್ಯಾದಿಗಳಿಗೆ ಅನುಕೂಲವಾದ ವಾತಾವರಣವನ್ನು ನಿರ್ಮಿಸಿರುತ್ತವೆ. ಕೋಲಾರ ಜಿಲ್ಲೆಯಲ್ಲಿ ಸಹ ಇಂತಹ ಪರಿಷೆ, ಜಾತ್ರೆಗಳು ಸಾಕಷ್ಟು ಕಂಡುಬರುತ್ತವೆ. ಕೋಲಾರ, ವಕ್ಕಲೇರಿ, ಚಿಕ್ಕತಿರುಪತಿ, ವಿದುರಾಶ್ವತ್ಥ, ಮೇಲೂರು, ನಂದಿ, ವಾನರಾಸಿ, ತೊರ್ನಹಳ್ಳಿ, ಹಿಂಡಗನಾಳಕ್ರಾಸ್, ತಲಕಾಯಲಕೊಂಡ, ಗಡದಿಂ, ಎಲ್ಲೋಡು, ಆವನಿ ಮೊದಲಾದ ಊರುಗಳಲ್ಲಿ ನಡೆಯುವ ಜಾತ್ರೆಗಳಿಗೆ ಸಾವಿರಾರು ಜನ ಸೇರುವುದುಂಟು. ಅಲ್ಲಿನ ರಾಸುಗಳ ವ್ಯಾಪಾರ ವಹಿವಾಟು ಜೋರಾಗಿಯೇ ನಡೆಯುತ್ತದೆ. ಈ ಜಾತ್ರೆಗಳಲ್ಲಿ ನಡೆಯುವ ಹೂವಿನ ಪಲ್ಲಕ್ಕಿಯೂ ವಿಶೇಷ ಆಕರ್ಷಣೆಯಿಂದ ಕೂಡಿರುತ್ತದೆ. ವಕ್ಕಲೇರಿ ಹಾಗೂ ಸುಗಟೂರಿನಲ್ಲಿ ನಡೆಯುವ ರಾವಣ ವಾಹನ ಉತ್ಸವವು ಅಪರೂಪದ್ದಾಗಿದೆ.

ಕ್ರೈಸ್ತರ ಪವಿತ್ರ ಕ್ಷೇತ್ರಗಳಲ್ಲಿ ನಡೆಯುವ ಕ್ರೈಸ್ತ ಜಾತ್ರೆಗಳಲ್ಲಿ ಕ್ರೈಸ್ತ ಮತೀಯರು ಸಹಜವಾಗಿಯೇ ಅಧಿಕ ಸಂಖ್ಯೆಯಲ್ಲಿ ಸೇರುತ್ತಾರೆ. ಇವುಗಳನ್ನು ಚರ್ಚು ಹಬ್ಬ (Parish Feast) ಎಂದೂ ಕರೆಯುತ್ತಾರೆ. ಇವು ಬಹುಮಟ್ಟಿಗೆ ವಿಶೇಷ ಉತ್ಸವಗಳಂತಿರುತ್ತವೆ. ಆ ಸಂದರ್ಭದಲ್ಲಿ ಹೂವಿನ ತೇರಿನಲ್ಲಿ ಕ್ರಿಸ್ತನ ಅಥವಾ ಸಂತರ ಪ್ರತಿಮೆ ಇರಿಸಿ ಮೆರವಣಿಗೆ ಮಾಡುತ್ತಾರೆ. ಈ ತೇರುಗಳು ಹಿಂದೂ ದೇವತೆಗಳ ರಥಗಳಂತೆ ಇರದೆ ನಾಲ್ಕು ಜನ ಹೆಗಲ ಮೇಲೆ ಹೊರಲು ಸಾಧ್ಯವಾಗುವ ಮಂಟಪಗಳಂತಿರುತ್ತವೆ. ಆ ಮಂಟಪಗಳನ್ನು ಬಾಳೆಪಟ್ಟೆ, ಸುನಾರಿ, ಬಣ್ಣದ ಕಾಗದ, ಹೂವು, ವಿದ್ಯುತ್ ದೀಪಮಾಲೆ ಮೊದಲಾದವುಗಳಿಂದ ಅಲಂಕರಿಸಿರುತ್ತಾರೆ. ಈ ತೇರುಗಳು ಬಂದಾಗ ಕ್ರೈಸ್ತ ತಾಯಂದಿರು ತಮ್ಮ ಎಳೆಯ ಮಕ್ಕಳನ್ನು ತೇರಿನಲ್ಲಿನ ಪ್ರತಿಮೆಗಳಿಗೆ ನಿವಾಳಿಸಿಕೊಡುವಂತೆ ಕೇಳುವ ನಡವಳಿಕೆಗಳೂ ಇವೆ. ಹೀಗೆಯೇ, ಮುಸ್ಲಿಮರ ಧಾರ್ಮಿಕ ಸ್ಥಳಗಳಲ್ಲಿ ವಾರ್ಷಿಕವಾಗಿ ನಡೆಯುವ ಉರುಸ್‌ಗಳು ಜಾತ್ರೆಗಳಂತೆಯೇ ವಿಶೇಷ ರೀತಿಯಲ್ಲಿ ನಡೆಯುತ್ತವೆ. ಜಿಲ್ಲೆಯಲ್ಲಿ ನಡೆಯುವ ಕೆಲವು ಪ್ರಮುಖ ಜಾತ್ರೆಗಳು ಹಾಗೂ ಉರುಸ್‌ಗಳ ವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ:

| ದೇವರು/ ಸಂತರ ಹೆಸರು | ಜಾತ್ರೆ/ಉರುಸ್ ನಡೆಯುವ ಸ್ಥಳ | ತಿಂಗಳು | ಅವಧಿ | ಜಾತ್ರೆಗೆ ಸೇರುವ ಅಂದಾಜು ಜನಸಂಖ್ಯೆ | ದನದ ಜಾತ್ರೆ |
|---|---|---|---|---|---|
| **ಕೋಲಾರ ತಾ** | | | | | |
| ಶ್ರೀಪಥೇಶ್ವರ/ಭೈರವೇಶ್ವರ | ಸೀತಿ | ಮಾರ್ಚ್–ಏಪ್ರಿಲ್ | ೬ ದಿನ | ೫೦,೦೦೦ | |
| ಮಾರ್ಕಂಡೇಶ್ವರ | ವಕ್ಕಲೇರಿ | ಫೆಬ್ರವರಿ | – ,, – | ೧೦,೦೦೦ | |
| ದರ್ಗಾ ಮೊಹಲ್ | ಕೋಲಾರ ಪಟ್ಟಣ | ಮಾರ್ಚ್–ಏಪ್ರಿಲ್ | ೩ ದಿನ | ೧೦,೦೦೦ | |
| ಫುಲ್ ಷಾ ಮೊಹಲ್ | ಕೋಲಾರ ಪಟ್ಟಣ | –,,– | – ,, – | ೨೦,೦೦೦ | |
| ಕಾಕಿ ಷಾ ಮೊಹಲ್ | – ,, – | –,,– | – ,, – | ೨೦,೦೦೦ | |
| ಹುಸೇನಿ ಮಕಾನ್ | – ,, – | –,,– | – ,, – | ೫೦,೦೦೦ | |
| ಸೈಯದ್ ಷಾ ವಲ್ಲಿ | ಅರಳೇಪೇಟೆ | –,,– | ೨ ದಿನ | ೨,೦೦೦ | |
| ಚಮನ್ ಷಾ ವಲ್ಲಿ | ಉಪ್ಪುಕುಂಟೆ | –,,– | – ,, – | ೭,೦೦೦ | |
| ಹುನ್ ಮಾನ್ ಷಾ ವಲ್ಲಿ | ಅಂತರಗಂಗೆ ಬೆಟ್ಟ | –,,– | – ,, – | ೫,೦೦೦ | |
| ಧರ್ಮರಾಯ ಕರಗ | ಕಠಾರಿಪಾಳ್ಯ | ಮಾರ್ಚ್ | ೪ ದಿನ | ೩೦,೦೦೦ | |
| – ,, – | ಕಾರಂಜಿಕಟ್ಟೆ | ಮಾರ್ಚ್ | – ,, – | ೩೫,೦೦೦ | |
| – ,, – | ಪೇಟೆಚಾಮನಹಳ್ಳಿ | ಜೂನ್ | – ,, – | ೧೫,೦೦೦ | |
| – ,, – | ಹೋಳೂರು | ಜೂನ್ | – ,, – | ೨೦,೦೦೦ | |
| – ,, – | ನರಸಾಪುರ | ಮಾರ್ಚ್ | – ,, – | ೧೫,೦೦೦ | |
| – ,, – | ವೇಮಗಲ್ | ಮಾರ್ಚ್ | – ,, – | ೩೦,೦೦೦ | |
| ಈರ್ಲುಬುಸಪ್ಪ (ಇರ್ಲಪ್ಪ) | ವಾನರಾಸಿ | ಮಾರ್ಚ್–ಏಪ್ರಿಲ್ | | | ಇದೆ |
| **ಗುಡಿಬಂಡೆ ತಾ.** | | | | | |
| ಅಶ್ವತ್ಥ | ಗುಡಿಬಂಡೆ ಗ್ರಾಮಾಂತರ | ಮಾರ್ಚ್–ಏಪ್ರಿಲ್ | ೩ ದಿನ | ೧೦,೦೦೦ | – |
| ಎಡಗರ ಅಕ್ಕಮ್ಮ | ಎ.ಕೆ.ಕಾಲೋನಿ, ಗುಡಿಬಂಡೆ | ಜೂನ್ | ೧ ದಿನ | ೮,೦೦೦ | – |
| ಹುಸೇನ್ ಸಾಬ್ ದರ್ಗಾ ಉರುಸ್ | ನಿಚ್ಚಣಬಂಡಹಳ್ಳಿ | ಏಪ್ರಿಲ್ | – ,, – | ೨೫,೦೦೦ | – |
| ವೆಂಕಟರಮಣ | ಗುಡಿಬಂಡೆ | ಕಾರ್ತಿಕ ಶನಿವಾರ | – ,, – | ೧೦,೦೦೦ | – |
| ಆದಿನಾರಾಯಣ | ಎಲ್ಲೋಡು | ಫೆಬ್ರವರಿ | ೧೪ ದಿನ | ೧೫,೦೦೦ | – |
| ಚಂದ್ರಮೌಳೇಶ್ವರ | ಸೋಮೇನಹಳ್ಳಿ | ಫೆಬ್ರವರಿ | ೨ ದಿನ | ೨೦೦ | – |
| ವೆಂಕಟರಮಣ | ಸೋಮೇನಹಳ್ಳಿ | ಏಪ್ರಿಲ್ | ೧ ದಿನ | ೫೦೦ | – |
| ಗಂಗಮ್ಮ | ಸೋಮೇನಹಳ್ಳಿ | ಮಾರ್ಚ್ | – ,, – | ೧೦೦೦ | – |

| ದೇವರು/ ಸಂತರ ಹೆಸರು | ಜಾತ್ರೆ/ಉರುಸ್ ನಡೆಯುವ ಸ್ಥಳ | ತಿಂಗಳು | ಅವಧಿ | ಜಾತ್ರೆಗೆ ಸೇರುವ ಅಂದಾಜು ಜನಸಂಖ್ಯೆ | ದನದ ಜಾತ್ರೆ |
|---|---|---|---|---|---|
| **ಗೌರಿಬಿದನೂರು ತಾ.** | | | | | |
| ವಿಧುರಾಶ್ವತ್ಥ ನಾರಾಯಣ | ವಿಧುರಾಶ್ವತ್ಥ | ಏಪ್ರಿಲ್ | ೧೫ ದಿನ | ೭೫,೦೦೦ | ಇದೆ |
| ಚನ್ನಸೋಮೇಶ್ವರ | ಅಲಕಾಪುರ | ಜನವರಿ | ೧೦ ದಿನ | ೫೦,೦೦೦ | ಇದೆ |
| ಗಂಗ ಭಾಗೀರಥಿ | ಮುದಗಾನಕುಂಟೆ | ಪ್ರತಿ ಸೋಮವಾರ | ೧ ದಿನ | ೫,೦೦೦ | – |
| ನ್ಯಾಮತ್‌ಖೀ ದರ್ಗಾ ಉರುಸ್ | ಹೀರೇಬಿದನೂರು | ನವೆಂಬರ್ | ೩ ದಿನ | ೫,೦೦೦ | ಇಲ್ಲ |
| **ಚಿಕ್ಕಬಳ್ಳಾಪುರ ತಾ.** | | | | | |
| ಭೋಗನಂದೀಶ್ವರ | ನಂದಿ | ಫೆಬ್ರವರಿ | ೧ವಾರ | ೪೫ ಸಾವಿರ | ಇದೆ |
| ಸುಬ್ರಹ್ಮಣ್ಯ | ಚಿತ್ರಾವತಿ | ಜನವರಿ | ೫ ದಿನ | ೮೦೦೦ | ಇದೆ |
| ಜಾಲಾರಿ ಲಕ್ಷ್ಮೀನರಸಿಂಹ | ಆವಲಗುರ್ಕಿ | ಮಾರ್ಚ್ | ೨ ದಿನ | ೪೦೦೦ | ಇಲ್ಲ |
| ರಂಗನಾಥ | ರಂಗಸ್ಥಳ | ಡಿಸೆಂಬರ್ | ೨ ದಿನ | ೧೦೦೦ | – „ – |
| ಕಾಶಿವಿಶ್ವನಾಥ (ರಥೋತ್ಸವ) ಹಾಗೂ ವೀರಬ್ರಹ್ಮಯ್ಯ (ಆರಾಧನೆ) | ಕಳವಾರ | ಅಕ್ಟೋಬರ್ | ೨ ದಿನ | ೫೦೦೦ | – „ – |
| ಉರುಸ್ | ದರ್ಗಾಮೊಹಲ್ಲಾ ಚಿಕ್ಕಬಳ್ಳಾಪುರ | ನವೆಂಬರ್ | ೩ ದಿನ | ೪೦೦೦ | – „ – |
| ಇನಾಯತ್ ಷಾವಲಿ ಬಾಬಾಖಾದ್ರಿ ಉರುಸ್ | ದಿಬ್ಬೂರು | ಏಪ್ರಿಲ್ | ೨ ದಿನ | ೧೦೦೦ | – „ – |
| **ಚಿಂತಾಮಣಿ ತಾ.** | | | | | |
| ವೆಂಕಟರಮಣ | ಕೋನಕುಂಟ್ಲು, | ಏಪ್ರಿಲ್ | ೧೩ ದಿನ | ೨೦,೦೦೦ | ಇದೆ |
| ಆಂಜನೇಯ | ಉಲ್ಲಪ್ಪನಹಳ್ಳಿ | ಮಾರ್ಚ್ | ೬ ದಿನ | ೧೦,೦೦೦ | – |
| ಖಾದ್ರಿ ಲಕ್ಷ್ಮೀನರಸಿಂಹ | ಶಿಂಗರೇಪಲ್ಲಿ, | ಫೆಬ್ರವರಿ–ಮಾರ್ಚ್ | ೮ ದಿನ | ೨೫,೦೦೦ | ಇದೆ |
| ಗಂಗಮ್ಮ | ಬುರುಡಗುಂಟೆ | ಏಪ್ರಿಲ್ | – „– | ೧೫,೦೦೦ | ಇದೆ |
| ಅಮರ ನಾರಾಯಣ | ಕೈವಾರ | ಫೆಬ್ರವರಿ–ಮಾರ್ಚ್ | ೧ ವಾರ | ೫,೦೦೦ | ಇಲ್ಲ |
| ಯೋಗಿ ನಾರೇಯಣ | ಕೈವಾರ | – „ – | ೪ ದಿನ | ೫,೦೦೦ | ಇಲ್ಲ |
| ಫಖೀಯಾ ಷಾ ವಲ್ಲಿ ದರ್ಗಾ | ಮುರುಗಾಮಲ್ಲ | ಜೂನ್ | ೨ ದಿನ | ೨೫,೦೦೦ | – |
| ರೋಷನ್ ಷಾ ವಲ್ಲಿ ದರ್ಗಾ | ಗಾಂಡ್ರಾನಹಳ್ಳಿ | ಜೂನ್ | ೧ ದಿನ | ೨,೦೦೦ | – |
| **ಬಾಗೇಪಲ್ಲಿ ತಾ.** | | | | | |
| ಗಡಿದಿಂ ವೆಂಕಟರಮಣ | ದೇವರಗುಡಿಪಲ್ಲಿ | ಏಪ್ರಿಲ್–ಮೇ | ೧೫ ದಿನ | ೨೦೦೦೦ | ಇದೆ |
| ಕೋದಂಡರಾಮೇಶ್ವರ | ಚೇಳೂರು | ಜನವರಿ–ಫೆಬ್ರವರಿ | ೭ ದಿನ | ೧೫,೦೦೦ | ಇದೆ |

| ದೇವರು/ ಸಂತರ ಹೆಸರು | ಜಾತ್ರೆ/ ಉರುಸ್ ನಡೆಯುವ ಸ್ಥಳ | ತಿಂಗಳು | ಅವಧಿ | ಜಾತ್ರೆಗೆ ಸೇರುವ ಅಂದಾಜು ಜನಸಂಖ್ಯೆ | ದನದ ಜಾತ್ರೆ |
|---|---|---|---|---|---|
| ಗರುಡಾದ್ರಿ ಲಕ್ಷ್ಮಿನರಸಿಂಹ | ಮಿಟ್ಟೇಮರಿ | ಫೆಬ್ರವರಿ–ಮಾರ್ಚ್ | ೧೦ ದಿನ | ೧೫೦೦೦ | ಇದೆ |
| ಆಂಜನೇಯ | ಚೇಳೂರು | ಫೆಬ್ರವರಿ | | ೨೦ ಸಾವಿರ | |
| ಕೋದಂಡರಾಮ | ಪೊಲಿನಾಯಕನಹಳ್ಳಿ | ಏಪ್ರಿಲ್ | | ೫ ಸಾವಿರ | |
| **ಬಂಗಾರಪೇಟೆ ತಾ.** | | | | | |
| ಸೋಮೇಶ್ವರ | ತ್ಲಲಪಲ್ಲಿ | ಜನವರಿ | ೮ ದಿನ | ೫೦೦ | ಇಲ್ಲ |
| ವೆಂಕಟರಮಣ | ಗುಟ್ಟಹಳ್ಳಿ | ಫೆಬ್ರವರಿ | – ,, – | ೨೪೦೦೦ | – ,, – |
| ವೆಂಕಟರಮಣ | ಗುಟ್ಟಹಳ್ಳಿ | ಜುಲೈ–ಆಗಸ್ಟ್ | ಶ್ರಾವಣ ಶನಿವಾರ | ೧,೧೫,೦೦೦ | – ,, – |
| ಗಂಗಮ್ಮ | ಪೆದ್ದಪಲ್ಲಿ | ಫೆಬ್ರವರಿ | – ,, – | ೨,೦೦೦ | – ,, – |
| ಚಂದ್ರಮೌಳೇಶ್ವರ | ಬಂಗಾರಪೇಟೆ | ಫೆಬ್ರವರಿ | ೧ ದಿನ | ೧,೦೦೦ | – ,, – |
| ಪ್ರಸನ್ನ ಲಕ್ಷ್ಮೀವೆಂಕಟರಮಣ | ರಾಬರ್ಟ್‌ಸನ್‌ಪೇಟೆ | ಮಾರ್ಚ್ | ೧೨ ದಿನ | ೧೬,೦೦೦ | – ,, – |
| ವೇಣುಗೋಪಾಲ | ಕಮ್ಮಸಂದ್ರ | ಏಪ್ರಿಲ್ | ೮ ದಿನ | ೧,೦೦೦ | – ,, – |
| ಕೋದಂಡರಾಮ | ಬಂಗಾರಪೇಟೆ | ಮೇ | ೧೨ ದಿನ | ೧೪,೦೦೦ | – ,, – |
| ಬ್ಯಾಟರಾಯ | ದೊಡ್ಡೂರು ಕರಪನಹಳ್ಳಿ | ನವೆಂಬರ್–ಡಿಸೆಂಬರ್ | ೮ ದಿನ | ೧೦,೦೦೦ | ಇದೆ |
| ಹಜರತ್‌ಷಂಷುದ್ದೀನ್ ಓಲಿಯಾ ಉರುಸ್ | ಬಂಗಾರಪೇಟೆ | ಡಿಸೆಂಬರ್ | ೩ ದಿನ | ೧೫,೦೦೦ | ಇಲ್ಲ |
| **ಮಾಲೂರು ತಾ.** | | | | | |
| ಧರ್ಮರಾಯ (ಕರಗ), ಪಟಾಲಮ್ಮ ಮುತ್ಯಾಲಮ್ಮ | ಮಾಲೂರು | ಚೈತ್ರ | ೧ ವಾರ | ೨,೦೦,೦೦೦ | – |
| ಪ್ರಸನ್ನ ವೆಂಕಟರಮಣ | ಚಿಕ್ಕತಿರುಪತಿ | ಚೈತ್ರ | ೧೧ ದಿನ | ೨,೦೦,೦೦೦ | – |
| ಸಪ್ಪಲಮ್ಮ / ಭೀಮೇಶ್ವರ | ತೊರ್‍ನಹಳ್ಳಿ | ಪುಷ್ಯ | ೧೦ ದಿನ | ೫೦,೦೦೦ | ಇದೆ |
| ಬಯಲು ಬಸವೇಶ್ವರ | ಸೊಣ್ಣಪ್ಪನಹಟ್ಟಿ | ರಥಸಪ್ತಮಿ | – ,, – | ೧೦,೦೦೦ | ಇದೆ |
| ಆಂಜನೇಯ | ಎಂ. ಉಪ್ಪಾರಹಳ್ಳಿ | ಶ್ರಾವಣ | ೪ ವಾರ | ೧೫,೦೦೦ | – |
| **ಮುಳಬಾಗಿಲು ತಾ.** | | | | | |
| ಸೋಮೇಶ್ವರ | ಸೋಮೇಶ್ವರಪಾಳ್ಯ | ಮೇ | ಎಂಟು ದಿವಸ | ೮,೦೦೦ | ಇದೆ. |
| ಹೈದರ್ ವಲಿ ದರ್ಗಾ ಉರುಸ್ | ಮುಳಬಾಗಿಲು | ಆಗಸ್ಟ್ | ಐದು ದಿವಸ | ೧೫,೦೦೦ | ಇಲ್ಲ. |
| ವಿನಾಯಕ | ಕುರುಡಮಲೆ | ಸೆಪ್ಟೆಂಬರ್ | ಮೂರು ದಿನ | ೧೦,೦೦೦ | ಇಲ್ಲ. |
| ವರದರಾಜ | ಉತ್ತನೂರು | ಫೆಬ್ರುವರಿ | ಒಂದು ದಿನ | ೫,೦೦೦ | ಇಲ್ಲ |
| ಚೌಡೇಶ್ವರಿ | ಮಂಡಿಕಲ್ | ಫೆಬ್ರುವರಿ | ಒಂದು ದಿನ | ೫,೦೦೦ | ಇಲ್ಲ |

| ದೇವರು/ ಸಂತರ ಹೆಸರು | ಜಾತ್ರೆ/ ಉರುಸ್ ನಡೆಯುವ ಸ್ಥಳ | ತಿಂಗಳು | ಅವಧಿ | ಜಾತ್ರೆಗೆ ಸೇರುವ ಅಂದಾಜು ಜನಸಂಖ್ಯೆ | ದನದ ಜಾತ್ರೆ |
|---|---|---|---|---|---|
| ಹಜರತ್ ಸೈಯದ್ ವುಲ್ಲಾ ಉರುಸ್ | ಅಗರ | ಸೆಪ್ಟೆಂಬರ್ | ಆರು ದಿನ | ೧೫೦೦ | ಇಲ್ಲ |
| ಕೋದಂಡರಾಮ | ತಾಯಲೂರು | ಮಾರ್ಚ್ | ಒಂದು ದಿನ | ೧,೦೦೦ | ಇಲ್ಲ |
| ಈಶ್ವರ | ತಾಯಲೂರು | ಮಾರ್ಚ್ | ಒಂದು ದಿನ | ೧,೦೦೦ | ಇಲ್ಲ |
| ಮರಾಕೇಶ ವಲ್ಲಿ ಬಾಬಾ ಉರುಸ್ | ತಾಯಲೂರು | ಆಗಸ್ಟ್ | ಮೂರು ದಿನ | ೫,೦೦೦ | ಇಲ್ಲ |
| ಗಂಗಮ್ಮದೇವಿ ಕರಗ | ತಾಯಲೂರು | ಮೇ | ಎರಡು ದಿನ | ೪,೦೦೦ | ಇಲ್ಲ |
| ಲಕ್ಷ್ಮೀವೆಂಕಟರಮಣ | ದೂಲಪಲ್ಲಿ | ಏಪ್ರಿಲ್ | ಒಂದು ದಿನ | ೪೦೦ | ಇಲ್ಲ |
| ಸಂಗಮೇಶ್ವರ | ಕೋಗಿಲೇರಿ | ಮೇ | ೧೫ ದಿನ | ೫,೦೦೦ | ಇಲ್ಲ |
| ಪ್ರಸನ್ನ ಸೋಮೇಶ್ವರ | ಮಡಿವಾಳ | ಮಾರ್ಚ್ | ೧೧ ದಿನ | ೧,೦೦೦ | ಇಲ್ಲ |
| ರಾಮಲಿಂಗೇಶ್ವರ | ಆವನಿ | ಫೆಬ್ರುವರಿ | ೧೫ ದಿನ | ೫೦,೦೦೦ | ಇದೆ. |
| ಅಂಕಾಳಮ್ಮ | ದೇವರಾಯಸಮುದ್ರ | ಏಪ್ರಿಲ್ | ೧ ದಿನ | ೨,೦೦೦ | ಇಲ್ಲ. |
| ವಿರೂಪಾಕ್ಷ | ವಿರೂಪಾಕ್ಷಿ | ಜನವರಿ/ಫೆಬ್ರುವರಿ | ಒಂದು ದಿನ | ೨,೦೦೦ | ಇಲ್ಲ. |
| ಘಟ್ಟುವೆಂಕಟರಮಣ | ಎಂ. ಚಮಕಲಹಳ್ಳಿ | ಮಾರ್ಚ್ | ೧೦ ದಿವಸ | ೩,೦೦೦ | ಇದೆ. |
| ಕೋದಂಡರಾಮ | ಬೈರಕೂರು | ಏಪ್ರಿಲ್ | ಒಂದು ದಿನ | ೧,೦೦೦ | ಇಲ್ಲ |
| ಪ್ರಸನ್ನ ಸೋಮೇಶ್ವರ | ಬೈರಕೂರು | ಫೆಬ್ರುವರಿ | ಒಂದು ದಿನ | ೫೦೦ | ಇಲ್ಲ. |
| **ಶ್ರೀನಿವಾಸಪುರ ತಾ.** | | | | | |
| ಕೋದಂಡರಾಮ | ಯಲ್ದೂರು | ಏಪ್ರಿಲ್ | ೧೦ ದಿನ | ೨೫೦೦ | ಇದೆ |
| ಲಕ್ಷ್ಮಿವೆಂಕಟರಮಣ | ರೋಣೂರು | ಏಪ್ರಿಲ್ | ೧೦ ದಿನ | ೧,೦೦೦ | ಇದೆ |
| ಗಂಗಮಾಂಬ | ಕೂಳಗುರ್ಕಿ | ಜನವರಿ | ೧೦ ದಿನ | ೫,೦೦೦ | ಇದೆ |
| **ಶಿಡ್ಲಘಟ್ಟ ತಾ.** | | | | | |
| ವೆಂಕಟರಮಣ | ತಲಕಾಯಲಬೆಟ್ಟ | ಜನವರಿ–ಫೆಬ್ರುವರಿ | ೧೨ ದಿನ | ೧೦–೧೫ ಸಾವಿರ | ಇದೆ |
| ರಾಮಲಿಂಗೇಶ್ವರ | ನಲ್ಲರಾಳ್ಳಹಳ್ಳಿ | ಜನವರಿ | ೭ ದಿನ | ೨ ಸಾವಿರ | ಇದೆ |
| ಮಳ್ಳೂರಾಂಬ ಸೋಮೇಶ್ವರ | ದೇವರಮಳ್ಳೂರು | ಡಿಸೆಂಬರ್ | ೭ ದಿನ | ೧೫೦೦ | ಇದೆ |
| ಗಂಗಾದೇವಿ | ಮೇಲೂರು | ಏಪ್ರಿಲ್ | – ,, – | ೫೦೦ | ಇದೆ |
| ಬ್ಯಾಟರಾಯ | ಚಿಕ್ಕದಾಸರಹಳ್ಳಿ | ಏಪ್ರಿಲ್ | ೩ ದಿನ | ೨೦೦೦ | ಇಲ್ಲ |
| ರೈಟ್ ಷಾ ಉರುಸ್ | ಬೆಳ್ಳೂಟ್ಟಿ | ಜೂನ್ | ೧ ದಿನ | ೫೦೦೦ | ಇಲ್ಲ |
| ಆಂಜನೇಯ | ಹೆಚ್.ಕ್ರಾಸ್,ಕುಂಬಿಗಾನಹಳ್ಳಿ | ನವೆಂಬರ್ | ೭ದಿನ | ೩೦೦೦ | ಇದೆ |
| ಪ್ರಸನ್ನ ಗಂಗಾಧರೇಶ್ವರ | ಜಂಗಮಕೋಟೆ | ಏಪ್ರಿಲ್ | ೩ ದಿನ | ೫೦೦ | ಇಲ್ಲ |
| ವೇಣುಗೋಪಾಲ | ಶಿಡ್ಲಘಟ್ಟ | ಜನವರಿ | ೬ ದಿನ | ೨೦೦೦ | ಇಲ್ಲ |